

ಯಾವ ವಿಶ್ವವಿದ್ಯಾಲಯದ ಪದವಿ ಪಡೆಯದಿದ್ದರೂ ಶಿವಳ್ಳಿ ಕೆಂಪೇಗೌಡರು ಅನೇಕ ಪುಸ್ತಕಗಳನ್ನು ಬರೆದಿದ್ದು, ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಗಳಿಸಿದ್ದಾರೆ.

ಇವರ ವಾಹನ ಬೈಸಿಕಲ್. ಊರಿಂದ ಊರಿಗೆ ಸುಸ್ತಾಗುವವರೆಗೆ ಬೈಸಿಕಲ್ ತುಳಿದು ಜನ ಸಾಮಾನ್ಯರಲ್ಲೊಬ್ಬರಾಗಿ ಅವರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾ ಅಪಾರ ಅನುಭವದ ಹಿನ್ನೆಲೆಯಲ್ಲಿ ಕೃತಿಗಳನ್ನು ರಚಿಸಿರುವುದು ಇವರ ವೈಶಿಷ್ಟ್ಯ.

ಶಿವಳ್ಳಿ ಕೆಂಪೇಗೌಡರ ಬರಹ ಸರಳ, ಸುಂದರ ಹಾಗೂ ವಾಸ್ತವಿಕತೆಯಿಂದ ಕೂಡಿರುತ್ತದೆ.


ನಮ್ಮ ಪೂಜ್ಯ ತಂದೆ ದಿ. ಸೀತಾಸುತರವರ ಬಗ್ಗೆ ಕೆಂಪೇಗೌಡರಿಗೆ ಇರುವ ಪ್ರೀತಿ, ಗೌರವ, ಅಭಿಮಾನ ನಮಗೆಲ್ಲಾ ಸಂತೋಷವನ್ನುಂಟು ಮಾಡಿದೆ.

**ಕೆ.ಎಸ್. ದೊರೆಸ್ವಾಮಿ**
ಅಧ್ಯಕ್ಷರು
ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಟ್ರಸ್ಟ್
ವಿದ್ಯಾನಗರ, ಮಂಡ್ಯ.

# ಸೀತಾಸುತ

## ಬದುಕು- ಬರಹ- ಸಾಧನೆ

ಶಿವಳ್ಳಿ ಕೆಂಪೇಗೌಡ



# ಸೀತಾಸುತ

## (ಬದುಕು, ಬರಹ, ಸಾಧನೆ)

ಶಿವಳ್ಳಿ ಕೆಂಪೇಗೌಡ

ಪ್ರಕಾಶಕರು
ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಟ್ರಸ್ಟ್
# 1596, ಶ್ರೀ ರಾಮಕೃಷ್ಣ ನಿಲಯ,
ವಿದ್ಯಾನಗರ, ಮಂಡ್ಯ - 571 401.

*__SITA SUTA__* ***(Kachchigere Siddegowda)*** *- A life history of SITASUTA, Written by Shivalli Kempegowda, Published by Devamma Puttachchi Siddegowda Trust, #1596, Sri Ramakrishna Nilaya, Vidyanagara, Mandya.*

*P. P. : vi + 108*

*First Edition : 2008*

ಮೊದಲ ಮುದ್ರಣ : **2008**

ಪುಟಗಳು : *vi + 108*

ಹಕ್ಕು : ಪ್ರಕಾಶಕರದು

ಬೆಲೆ : **50/-** ರೂಪಾಯಿಗಳು

ಮುದ್ರಣ : ಅವಿನಾಶ್ ಗ್ರಾಫಿಕ್ಸ್
ರೈಲ್ವೆ ಸ್ಟೇಷನ್ ರಸ್ತೆ, 1ನೇ ಕ್ರಾಸ್, ಮಂಡ್ಯ.
☎ : **402143**, ಮೊ : **9845868957**

# ಲೇಖಕರ ನುಡಿ

1980ರ ದಶಕದಲ್ಲಿ ಪ್ರಕಟವಾದ ಸೀತಾಸುತ ಅವರ 'ರಾಮಾಯಣದಲ್ಲಿ ಸ್ತ್ರೀಪಾತ್ರಗಳು' ಹಾಗೂ 'ರಾಮಾಯಣದಲ್ಲಿ ಪುರುಷ ಪಾತ್ರಗಳು' ಮಹಾಕೃತಿಗಳನ್ನು ಅಧ್ಯಯನ ಮಾಡಿದ್ದೆ. ಆದರೆ ಆ ಮೌಲಿಕ ಕೃತಿಗಳನ್ನು ಓದಿ ಪೂರ್ಣವಾಗಿ ಅರ್ಥಮಾಡಿಕೊಳ್ಳುವ ಮೇಧಾಶಕ್ತಿ ನನಗೆ ಆಗಲೂ ಇರಲಿಲ್ಲ; ಈಗಲೂ ಇಲ್ಲ. ಹಿಂದೆ ಹಳ್ಳಿಗಳಲ್ಲಿ ಆಗಾಗ್ಯೆ ಪ್ರದರ್ಶನಗೊಳ್ಳುತ್ತಿದ್ದ 'ಸಂಪೂರ್ಣ ರಾಮಾಯಣ' ಪೌರಾಣಿಕ ನಾಟಕವನ್ನು ನಾನು ಹತ್ತಾರು ಬಾರಿ ನೋಡಿದ್ದೇನೆ. ಆ ನಾಟಕ ನೋಡುವಾಗ ನನ್ನಲ್ಲಿ ಉಂಟಾಗುತ್ತಿದ್ದ ಅಮಿತಾನಂದ ಸೀತಾಸುತರವರ ಕೃತಿಗಳನ್ನು ಓದಿದಾಗಲೂ ಉಂಟಾಯಿತು.

ಸಾಹಿತಿ ದಿಗ್ಗಜ ಸೀತಾಸುತ ಅವರನ್ನು ಎರಡುಸಲ ಮಂಡ್ಯದ ಅವರ ಮನೆಯಲ್ಲಿ ಭೇಟಿ ಮಾಡಿ ಅವರ ಆಶೀರ್ವಾದ ಪಡೆದಿದ್ದೇನೆ. ಅವರು ಪ್ರೀತಿಯಿಂದ ನನಗೆ ನೀಡಿದ 'ಓದೋ ಹುಡುಗ' ಕೃತಿಯನ್ನು ಈಗಲೂ ಜೋಪಾನವಾಗಿ ಇಟ್ಟುಕೊಂಡಿದ್ದೇನೆ.

ಕಳೆದ ವರ್ಷ ಜುಲೈ 14 ರಂದು ಮಂಡ್ಯ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಟ್ರಸ್ಟ್ ವತಿಯಿಂದ ಶತಾಯುಷಿ ಸಾಹಿತಿ ದಿ. ಸೀತಾಸುತ 109ನೇ ವರ್ಷದ ಸಂಸ್ಮರಣೆ ಅಂಗವಾಗಿ ಸೀತಾಸುತ ಹಾಗೂ ಡಾ॥ ವಿ.ಟಿ.ಸುಶೀಲಮ್ಮ ಜಯರಾಮ್ ಹೆಸರಿನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ನಾಡೋಜ ಡಾ॥ ದೇ. ಜವರೇಗೌಡರವರು 'ಸೀತಾಸುತ ಅವರ ಜೀವನ ಚರಿತ್ರೆ ಕುರಿತು ಈವರೆಗೂ ಯಾವುದೇ ಕೃತಿಗಳು ಪ್ರಕಟವಾಗಿಲ್ಲ. ಇದರ ಬಗ್ಗೆ ಕುಟುಂಬವರ್ಗದವರು ಆಸಕ್ತಿ ವಹಿಸಿ ಜೀವನ ಚರಿತ್ರೆ ಕೃತಿಯನ್ನು ಜನರಿಗೆ ತಲುಪಿಸಬೇಕು' ಎಂದು ಸಲಹೆ ನೀಡಿದಾಗ ಸಭಿಕರ ನಡುವೆ ಕುಳಿತಿದ್ದ ನನ್ನ ಮೈ ಮನದಲ್ಲಿ ಮಿಂಚಿನ ಸಂಚಾರವಾಯಿತು. 'ಅಯ್ಯೋ! ಈ ದೇಶಾನೆಲ್ಲ ಸುತ್ತಿ ಒಂದಿಷ್ಟು ಬರೆದೆ. ಕನ್ನಡ ಸಾರಸ್ವತ ಲೋಕದ ಧೀಮಂತ

ಸಾಹಿತಿ ದಿಗ್ಗಜ ಸೀತಾಸುತ ಅವರನ್ನು ಕುರಿತು ನಾನು ನಾಲ್ಕು ಸಾಲು ಬರೆಯಲಿಲ್ಲವಲ್ಲಾ !' ಎಂದು ವ್ಯಥೆಯಾಯಿತು.

ಇದಾದ ಒಂದು ತಿಂಗಳ ನಂತರ ಸೀತಾಸುತರವರ ಸುಪುತ್ರರಾದ ಶ್ರೀ ಕೆ.ಎಸ್. ದೊರೆಸ್ವಾಮಿ, ಶ್ರೀ ಕೆ.ಎಸ್. ಶ್ರೀಕಂಠಸ್ವಾಮಿ ಹಾಗೂ ಡಾ॥ ಕೆ.ಎಸ್. ಜಯರಾಮ್ ಅವರನ್ನು ಭೇಟಿ ಮಾಡಿ ನಾಡೋಜ ಡಾ॥ ದೇ.ಜ.ಗೌರವರ ಸಲಹೆಯನ್ನು ಪ್ರಸ್ತಾಪಿಸಿ ಒಪ್ಪಿಗೆ ನೀಡಿದರೆ ಸೀತಾಸುತರವರ ಬದುಕು, ಬರಹ, ಸಾಧನೆಯನ್ನು ಕುರಿತು ಬರೆಯುತ್ತೇನೆ ಎಂದು ತಿಳಿಸಿದೆ. ತಕ್ಷಣ ಮೂವರು ಅಣ್ಣ ತಮ್ಮಂದಿರು ಸಂತೋಷದಿಂದ ಒಪ್ಪಿಗೆ ನೀಡಿ ಸಹಕರಿಸಿದ್ದರ ಫಲವೇ ಈ ಕೃತಿ.

ಸೀತಾಸುತರವರು ಆಗಾಗ್ಗೆ ಬರೆದಿಟ್ಟಿದ್ದ ಆತ್ಮಕಥನ ರೂಪದ ಹಾಳೆಗಳು ಹಾಗೂ ನ್ಯೂಯಾರ್ಕ್‌ನಲ್ಲಿ ವೈದ್ಯರಾಗಿರುವ ಅವರ ಕಿರಿಯ ಮಗ ಡಾ॥ ಕೆ.ಎಸ್. ಕೃಷ್ಣಪ್ಪನವರಿಗೆ ಬರೆದ ಪತ್ರಗಳನ್ನಾಧರಿಸಿ ಈ ಕೃತಿ ರಚಿಸಿದ್ದೇನೆ. ಈ ಕೃತಿ ರಚನೆಯ ಕಾಲಕ್ಕೆ ಉಪಯುಕ್ತ ಮಾಹಿತಿ ನೀಡಿ ಸಹಕರಿಸಿದ ಸೀತಾಸುತ ರವರ ಸುಪುತ್ರರಾದ ಹಿರಿಯ ವಕೀಲ ಹಾಗೂ ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಕೆ.ಎಸ್. ದೊರೆಸ್ವಾಮಿ, ಹಾಗೂ ಕೆ.ಎಸ್. ಶ್ರೀಕಂಠಸ್ವಾಮಿ, ಡಾ॥ ಕೆ.ಎಸ್. ಜಯರಾಮ್ ಅವರಿಗೆ ನನ್ನ ಕೃತಜ್ಞತೆಗಳು.

ಸೀತಾಸುತರವರ ಚಿರಸ್ಮರಣೆಗಾಗಿ ಬರೆದ ಈ ಕೃತಿಯನ್ನು ಪ್ರಕಟಿಸಿದ ದೇವಮ್ಮ ಪುಟ್ಟಚ್ಚಿಸಿದ್ದೇಗೌಡ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಕೆ.ಎಸ್. ದೊರೆಸ್ವಾಮಿ ಮತ್ತು ಪದಾಧಿಕಾರಿಗಳಾದ ಶ್ರೀ ಕೆ.ಎಸ್. ಶ್ರೀಕಂಠಸ್ವಾಮಿ, ಡಾ॥ ಕೆ.ಎಸ್. ಜಯರಾಮ್ ಅವರಿಗೆ ನನ್ನ ಕೃತಜ್ಞತೆಗಳು.

ಅಕ್ಷರ ಜೋಡಣೆ ಮಾಡಿದ ಅವಿನಾಶ್ ಗ್ರಾಫಿಕ್ಸ್‌ನ ಮಾಲೀಕರಾದ ಎನ್. ನಾಗರಾಜು ಮತ್ತು ಸಿಬ್ಬಂದಿ ವರ್ಗದವರಿಗೂ ಸಹ ನನ್ನ ಕೃತಜ್ಞತೆಗಳು.

15-7-2008 - ಶಿವಳ್ಳಿ ಕೆಂಪೇಗೌಡ

ಶಿವಳ್ಳಿ, ಮಂಡ್ಯ ತಾಲ್ಲೂಕು.





ಶ್ರೀಮತಿ ದೇವಮ್ಮ ಮತ್ತು ಶ್ರೀ ಕಟ್ಟಿಗೆರೆ ಸಿದ್ದೇಗೌಡರು (ಸೀತಾಸುತ)

# ಸೀತಾಸುತ

## ಪೂರ್ವಿಕರು

ಸೀತಾಸುತ ಕಾವ್ಯನಾಮದಿಂದ 'ರಾಮಾಯಣದಲ್ಲಿ ಸ್ತ್ರೀ ಪಾತ್ರಗಳು' 'ರಾಮಾಯಣದಲ್ಲಿ ಪುರುಷ ಪಾತ್ರಗಳು' ಹಾಗೂ ಮತ್ತಿತರ ಮಹತ್ ಕೃತಿಗಳನ್ನು ರಚಿಸಿರುವ ಕಚ್ಚಿಗೆರೆ ಸಿದ್ದೇಗೌಡರು ನಿಜಕ್ಕೂ ಸಾಹಿತ್ಯಲೋಕದ ಧ್ರುವತಾರೆ. ಶತಾಯುಷಿಗಳಾಗಿ ಬದುಕಿದ ಅವರು ಸರ್ಕಾರಿ ನೌಕರಿಯಿಂದ ನಿವೃತ್ತರಾದ ಮೇಲೆ ಹತ್ತಾರು ವರ್ಷಗಳ ಕಾಲ ಅನುಭವಿಸಿದ ಕಷ್ಟ ಕಾರ್ಪಣ್ಯಗಳು ಎದೆಯೊಡೆಯುವಂತಹವು. ಆದರೂ ಸಿದ್ದೇಗೌಡರು ಎದೆಗುಂದದೆ ಬಂದ ಕಷ್ಟಗಳನ್ನೆಲ್ಲಾ ಎದುರಿಸಿ ಪುಟವಿಕ್ಕಿದ ಚಿನ್ನದಂತೆ ಶೋಭಿಸಿದರು. ಮಹಾತ್ಮ ಗಾಂಧೀಜಿ ಹಾಕಿಕೊಟ್ಟ ಸತ್ಯ, ಅಹಿಂಸೆಯ ಪಥದಲ್ಲಿ ಸಾಗುತ್ತಾ ಮಹರ್ಷಿ ವಾಲ್ಮೀಕಿ ರಾಮಾಯಣ ಪಾರಾಯಣ ಮಾಡಿದರು. ರಾಮಾಯಣದ ಆಳವಾದ ಅಧ್ಯಯನ, ಮನನದ ಫಲವಾಗಿ ಅವರು ರಚಿಸಿರುವ 'ರಾಮಾಯಣದಲ್ಲಿ ಸ್ತ್ರೀಪಾತ್ರಗಳು' ಹಾಗೂ 'ರಾಮಾಯಣದಲ್ಲಿ ಪುರುಷಪಾತ್ರಗಳು' ಕೃತಿಗಳು ಅವರು ಕನ್ನಡದ ವಿದ್ವತ್ ಕ್ಷೇತ್ರಕ್ಕೆ ನೀಡಿದ ಮಹತ್ವದ ಕೊಡುಗೆಗಳಾಗಿವೆ.

ಸಿದ್ದೇಗೌಡರ ಹುಟ್ಟೂರು ಮಂಡ್ಯ ತಾಲ್ಲೂಕು ಕಸಬಾಹೋಬಳಿ ಕಚ್ಚಿಗೆರೆ ಗ್ರಾಮ. ಈ ಗ್ರಾಮ ಹನಕೆರೆ ದಾಖ್ಲೆಗೆ ಸೇರಿದೆ. ಸುಮಾರು ಎರಡು ಶತಮಾನಗಳ ಹಿಂದಿನ ಸಂಗತಿ. ಸಿದ್ದೇಗೌಡರ ಮನೆತನದ ಮೂಲ ಪುರುಷ ಅಕ್ಕಿ ನಿಂಗೇಗೌಡರು ಮೈಸೂರಿನಲ್ಲಿ ನೆಲೆಸಿದ್ದರು. ಅಕ್ಕಿ ನಿಂಗೇಗೌಡರು ಮೈಸೂರು ಮಹಾರಾಜರ ದರ್ಬಾರಿಗೆ ಹೋಗುವ ಗೌರವವನ್ನು ಪಡೆದಿದ್ದರು. ಅವರಿಗೆ ಹಗಲು ಹೊತ್ತಿನಲ್ಲಿ ಹುರಿಗೆಜ್ಜೆ ಹೋರಿಯ ಮೇಲೆ ಕುಳಿತು ಹಗಲು ದೀವಟಿಗೆ ಹಿಡಿಸಿಕೊಂಡು ಹೋಗುವ ಖಿಲ್ಲತ್ತು ಇತ್ತು. ಹೈದರ್ ಆಲಿ, ಟಿಪ್ಪುಸುಲ್ತಾನ್ ಅವರ ಆಳ್ವಿಕೆ ಮುಗಿದು ಮುಮ್ಮಡಿ ಕೃಷ್ಣರಾಜ ಒಡೆಯರ್ ರವರು (ಕ್ರಿ.ಶ.1811-1831)ಪಟ್ಟಕ್ಕೆ ಬಂದ ಮೇಲೆ ಸಿದ್ದೇಗೌಡರ ತಾತನ

ತಂದೆ ಸಿದ್ದೇಗೌಡ ಹಾಗೂ ಅವರ ತಮ್ಮ ಲಿಂಗೇಗೌಡರಿಗೆ ಆನೆಗಳನ್ನು ಸಾಕುವ ಅಧಿಕಾರ ಕೊಟ್ಟು ಮಂಡ್ಯದ ಪಕ್ಕದಲ್ಲಿರುವ ಬೀರ್ಗಾನ ಹೊಸಹಳ್ಳಿಯನ್ನು ಕಟ್ಟಿಸಿಕೊಟ್ಟರು. ಕಾಲಚಕ್ರ ಉರುಳಿದಂತೆ ದುರದೃಷ್ಟವಶಾತ್ ಸಿದ್ದೇಗೌಡ ಹಾಗೂ ಲಿಂಗೇಗೌಡರು ಬಡತನದ ಬವಣೆಗೆ ಸಿಕ್ಕಿ ನಲುಗಿದರು.

ಸಿದ್ದೇಗೌಡರಿಗೆ ಒಂದು ಗಂಡು ಹಾಗೂ ತಮ್ಮ ಲಿಂಗೇಗೌಡರಿಗೆ ಒಂದು ಗಂಡು ಮಗುವಿತ್ತು. ಆ ಮಕ್ಕಳ ಹೆಸರು ಸಿದ್ದೇಗೌಡ ಹಾಗೂ ಪುಟ್ಟೇಗೌಡ.

ಸಿದ್ದೇಗೌಡ ಹಾಗೂ ಪುಟ್ಟೇಗೌಡ ಕೃಷಿಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಂಸಾರ ಸಾಗಿಸುತ್ತಿದ್ದರು. ಅವರಿಬ್ಬರಿಗೂ ತಲಾ ಒಂದೊಂದು ಗಂಡು ಮಕ್ಕಳಿದ್ದವು. ಆ ಮಕ್ಕಳ ಹೆಸರು ಸಿದ್ದೇಗೌಡ ಹಾಗೂ ಪುಟ್ಟಚ್ಚಿ ಲಿಂಗೇಗೌಡ. ಮಕ್ಕಳು ಇನ್ನೂ ಚಿಕ್ಕವರಿದ್ದಾಗಲೇ ಅವರ ತಂದೆ-ತಾಯಂದಿರು ಅಕಾಲ ಮೃತ್ಯುವಿಗೀಡಾದರು. ಹೀಗಾಗಿ ಬಾಲಕರಾಗಿದ್ದ ಸಿದ್ದೇಗೌಡ ಹಾಗೂ ಪುಟ್ಟಚ್ಚಿಲಿಂಗೇಗೌಡ ಹನಕೆರೆಯಲ್ಲಿ ಅಜ್ಜಿಯ ಆಶ್ರಯದಲ್ಲಿ ಬೆಳೆದು ದೊಡ್ಡವರಾದರು. ಹಿರಿಯವನಾಗಿದ್ದ ಸಿದ್ದೇಗೌಡ ಮನೆವಾಳ್ತನಕ್ಕೆ ಮದುವೆಯಾಗಿ ಕೋಣಸಾಲೆಗೆ ಹೊರಟು ಹೋದ. ತಮ್ಮ ಪುಟ್ಟಚ್ಚಿಲಿಂಗೇಗೌಡ ಬೆಟ್ಟಮ್ಮನನ್ನು ಮದುವೆಯಾಗಿ ಕಚ್ಚಿಗೆರೆಯಲ್ಲಿ ನೆಲೆಸಿದರು. ಪುಟ್ಟಚ್ಚಿಲಿಂಗೇಗೌಡ ಒಳ್ಳೆಯ ಜ್ಞಾನಿ ಎಂದೂ, ಸತ್ಪುರುಷನೆಂದೂ ಊರಲ್ಲಿ ಹೆಸರುಗಳಿಸಿದ್ದರು. 'ಅಚ್ಚಿ' ಎಂದರೆ ತಾಯಿ, ಲಕ್ಷ್ಮಿ ಎಂದು ಅರ್ಥ. ಪುಟ್ಟಚ್ಚಿ ಎಂದರೆ ಪುಟ್ಟತಾಯಿ, ಪುಟ್ಟಲಕ್ಷ್ಮಿ ಎಂದಾಗುತ್ತದೆ. ಪುಟ್ಟಚ್ಚಿ ಎಂಬುದು ಸಿದ್ದೇಗೌಡರ ಮನೆತನಕ್ಕೆ ಬೆಸುಗೆ ಹಾಕಿಕೊಂಡ ಗೌರವ ಸೂಚಕ ಹೆಸರು.

ಪುಟ್ಟಚ್ಚಿಲಿಂಗೇಗೌಡ -ಬೆಟ್ಟಮ್ಮ ದಂಪತಿಗಳಿಗೆ ಸಿದ್ದೇಗೌಡ (ಸೀತಾಸುತರವರ ತಂದೆ), ಜವರಾಯಿಗೌಡ, ನಿಂಗೇಗೌಡ, ಕುಳ್ಳೇಗೌಡ ಮತ್ತು ಚಿಕ್ಕಸಿದ್ದೇಗೌಡ ಎಂಬ ಐವರು ಗಂಡು ಮಕ್ಕಳು ಹಾಗೂ ಲಿಂಗಮ್ಮ



ಮಗಳು. ಈ ಪೈಕಿ ನಿಂಗೇಗೌಡನನ್ನು ಥಣಾಯಕನ ಪುರದ ತಮ್ಮ ಸಂಬಂಧಿಕರೊಬ್ಬರಿಗೆ ದತ್ತು ಕೊಟ್ಟು ಬಿಟ್ಟರು. ಆದರೆ ಆತನಿಗೆ ಗಂಡು ಸಂತಾನವೇ ಇಲ್ಲದಾಯಿತು. ಕುಳ್ಳೇಗೌಡನನ್ನು ಹನಕೆರೆಗೆ ಮನೆವಾಳ್ತನಕ್ಕೆ ಲಗ್ನ ಮಾಡಿಕೊಟ್ಟರು. ಆತನ ಮಗನೇ ಹನಕೆರೆ ಸಿದ್ದಯ್ಯ. ಜವರಾಯಿಗೌಡನಿಗೆ ಓರ್ವ ಮಗನಿದ್ದು ಮದುವೆಯೂ ಆಗಿತ್ತು. ಆದರೆ ಆತನಿಗೆ ಗಂಡುಸಂತಾನವಿಲ್ಲದೆ ಸುಳಿಗೂಡಿತ್ತು. ಚಿಕ್ಕಸಿದ್ದೇಗೌಡರಿಗೆ ಇಬ್ಬರು ಹೆಣ್ಣು ಮಕ್ಕಳಿವೆ. ಆದರೆ ಆತ ಅಕಾಲ ಮೃತ್ಯುವಿಗೀಡಾದ.

ಸಿದ್ದೇಗೌಡ - ನಿಂಗಮ್ಮ (ಕುದರಗುಂಡಿ ಗ್ರಾಮದವರು) ದಂಪತಿಗೆ ಐವರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು, ಅವುರುಗಳೆಂದರೆ ಸಿದ್ದೇಗೌಡ (ಸೀತಾಸುತ) ನಿಂಗೇಗೌಡ, ನಾತೇಗೌಡ, ಕರೀಗೌಡ, ತಮ್ಮಯ್ಯ, ಲಿಂಗಮ್ಮ ಹಾಗೂ ಸಣ್ಣಮ್ಮ. ಹಿರಿಮಗಳಾದ ಲಿಂಗಮ್ಮನವರನ್ನು ಕೋಣಸಾಲೆ ನಿಂಗಯ್ಯ ನವರಿಗೆ ಕೊಟ್ಟು ಲಗ್ನ ಮಾಡಲಾಯ್ತು. ಲಿಂಗಮ್ಮ ಒಂದು ಹೆಣ್ಣುಮಗುವಿಗೆ ಜನ್ಮವಿತ್ತು ಅಸುನೀಗಿದರು. ಆದರೂ ಕೋಣಸಾಲೆಯ ಸಂಬಂಧ ಇಂದಿಗೂ ಮುಂದುವರಿದು ಕೊಂಡು ಹೋಗುತ್ತಿದೆ.

ಸಿದ್ದೇಗೌಡರಿಗೆ (ಸೀತಾ ಸುತ ಅವರ ತಂದೆ) 3-4 ಎಕರೆ ಹೊಲವಿತ್ತು ಅವರು ಪೊಲೀಸ್ ಕಾನ್ ಸ್ಟೇಬಲ್ ಆಗಿ ಸರ್ಕಾರಿ ಸೇವೆಯಲ್ಲಿದ್ದರು. ಆಗ ಅವರಿಗೆ ಬರುತ್ತಿದ್ದ ಸಂಬಳ ಮಾಹೆಯಾನ ಐದುರೂ ! ಸಿದ್ದೇಗೌಡರು ಕೆಲಕಾಲಾ ನಂತರ ಒಂದು ಎಕರೆ ಗದ್ದೆ ಹಾಗೂ 8-10 ಎಕರೆ ಹೊಲ ಖರೀದಿಸಿದರು.

ಬದನವಾಳು ಗ್ರಾಮದ ಸಿದ್ದೇಶ್ವರ ಸಿದ್ದೇಗೌಡರ ಮೂಲಪುರುಷರು ಸಂಕಟದ ಸಮಯದಲ್ಲಿ ಮೊರೆ ಹೊಕ್ಕದೇವರು. ಇಂದಿಗೂ ಈ ಮನೆತನದವರು ಆ ದೇವರನ್ನು ಆರಾಧಿಸಿಕೊಂಡು ಬರುತ್ತಿದ್ದಾರೆ. ಇದರಿಂದ ಈ ವಂಶದಲ್ಲಿ ಹುಟ್ಟಿದ ಹಿರಿ ಮಗನಿಗೆ ಸಿದ್ದೇಗೌಡ ಎಂದು ಆ ದೇವರ ಹೆಸರನ್ನಿಡುವುದು ವಾಡಿಕೆಯಾಗಿದೆ.

## ಬಾಲ್ಯ

ಸಿದ್ದೇಗೌಡ-ನಿಂಗಮ್ಮ ದಂಪತಿಯ ಹಿರಿಮಗನಾಗಿ 15-7-1899ರಲ್ಲಿ ಜನಿಸಿದ ಸಿದ್ದೇಗೌಡರು ಚಿಕ್ಕಂದಿನಲ್ಲಿ ತುಂಟರಾಗಿದ್ದರು. ತಂದೆ ಸರ್ಕಾರಿ ನೌಕರರಾಗಿದ್ದರಿಂದ ಅವರಿಗೆ ವಿದ್ಯೆಯ ಬೆಲೆ ಚೆನ್ನಾಗಿ ಗೊತ್ತಿತ್ತು. ತಮ್ಮ ಮಗನನ್ನು ಪಾಠಶಾಲೆಗೆ ಸೇರಿಸಬೇಕೆಂದು ಅವರು ಚಿಂತಿಸುತ್ತಿದ್ದರು. ಆಗ ಮಂಡ್ಯದಲ್ಲಿ ಮಾತ್ರ ಪ್ರಾಥಮಿಕಶಾಲೆಯಿತ್ತು. ಆದರೆ ಸಿದ್ದೇಗೌಡರು ತಕ್ಷಣವೇ ತಮ್ಮ ಮಗನನ್ನು ಆ ಪಾಠಶಾಲೆಗೆ ಸೇರಿಸಲಿಲ್ಲ.

ಆಗಿನ ಕಾಲದಲ್ಲಿ ಹಳ್ಳಿ ಕಡೆ ನಾಟಕ ಕಲಿಸುವ ಉಪಾಧ್ಯಾಯರುಗಳು ಇರುತ್ತಿದ್ದರು. ಹನಕೆರೆ ಗ್ರಾಮದಲ್ಲಿ ನಾಟಕ ಕಲಿಸಲು ಮಿಕ್ಕೆರೆ ಗ್ರಾಮದ ಬ್ರಾಹ್ಮಣ ಪುಟ್ಟಯ್ಯನವರು ಒಂದು ಕೂಲಿ ಮಠವನ್ನು ತೆರೆದಿದ್ದರು. ಚಿಕ್ಕಪ್ಪ ಜವರಾಯಿಗೌಡ ಒಂದು ದಿನ ಬಾಲಕ ಸಿದ್ದೇಗೌಡರ ತುಂಟಾಟವನ್ನು ತಡೆಯಲಾಗದೇ ಅವರನ್ನು ಆ ಕೂಲಿಮಠಕ್ಕೆ ಕರೆದುಕೊಂಡು ಹೋಗಿ ಸೇರಿಸಿದರು. ಆಗ ಸಿದ್ದೇಗೌಡರಿಗೆ 9-10 ವರ್ಷಗಳಾಗಿದ್ದವು. ಆಗ ಸಿದ್ದೇಗೌಡರ ಜೊತೆಗೆ ಕೂಲಿ ಮಠಕ್ಕೆ ಬಿ.ಟಿ. ತಮ್ಮಯ್ಯ, ತಮ್ಮಯ್ಯ ಮತ್ತು ಮೇಲ್ಗಿರಿ ತಿಮ್ಮಯ್ಯನವರೂ ಬರುತ್ತಿದ್ದರು. ಕೂಲಿ ಮಠದಲ್ಲಿ ಮರಳಿನ ಮೇಲೆ ಅಕ್ಷರಗಳನ್ನು ತಿದ್ದುವುದರಿಂದ ಇವರ ವಿದ್ಯಾಭ್ಯಾಸ ಪ್ರಾರಂಭವಾಯ್ತು. ಅಕ್ಷರಗಳನ್ನು ಕಲಿತ ಮೇಲೆ ಕಾಗುಣಿತ ಮತ್ತು ಪ್ರಥಮ ಪತ್ಯ ಪುಸ್ತಕದ ವ್ಯಾಸಂಗ. ಮರಳಿನ ಮೇಲೆ ಅಕ್ಷರಗಳನ್ನು ಲಕ್ಷಣವಾಗಿ ದುಂಡಾಗಿ ತಿದ್ದಿ ತಿದ್ದಿ ಸಿದ್ದೇಗೌಡರ ತೋರು ಬೆರಳಿನಲ್ಲಿ ಆಗಾಗ್ಗೆ ರಕ್ತ ಬರುತ್ತಿತ್ತು. ಸರಿಯಾಗಿ ಪಾಠ ಒಪ್ಪಿಸದಿದ್ದರೆ ಎರಡು ಕಾಲು ಸಂದಿಗಳಿಂದ ಕೈ ತೂರಿಸಿ ಕಿವಿ ಹಿಡಿದುಕೊಳ್ಳುವುದು. ಬೆತ್ತದ ಸೇವೆ, ಮಿತಿ ಮೀರಿದರೆ ಕೈಗಳನ್ನು ಕಟ್ಟಿ ತೊಲೆಗೆ ನೇತುಹಾಕುವುದು. ಕೆಟ್ಟದಾಗಿ ವರ್ತಿಸಿದರೆ ತೊಲೆಗೆ ನೇತು ಹಾಕಿ ಕೆಳಗಡೆ ಮೆಣಸಿನಕಾಯಿ ಹೊಗೆ ಹಾಕುವುದು ಈ ಎಲ್ಲಾ ಶಿಕ್ಷೆಗಳನ್ನೂ ವಿದ್ಯಾರ್ಥಿಗಳು ಅನುಭವಿಸ ಬೇಕಾಗುತ್ತಿತ್ತು. ಸಿದ್ದೇಗೌಡರು ಈ ಎಲ್ಲಾ ಶಿಕ್ಷೆಗಳನ್ನೂ ಕೂಲಿ ಮಠದಲ್ಲಿ ಅನುಭವಿಸಿದ್ದಾರೆ.



ಬೆರಳುಗಳಲ್ಲಿ ರಕ್ತ ಬರುವಷ್ಟರ ಮಟ್ಟಿಗೆ ಮರಳಿನ ಮೇಲೆ ಅಕ್ಷರ ತಿದ್ದುವುದರ ಜೊತೆಗೆ ಗುರುಸೇವೆ ಮಾಡುವುದೂ ಸಿದ್ದೇಗೌಡರ ಪಾಲಿಗೆ ಬಂದಿತ್ತು. ನಿತ್ಯವೂ ಕೊಳಕ್ಕೆ ಹೋಗಿ ಅವರ ಅಡುಗೆ ಪಾತ್ರೆಗಳನ್ನು ತಿಕ್ಕುವುದು. ತುಳಸಿ ಗಿಡಗಳಿಗೆ ನೀರು ಹಾಕುವುದು, ಗುರುಗಳ ಬಟ್ಟೆ ಒಗೆಯುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಿದ್ದರು.

ಕೂಲಿಮಠದಲ್ಲಿ ಹನಕೆರೆ ಸಿದ್ದಯ್ಯನ ಸೋದರ ಮಾವನೂ ಸಿದ್ದೇಗೌಡರ ಸಹಪಾಠಿಯಾಗಿದ್ದ. ಒಂದು ದಿನ ಆತ ಜೊತೆಯಲ್ಲಿ ಓದುತ್ತಿದ್ದ ಪ್ರತಿಪಕ್ಷದವರ ಹುಡುಗಿಯೊಂದನ್ನು ಕೆಣಕಿಬಿಟ್ಟ. ಗಲಾಟೆಯಾಯಿತು. ಆತ ತಾನು ಮಾಡಿದ ತಪ್ಪನ್ನು ಸಿದ್ದೇಗೌಡರ ಮೇಲೆ ಹೊರಿಸಿಬಿಟ್ಟ! ಗುರುಗಳು ಆ ಆಪಾದನೆಯನ್ನು ನಿಜವೆಂದೇ ನಂಬಿ ಸಿದ್ದೇಗೌಡರನ್ನು 'ಕೋದಂಡ'ಕ್ಕೆ ಏರಿಸಿದರು. ಅಂದರೆ ತೊಲೆಗೆ ನೇತು ಹಾಕಿ ಮೆಣಸಿನಕಾಯಿ ಹೊಗೆ ಕೊಟ್ಟರು. ಒಂದೆರಡು ದಿನಗಳಲ್ಲೇ ನಿಜ ಸಂಗತಿ ತಿಳಿದು ಗುರುಗಳು ಪಶ್ಚಾತ್ತಾಪಪಟ್ಟು ಸಿದ್ದೇಗೌಡರನ್ನು ಸಮಾಧಾನ ಪಡಿಸಿದರು.

## ವಿದ್ಯಾಭ್ಯಾಸ

ಸುಮಾರು ಎರಡು ವರ್ಷಗಳ ಕಾಲ ಆ ಕೂಲಿ ಮಠದಲ್ಲಿ ಮರಳಿನಲ್ಲಿ ಅಕ್ಷರ ತಿದ್ದಿದ ಮೇಲೆ ತಂದೆ ತಮ್ಮ ಮಗ ಸಿದ್ದೇಗೌಡರನ್ನು ಮಂಡ್ಯದ ಹಳೇತಾಲ್ಲೂಕು ಕಛೇರಿಯ ಆವರಣದಲ್ಲಿದ್ದ ಮಾಧ್ಯಮಿಕ ಪಾಠಶಾಲೆ ಎರಡನೇ ತರಗತಿಗೆ (1910ನೇ ಇಸವಿ) ಸೇರಿಸಿದರು. ಸಿದ್ದೇಗೌಡರು ಪಾಠಶಾಲೆಗೆ ಹೋಗುವ ಮುನ್ನ ತಂದೆ ಕೆಲಸದ ಮೇಲೆ ಹೋಗಿದ್ದರೆ, ಅಡುಗೆ ಮಾಡುವುದು, ಸಿಹಿನೀರು ಕೊಳದಿಂದ ನೀರು ಹೊತ್ತು ತರುವುದು. ರಾಗಿ ಹಿಟ್ಟಿಲ್ಲದಿದ್ದರೆ ಊರಿಗೆ ನಡೆದು ಕೊಂಡು ಹೋಗಿ ರಾಗಿಹಿಟ್ಟನ್ನು ಹೊತ್ತು ತರುವುದು ಅಥವಾ ರಾಗಿಯನ್ನು ಬೇರೆಯವರ ಮನೆಗೆ ಹೋಗಿ ಬೀಸಿಕೊಂಡು ಬರುತ್ತಿದ್ದರು. ಸಿದ್ದೇಗೌಡರು ವಾಸವಿದ್ದ ವಾತಾವರಣದಲ್ಲಿ ಮಡಿವಾಳರು, ಮರಗೆಲಸದವರು, ಕಾರ್ಮಿಕರೇ ಹೆಚ್ಚಾಗಿ ವಾಸಿಸುತ್ತಿದ್ದರು.

ಸಿದ್ದೇಗೌಡರ ಆಟ ಆ ಜಾತಿಯ ಹುಡುಗರ ಸಂಗಡವೇ ನಡೆಯುತ್ತಿತ್ತು. ಆಗ ತಂದೆ ಮಗನಿಗೆ ಹೊಡೆದು ಬ್ರಾಹ್ಮಣ ಹುಡುಗರ ಸಹವಾಸ ಮಾಡೆಂದು ಹೇಳುತ್ತಿದ್ದರು. ತಂದೆಯವರಿಗೆ ಚಪ್ಪಲಿ ರಿಪೇರಿ ಮಾಡುವುದು, ಹರಿದು ಹೋದ ಬಟ್ಟೆ ಹೊಲೆಯುವುದು ಇತ್ಯಾದಿ ಕೆಲಸಗಳೆಲ್ಲಾ ಬರುತ್ತಿದ್ದವು.

ಪೊಲೀಸ್ ಪೇದೆ ಸಿದ್ದೇಗೌಡರು ಇಲಾಖೆಯಲ್ಲಿ ಓರ್ವ ನಿಷ್ಠಾವಂತ ಪ್ರಾಮಾಣಿಕ ನೌಕರರೆಂದು ಹೆಸರುಗಳಿಸಿದ್ದರು. ಇದನ್ನು ಅರಿತಿದ್ದ ಪೊಲೀಸ್ ಸೂಪರಿನ್‌ಟೆಂಡೆಂಟ್‌ರವರು ಪೇದೆ ಸಿದ್ದೇಗೌಡರನ್ನು ಹೆಚ್ಚಾಗಿ ಹೆಣಕಾಯುವ ಕೆಲಸಕ್ಕೆ ನಿಯುಕ್ತಿಗೊಳಿಸುತ್ತಿದ್ದರಂತೆ! ಕಾರಣ ಸಿದ್ದೇಗೌಡರ ಕಣ್ಗಾವಲಿನಲ್ಲಿ ಹೆಣದ ಮೇಲಿನ ಒಡವೆ, ವಸ್ತ್ರ ಸುರಕ್ಷಿತವಾಗಿ ಇರುತ್ತಿದ್ದುವು. ಹೀಗಾಗಿ ಸಿದ್ದೇಗೌಡರು ಹೆಚ್ಚಿನ ಪಾಲು ಕೆಲಸವನ್ನು ಹೆಣ ಕಾಯುವುದರಲ್ಲೇ ಕಳೆದರೆಂದು ಗಾಣದಾಳು ಮಾಜಿ ಶಾಸಕ ದಿ|| ಜೆ.ಎಸ್. ಬೊಮ್ಮೇಗೌಡರ ಅಣ್ಣ ಬಸವೇಗೌಡರು ಸಿದ್ದೇಗೌಡ ( ಸೀತಾಸುತ) ಅವರ ಹಿರಿಯ ಮಗ ವಕೀಲ ಕೆ.ಎಸ್.ದೊರೆಸ್ವಾಮಿ ಅವರಿಗೆ ತಿಳಿಸಿದರಂತೆ.

ಸಿದ್ದೇಗೌಡರು ಆಗಾಗ್ಗೆ ತಂದೆಯ ಜೊತೆಯಲ್ಲಿ ಪೊಲೀಸ್ ಠಾಣೆಗೆ ಹೋಗುತ್ತಿದ್ದರು. ಆಗ ಅಲ್ಲಿಯ ನೌಕರರು 'ಬಿಡಬೇಡ ಓದಿಸು' ಎಂದು ತಂದೆಯವರನ್ನು ಉತ್ತೇಜಿಸುತ್ತಿದ್ದರು. ಸಿದ್ದೇಗೌಡರ ತಂದೆ ಸುಂದರ ಪುರುಷ, ಬಿಳಿಯ ಬಣ್ಣ, ಮಧ್ಯಮ ಎತ್ತರ, ದಪ್ಪ ಮೀಸೆ. ಕಾಲುನಡಿಗೆಯಲ್ಲಿ ಪ್ರವೀಣ. ಅವರಿಗಿದ್ದ ಏಕೈಕ ಚಟ ನಶ್ಯ ಹಾಕುವುದು.

ಸಿದ್ದೇಗೌಡರಿಗೆ ಗಣಿತ ತಲೆಗೆ ಹತ್ತುತ್ತಿರಲಿಲ್ಲ. ಅವರು ಕನ್ನಡ ಐದನೇ ತರಗತಿ- ಅಂದರೆ ಮೊದಲನೇ ಪರೀಕ್ಷೆ ಕಟ್ಟುವ ತರಗತಿಗೆ ಬಂದರು. ಆಗ ಮುಖ್ಯೋಪಾಧ್ಯಾಯರೂ ಗಣಿತದ ಮೇಷ್ಟ್ರೂ ಆದ ರಾಮಣ್ಣನವರು ಲೆಕ್ಕಬಾರದಿದ್ದುದಕ್ಕಾಗಿ ಸಿದ್ದೇಗೌಡರ ಬೆಟ್ಟುಗಳ ಮೇಲೆ ಹೊಡೆದರು. ಗೌಡರಿಗೆ ದಿಕ್ಕೆ ತೋಚದಂತಾಯ್ತು. ಆಗ ಅವರು ಒಂದು ಉಪಾಯ ಹೂಡಿದರು. ಆಗ ಮಂಡ್ಯದಲ್ಲಿ ಒಂದು ಮಿಷನ್ ಸ್ಕೂಲ್ ಇತ್ತು. ಅಲ್ಲಿ ಕನ್ನಡ ಇಂಗ್ಲಿಷ್ ಎರಡನ್ನೂ ಹೇಳಿ ಕೊಡುತ್ತಿದ್ದರು. ಅಲ್ಲಿಗೆ ಸೇರಿಕೊಂಡರೆ



ಜಾಗ್ರತೆ ವಿದ್ಯಾಭ್ಯಾಸ ಮುಗಿಸಬಹುದೆಂದು ಹೇಳಿ ತಂದೆಯನ್ನು ಒಪ್ಪಿಸಿದರು. ಸಿದ್ದೇಗೌಡರು 1915-16ನೇ ಸಾಲಿನಲ್ಲಿ ಆ ಮಿಷನ್ ಸ್ಕೂಲ್‌ಗೆ ಸೇರಿದರು. ಆ ಸ್ಕೂಲಿನಲ್ಲಿ ಫುಟ್ ಬಾಲ್ ಆಟವಾಡುವ ಅವಕಾಶವಿತ್ತು. ಗುತ್ತಲು ನಾರಣಪ್ಪ ದೈಹಿಕ ಶಿಕ್ಷಕರಾಗಿದ್ದರು. ಈ ನಾರಣಪ್ಪನವರೇ ಸಿದ್ದೇಗೌಡರ ಜೀವನಗತಿಯನ್ನು ಬದಲಾಯಿಸಿದ ಮಹಾನುಭಾವರು.

ಸಿದ್ದೇಗೌಡರು ರಜಾದಿನಗಳಲ್ಲಿ ಊರಿಗೆ (ಕಚ್ಚಿಗೆರೆ) ಹೋಗುತ್ತಿದ್ದರು. ಅಲ್ಲಿ ದನಮೇಯಿಸುವುದು, ಹುಲ್ಲುತರುವುದು, ಗ್ರಾಮೀಣ ಕ್ರೀಡೆಗಳನ್ನಾಡುವುದು ಅವರ ಪ್ರಿಯವಾದ ಕೆಲಸವಾಗಿತ್ತು. ಹಾಗೆಯೇ ಅವರು ತಾಯಿಯ ಸಂಗಡ ಅವರ ತೌರಾದ ಕುದುರ ಗುಂಡಿಗೆ ಹೋಗಿ ಅಜ್ಜ ಅಜ್ಜಿಯರಿಂದ ಕಾಸು ಗಿಟ್ಟಿಸುತ್ತಿದ್ದರು. ಸಿದ್ದೇಗೌಡರು ಮಂಡ್ಯದಲ್ಲಿ ಓದುತ್ತಿದ್ದಾರೆಂದು ಎಲ್ಲರೂ ಗೌರವಿಸುತ್ತಿದ್ದರು . ಆದರೆ ಅವರ ಕೊನೆಯ ಚಿಕ್ಕಪ್ಪ ಗೌರವಿಸುತ್ತಿರಲಿಲ್ಲ. ಸಿದ್ದೇಗೌಡರನ್ನು ಹೊಲ ಉಳಲು ಕರೆದುಕೊಂಡು ಹೋಗಿ ಚೆನ್ನಾಗಿ ದುಡಿಸುತ್ತಿದ್ದರು.ತಪ್ಪುಗೆರೆಗಳಾದರೆ ಬಾರು ಕೋಲಿನಿಂದ ಬಾಸುಂಡೆ ಬರುವ ಹಾಗೆ ಬಾರಿಸಿ ಮೇಳಿಯ ಹಾಲು ಕುಡಿಸುತ್ತಿದ್ದರು!

ಸಿದ್ದೇಗೌಡರು 1917ರಲ್ಲಿ ಕನ್ನಡ ಪ್ರಥಮ ಪರೀಕ್ಷೆ ಕಟ್ಟಿದರು. ಆದರೆ ತೇರ್ಗಡೆಯಾಗಲಿಲ್ಲ. ಮತ್ತೆ 1918ರಲ್ಲಿ ಪರೀಕ್ಷೆಗೆ ಕುಂತು ಉತ್ತೀರ್ಣರಾದರು. ಆಗ ಅವರು ಇಂಗ್ಲಿಷ್ ಎರಡನೇ ತರಗತಿಯಲ್ಲಿದ್ದರು. ಆಗ ಗುತ್ತಲು ನಾರಣಪ್ಪ ಮೇಷ್ಟ್ರು ತಂದೆಯವರನ್ನು ಕರೆದು ''ನಿಮ್ಮ ಮಗನನ್ನು ಮುಂದಕ್ಕೆ ಓದುವ ಏರ್ಪಾಟು ಮಾಡುತ್ತೇನೆ. ಏನು ಸಂಭಾವನೆ ಕೊಡ್ತೀಯೆ?'' ಎಂದು ಕೇಳಿದರು. ತಂದೆ ''ಅರ್ಧತೊಲದ ಚಿನ್ನದುಂಗುರ ಮಾಡ್ಸಿ ಕೊಡ್ತೀನಿ'' ಎಂದರು. ಆಗ ತಂದೆಗೆ ಬರುತ್ತಿದ್ದುದು 7ರೂ ಸಂಬಳ. ಆಗ ಒಂದು ತೊಲ ಚಿನ್ನಕ್ಕೆ 6ರೂ ಇತ್ತು! ತಂದೆಯವರು 3ರೂ ಕೊಟ್ಟು ನಾರಣಪ್ಪನವರಿಗೆ ಅರ್ಧತೊಲದ ಚಿನ್ನದುಂಗುರ ಮಾಡಿಸಿಕೊಟ್ಟರು.

ಅಂದೇ ಗುತ್ತಲು ನಾರಣಪ್ಪ ಮೇಷ್ಟ್ರು ಸಿದ್ದೇಗೌಡರನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಧರ್ಮಪ್ರವರ್ತಕ ಸಾಹುಕಾರ್ ಡಿ.ಬನುಮಯ್ಯ

ನವರಲ್ಲಿ ಈ ಹುಡುಗ ಬಡವ ಆದರೆ ಬುದ್ಧಿವಂತ, ಈ ಹುಡುಗನ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಬೇಕೆಂದು ಹೇಳಿ ಹೊರಟು ಹೋದರು.

ಆ ವೇಳೆಗಾಗಲೇ ಧರ್ಮಪ್ರವರ್ತಕ ಸಾಹುಕಾರ್ ಡಿ.ಬನುಮಯ್ಯ ನವರು ಮೈಸೂರಿನಲ್ಲಿ ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಿದ್ದರು. ಆ ಶಾಲೆ ಅವರ ವಾಸದ ಮನೆಯ ಸನಿಹದಲ್ಲೇ ಇತ್ತು. ಸಾಹುಕಾರ್ ಡಿ. ಬನುಮಯ್ಯನವರು ತಕ್ಷಣ ತಮ್ಮ ಶಾಲೆಯ ಜವಾನ ಪಾಪಯ್ಯನನ್ನು ಕರೆದು ಹತ್ತು ಮನೆಗಳ ಹೆಸರನ್ನು ಹೇಳಿ ವಾರಕ್ಕೊಂದು ದಿವಸ ಈ ಹುಡುಗನಿಗೆ ಊಟ ಹಾಕಬೇಕೆಂದು ಹೇಳಿ ವಾರದ ಮನೆಯನ್ನು ಗೊತ್ತು ಮಾಡಿಕೊಡು ಎಂದರು. ಸಾಹುಕಾರ್ ಡಿ.ಬನುಮಯ್ಯನವರ ಮನೆ ಆದಿತ್ಯವಾರದ ಮನೆಯಾಯಿತು. ಜವಾನ ಪಾಪಯ್ಯ ಸಿದ್ದೇಗೌಡರನ್ನು ತನ್ನ ಸಂಗಡ ಕರೆದುಕೊಂಡು ಹೋಗಿ ವಾರಾನ್ನದ ಮನೆಗಳನ್ನು ಪರಿಚಯಿಸಿದ. ಅದರಂತೆ ನೀಲಗಿರಿ ಮುದ್ದಣ್ಣ, ಪಾಪಣ್ಣನವರ ಸೋಮವಾರದ ಮನೆ, ಗುಂಜಾ ನರಸಿಂಹಯ್ಯನವರ ಮಂಗಳವಾರದ ಮನೆ, ಹನುಮಂತಪ್ಪನವರ ಬುಧವಾರದ ಮನೆ, ವೀರಪ್ಪ (ಸಾಹುಕಾರ್ ಡಿ.ಬನುಮಯ್ಯನವರ ಅಳಿಯ) ಅವರ ಗುರುವಾರದ ಮನೆ, ಸಿದ್ದೇಗೌಡರ ವಾರಾನ್ನದ ಮನೆಗಳಾದವು. ಶುಕ್ರವಾರ ಆಲಪ್ಪನ ಮನೆ, ಶನಿವಾರದ ಮನೆಯನ್ನು ಸಿದ್ದೇಗೌಡರೇ ಹುಡುಕಿಕೊಂಡರು. ಆ ಮನೆಯ ಯಜಮಾನರ ಹೆಸರು ಬಿ.ರಾಮಸ್ವಾಮಿ, ಬ್ರಾಹ್ಮಣೇತರ ವಿದ್ಯಾರ್ಥಿಗಳಲ್ಲಿ ವಾರಾನ್ನವನ್ನುಂಡು ವಿದ್ಯಾಭ್ಯಾಸ ಮಾಡಿದವರಲ್ಲಿ ಸಿದ್ದೇಗೌಡರೇ ಮೊದಲಿಗರೆಂದು ಕಾಣುತ್ತದೆ.

ಹೇಗೋ ಮಾಡಿ ಊಟದ ವ್ಯವಸ್ಥೆ ಮಾಡಿಕೊಂಡ ಸಿದ್ದೇಗೌಡರಿಗೆ ವಸತಿ ಸಮಸ್ಯೆ ಕಾಡಿತು. ಆಗ ಬನುಮಯ್ಯನವರ 'ಸ್ಕೂಲಿನಲ್ಲಿ ಒಂದು ಕೊಠಡಿಯನ್ನು ಶಾರದಳ ಅತ್ತೆಯ ಚಿಕ್ಕಪ್ಪ ಕೆ.ಸಿ.ಲಿಂಗೇಗೌಡರಿಗೆ ಕೊಟ್ಟಿದ್ದರು. ಅವರು ಆಗ ಕೊನೇ ವರ್ಷದ ಬಿ.ಎ.ಪರೀಕ್ಷೆಗೆ ಓದುತ್ತಿದ್ದರು. ಸಿದ್ದೇಗೌಡರು ಕನ್ನಡ ಏಳನೇತರಗತಿ ಪರೀಕ್ಷೆ ಮುಗಿಸಿಕೊಂಡು ಇಂಗ್ಲಿಷ್ ಏಳನೇ ತರಗತಿಗೆಹೋಗಿ ಪರೀಕ್ಷೆಕಟ್ಟ ಬೇಕಾಗಿತ್ತು. ಸಿದ್ದೇಗೌಡರು



ಎ.ಬಿ.ಸಿ.ಡಿ.ಕಲಿತು ಐದು ವರ್ಷದ ಕೋರ್ಸನ್ನು ಎರಡು ವರ್ಷದಲ್ಲೇ ಮುಗಿಸಬೇಕಿತ್ತು. ಗೌಡರು ಆ ಎರಡು ವರ್ಷವೂ ಲಿಂಗೇಗೌಡರ ಕೊಠಡಿಯಲ್ಲೇ ಇದ್ದು ವ್ಯಾಸಂಗ ಮಾಡಿ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಕೆ.ಸಿ.ಲಿಂಗೇಗೌಡರು ಬಿ.ಎ.ಪರೀಕ್ಷೆ ತೇರ್ಗಡೆಯಾಗಿ ಎಲ್.ಎಲ್.ಬಿ. ವ್ಯಾಸಂಗ ಮಾಡಲು ಪೂನಾಕ್ಕೆ ಹೋದರು. ಸಿದ್ದೇಗೌಡರು ಆ ಕೊಠಡಿಯಲ್ಲೆ ಇದ್ದು ಕೊಂಡು ಪ್ರೌಢಶಾಲೆ ಮೊದಲನೆ ತರಗತಿಗೆ ಸೇರಿದರು. ಅಲ್ಲಿಯೂ ಸಹ ಅವರಿಗೆ ವಿದ್ಯಾರ್ಥಿ ವೇತನ ಬಂತು.

ತಮ್ಮ ಮಗ ಕಷ್ಟ ಪಟ್ಟು ಓದಿ ಪಾಸು ಮಾಡಿ ಪ್ರೌಢಶಾಲೆಗೆ ಸೇರಿದ ವಿಷಯವನ್ನು ತಿಳಿದು ಸಂತೋಷಪಟ್ಟು ಅಪ್ಪ, ಅವ್ವ ಎರಡು ವರ್ಷದ ಸಣ್ಣಮ್ಮನನ್ನು ಎತ್ತಿಕೊಂಡು ಕಚ್ಚಿಗೆರೆಯಿಂದ ಮೈಸೂರಿಗೆ ನಡೆದುಕೊಂಡೇ ಬಂದರು. ತಂದೆ ತಾಯಿಗಳಿಗೆ ತಮ್ಮ ಮಗನ ಮೇಲೆ ಅದೆಷ್ಟು ಮಮತೆ ಪ್ರೀತಿ, ವಾತ್ಸಲ್ಯ! ಅದನ್ನು ಅಳೆಯ ಬಲ್ಲವರಾರು? ಅಪ್ಪ, ಅವ್ವ ಮಗನ ಮೈದಡವಿ, ಆಶೀರ್ವಾದದ ಮಳೆಗರೆದು ಹೊರಟು ನಿಂತಾಗ- ಸಿದ್ದೇಗೌಡರ ಹೃದಯ ತುಂಬಿಬಂದು ಕಣ್ಣುಗಳು ಹನಿಗೂಡಿದವು. ಗೌಡರು ದುಡ್ಡು ಕೊಟ್ಟು ತಂದೆತಾಯಿಯನ್ನು ಊರಿಗೆ ಕಳುಹಿಸಿದರು.

ಸಿದ್ದೇಗೌಡರು ಪ್ರೌಢಶಾಲೆ ಎರಡನೇ ತರಗತಿಗೆ ತೇರ್ಗಡೆಯಾದರು. ಕಾರಾಣಾಂತರದಿಂದ ಸಿದ್ದೇಗೌಡರು ಬನುಮಯ್ಯ ಪ್ರೌಢಶಾಲೆ ಕೊಠಡಿಯನ್ನು ಬಿಡಬೇಕಾಯಿತು. ಆಗ ಅವರ ಗೆಳೆಯ ಹೆಚ್.ಬಿ. ನಂಜಯ್ಯ ಹೋಟೆಲಿನಲ್ಲಿ ಊಟ ಮಾಡಿಕೊಂಡು ಬಾಡಿಗೆ ಕೊಠಡಿಯಲ್ಲಿದ್ದ. ಗೌಡರು ನಂಜಯ್ಯನ ಆಶ್ರಯ ಪಡೆದರು. ಆದರೆ ಅವರಿಗೆ ಬಾಡಿಗೆ ಕೊಡಲು ಶಕ್ತಿಯಿರಲಿಲ್ಲ. ನಂಜಯ್ಯನವರು ಕೇಳಲೂ ಇಲ್ಲ! ಈ ಎಲ್ಲ ಕಷ್ಟ ಪರಂಪರೆಯ ನಡುವೆ ಫ್ರೀಷಿಪ್ ಹೋಯಿತು. ಒಂದೆರಡು ವಾರದ ಮನೆಗಳ ಊಟವೂ ತಪ್ಪಿಹೋಯಿತು. ಬದುಕೇ ಹಾಗೆ! ಕಷ್ಟಗಳು ಬಂದರೆ ಸಾಲುಗಟ್ಟಿ ಬರುತ್ತವೆ. ಹಿಂಡಿ ಹಿಪ್ಪೆ ಮಾಡುತ್ತವೆ.ಅಂತಹ ದುರ್ದಿನಗಳಲ್ಲಿ ಗೆಳೆಯ ನಂಜಯ್ಯನೇ ಹೋಟೆಲಿನಲ್ಲಿ ಊಟ ಹಾಕಿಸುತ್ತಿದ್ದ.

ಈ ನಡುವೆ ಸಿದ್ದೇಗೌಡರಿಗೆ ಪಿತೃವಿಯೋಗವಾಯಿತು. ತಂದೆ ಪೋಲೀಸು ಕರ್ತವ್ಯದಲ್ಲಿ ಮದ್ದೂರಿನಲ್ಲಿದ್ದಾಗ, ಆತನಿಗೆ ಪ್ಲೇಗ್ ತಗುಲಿ 1921ನೇ ಡಿಸೆಂಬರ್ ತಿಂಗಳಿನಲ್ಲಿ ಮೃತ್ಯುವಿಗೀಡಾದ. ಪ್ಲೇಗ್ ತಗುಲಿದ್ದ ಆತನನ್ನು ಊರಹೊರಗಡೆ ರೊಪ್ಪವೊಂದರಲ್ಲಿ ಇರಿಸಿದ್ದರು. ಆತನಿಗೆ ಕುಟುಕು ಜೀವ ಇದ್ದಾಗ ಇರಲಿ, ಶವಸಂಸ್ಕಾರಕ್ಕೂ ಹತ್ತಿರ ಹೋಗಲೂ ಸಿದ್ದೇಗೌಡರು ಮತ್ತು ಅವರ ತಾಯಿಯನ್ನು ಊರಿನವರು ಬಿಡಲಿಲ್ಲ. ತಾಯಿ ಮಗನ ಗೋಳು ಮುಗಿಲು ಮುಟ್ಟಿತು. ಕೊನೆಗೆ ತಾಯಿ ಸಮಾಧಾನ ಮಾಡಿಕೊಂಡು ಅತ್ತು ಅತ್ತೂ ಹೊಟ್ಟೆ ಉರಿಬರುತ್ತದೆ ಎಂದು ಮಗನಿಗೆ ಬಲವಂತವಾಗಿ ಮೊಸರನ್ನ ಉಣಬಡಿಸಿದಳು. ಸಿದ್ದೇಗೌಡರ ಕಣ್ಣಲ್ಲಿ ಧಾರಾಕಾರವಾಗಿ ಹರಿಯುತ್ತಿದ್ದ ನೀರು ತಣಿಗೆಗೂ ಬೀಳುತ್ತಿತ್ತು!

ಸಿದ್ದೇಗೌಡರು ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕಾಲದಲ್ಲಿ (1918-24) ವಾರಕ್ಕೊಂದಾವರ್ತಿ ಕುಕ್ಕನಹಳ್ಳಿ ಕೆರೆಯಲ್ಲಿ ಮಿಂದು ಬಟ್ಟೆ ಒಗೆದುಕೊಂಡು ಬರುತ್ತಿದ್ದರು. ಸಿದ್ದೇಗೌಡರು ಮೈಸೂರಿನಿಂದ ಊರಿಗೆ ಬರಬೇಕಾದರೆ ಶ್ರೀರಂಗಪಟ್ಟಣಕ್ಕೆ ಟಿಕೆಟ್ ತೆಗೆದುಕೊಂಡು ಮಂಡ್ಯದಲ್ಲಿ ಇಳಿದು ಬಿಡುತ್ತಿದ್ದರು. ದುರದೃಷ್ಟವಶಾತ್ ಒಮ್ಮೆ ಟಿ.ಸಿ. ಕೈಗೆ ಸಿಕ್ಕಿಕೊಂಡು ಪಡಿಪಾಟಲು ಪಟ್ಟರು. ಟಿ.ಸಿ.ಗೌಡರ ಜೇಬಿನಲ್ಲಿದ್ದ 4-5 ಆಣೆಯನ್ನೂ ಕಿತ್ತುಕೊಂಡು ಅವರನ್ನು ಶ್ರೀರಂಗಪಟ್ಟಣ ನಿಲ್ದಾಣದಲ್ಲಿಯೇ ಇಳಿಸಿಬಿಟ್ಟ ! ಅಂದಿನಿಂದ ಗೌಡರು ಟಿಕೆಟ್‌ರಹಿತ ಪ್ರಯಾಣವನ್ನು ನಿಲ್ಲಿಸಿದರು.

ಒಂದು ಸಾರಿಗೌಡರು ಮೈಸೂರಿಗೆ ಹೋಗಬೇಕು. ಆದರೆ ತಾಯಿಯ ಬಳಿ, ದುಡ್ಡು ಇರಲಿಲ್ಲ. ತಾಯಿ ಒಂದು ಮುದ್ದೆ ಹಿಟ್ಟನ್ನು ಕಟ್ಟಿಕೊಟ್ಟರು. ಗೌಡರು ಆ ಬುತ್ತಿಯನ್ನು ಹೊತ್ತು ಮಧ್ಯದಾರಿಯಲ್ಲಿ ಉಂಡು ಸಂಜೆ ಐದು ಗಂಟೆಗೆ ಮೈಸೂರು ತಲುಪಿದರು. ''ನಡೆಯುವ ಶಕ್ತಿ ದೇವರು ಕೊಟ್ಟವರ. ಈಗಲೂ ಆ ಅಭ್ಯಾಸವಾಗುತ್ತಿದೆ. ನನ್ನ ಆರೋಗ್ಯಕ್ಕೆ ಅದೇ ಮೂಲ ಕಾರಣ. ಸರ್ಕಾರಿ ಅಧಿಕಾರಿಯಾಗಿದ್ದಾಗಲೂ 20-30 ಮೈಲಿ ನಡೆದೇ ಕಾರ್ಯಭಾರ ಮಾಡುತ್ತಿದ್ದೆ'' ಎಂದು ಗೌಡರು ನ್ಯೂಯಾರ್ಕ್‌ನಲ್ಲಿ ನೆಲೆಸಿರುವ ತಮ್ಮ ಪುತ್ರ



ಡಾ॥ ಕೆ.ಎಸ್.ಕೃಷ್ಣಪ್ಪನವರಿಗೆ 19-6-1977ರಲ್ಲಿ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಸಿದ್ದೇಗೌಡರು ತಮ್ಮ ಪುತ್ರ ಡಾ॥ಕೆ.ಎಸ್. ಕೃಷ್ಣಪ್ಪನವರಿಗೆ ಬರೆದಿರುವ ಎರಡು ಪತ್ರಗಳು ಚಾರಿತ್ರಿಕವಾಗಿ ಅತ್ಯಂತ ಮಹತ್ವದವುಗಳಾಗಿವೆ. 19ನೇ ಶತಮಾನದ ಮೊದಲ ಭಾಗದ ಮಂಡ್ಯ ಜಿಲ್ಲೆಯ ಹಳ್ಳಿಗಳ ಸ್ಥಿತಿ- ಗತಿ, ಅವಿಭಕ್ತ ಕುಟುಂಬದೊಳಗೆ ನಡೆಯುವ ಅಲ್ಲೋಲ ಕಲ್ಲೋಲ, ವೈಚಿತ್ರ್ಯಗಳು, ಆರ್ಥಿಕ ದುಸ್ಥಿತಿ, ಸಂಕಷ್ಟಗಳನ್ನು ಕಣ್ಣಿಗೆಕಟ್ಟುವಂತೆ ಗೌಡರು ಚಿತ್ರಿಸಿದ್ದಾರೆ. ಇದನ್ನು ಅವರ ಮಾತಿನಲ್ಲೇ ಕೇಳೋಣ;

ನನ್ನ ಹಿಂದಿನ ಕಾಗದದಲ್ಲಿ ನಮ್ಮ ತಾಯಿ ಎಂಥ ಅದೃಷ್ಟಹೀನಳು ನಂಬಿದ್ದ ಆಶ್ರಯಿಸಿದ್ದ ಬಂಧು -ಬಳಗದವರು ಹೇಗೆ ಅಗಲಿದರು, ಅವರ ಸಹಾಯವೆಲ್ಲಾ ಹೇಗೆ ನಷ್ಟಕ್ಕೆ ಒಳಗಾಗಿದ್ದುವು ಎಂಬುದನ್ನು ಬರೆದಿದ್ದೇನೆ. ನನ್ನ ಮೈಸೂರಿನ ವ್ಯಾಸಂಗವನ್ನು ಬರೆಯುವ ಮುನ್ನ ಇನ್ನು ಕೆಲವು ಘಟನೆಗಳನ್ನು ಬರೆಯುತ್ತಿದ್ದೇನೆ. ಹಿಟ್ಟಿಗಾಗಿ ಬಳಲುತ್ತಿದ್ದಾಗ ನಮ್ಮ ಪಕ್ಕದ ಮನೆಯ ಚನ್ನಯ್ಯ ಮಂಡ್ಯದ ಸಂತೆಗೆ ಹೊರಟಿದ್ದ. ಆಗ ಅವನು ರೊಟ್ಟಿತಿಂದು ಹೋಗುತ್ತಿದ್ದ. ಅದನ್ನರಿತ ನನ್ನ ತಾಯಿ ಎಳೆಯ ಕಿರಿಯ ಮಗನಾದ ತಮ್ಮಯ್ಯನನ್ನು ಸುಮ್ಮನೆ ಹೋಗಿ ಅವರ ಮನೆಯಲ್ಲಿ ನಿಂತುಕೊ ಎಂದು ಹೇಳಿಕಳಿಸಿದಳು. ಅವನು ಹೋಗಿ ಒಂದು ರೊಟ್ಟಿ ಚೂರುಗಿಟ್ಟಿಸಿದ. ಮರೆಯಲ್ಲಿ ಕಾದುನಿಂತಿದ್ದ ಕರಿಯ ಆ ರೊಟ್ಟಿಯನ್ನು ಕಿತ್ತುಕೊಂಡು ಪರಾರಿಯಾದ. ತಮ್ಮಯ್ಯನ ಗೋಳು ತಾಯಿಯ ಗೋಳು ಮಿಲನಗೊಂಡವು. ನಾನು ಬೆಳಗಿನ ಜಾವ ಎದ್ದು ಹಿಪ್ಪೆಹಳ್ಳು ಆಯಲಿಕ್ಕೆ ಹೋಗಿ, ಆಯ್ದು ತಂದು ಒಣಗಿಸಿ, ಅವುಗಳನ್ನು ಆಡಿಸಿ- ಒರಳುಕಲ್ಲಿನಲ್ಲಿ ಒನಕೆಯಿಂದ ಕುಟ್ಟಿ ನನ್ನ ಅಜ್ಜಿಯನ್ನು ತೃಪ್ತಿ ಪಡಿಸುತ್ತಿದ್ದೆ. ಆ ಎಣ್ಣೆಯನ್ನು ದೀಪಕ್ಕೆ ಬಳಸುತ್ತಿದ್ದರು. ಒಂದು ದಿನ ಮರದವನು ನನ್ನ ಕಪಾಳಕ್ಕೆ ಜೋರಾಗಿ ಹೊಡೆದ. ಕಿವಿಯಲ್ಲಿದ್ದ ಉಂಗುರ ಬಿದ್ದು ಹೋಯಿತು. ಹೊಡೆದವನನ್ನು ಬಿಟ್ಟು ಬೇರೆಯವನ ಹೆಸರು ಹೇಳಿಬಿಟ್ಟೆ. ಅದರಿಂದ ಊರಲ್ಲಿ ದೊಡ್ಡ ಜಗಳವೇ ಆಯಿತು. ಅವನು

ಚುರು ಚುರುಕಿನ ಸೊಪ್ಪಿನ ಕಡ್ಡಿಯಿಂದ ಹೊಡೆದದ್ದರಿಂದ ನನ್ನ ಮೈಯೆಲ್ಲಾ ಕಡಿಯಲು ಪ್ರಾರಂಭವಾಗಿ ಮೈಯೆಲ್ಲಾ ಗಂಧೆಗಳಾದುವು. ನನ್ನ ತಾಯಿ ಮೊಸಪ್ಪಿನ ಸಾರು ಮಾಡಿದರೆ ಬೀದಿಯೆಲ್ಲಾ ಘಮ ಘಮವೆನ್ನುತ್ತಿತ್ತು. ಅದನ್ನು ಕಂಡು ಅಕ್ಕಪಕ್ಕದವರು ಸಾರಿಗೆ ಬರುತ್ತಿದ್ದರು. ಒಂದು ದಿವಸ ಹಾಗೆ ಮಾಡಿದಾಗ ನನಗೊಂದು ಮುದ್ದೆ ಕೊಟ್ಟಳು. ನಾನಿನ್ನೂ ಉಣ್ಣುವ ಆಸೆಯಿದೆ ಎಂದರಿತು ಮತ್ತೊಂದು ಮುದ್ದೆ ಕೊಟ್ಟಳು. ಮೊಸಪ್ಪಿನ ಸಾರೂ ಐದು ಮುದ್ದೆಗಳೂ ಮುಗಿದು ಹೋದುವು! ಆ ದಿವಸ ಎಲ್ಲರಿಗೂ ಉಪವಾಸ. ಆ ಮೇಲೆ ನಾನು ಎಲ್ಲಿ ಹೋಗಿ ಬಂದರೂ ಮತ್ತೊಂದಾವರ್ತಿ ಇದ್ದರೆ ಮನೆಯಲ್ಲಿ ಮತ್ತೊಂದು ಊಟ ಹಾಕುತ್ತಿದ್ದಳು. ಹೊರಗಡೆ ಹಾಗೆ ಊಟ ಮಾಡಬೇಡವೆಂದು ಬುದ್ಧಿ ಹೇಳುತ್ತಿದ್ದಳು. ನನ್ನ ಭಾವ ಮೈದುನನ ಸಂಗಡವೂ, ನಂಜಯ್ಯನ ಮದುವೆ ಸಂದರ್ಭದಲ್ಲೂ ಇನ್ನು ಕೆಲವು ಕಡೆ ಜೂಜುಕಟ್ಟಿ ಇಂಥ ಕೃತ್ಯಗಳನ್ನು ನಡೆಸಿದ್ದೇನೆ. ಹೈಸ್ಕೂಲಿನಲ್ಲಿ ಮೈಸೂರಲ್ಲಿ ಓದುತ್ತಿದ್ದು ಬೇಸಿಗೆ ರಜಕ್ಕೆ ಊರಿಗೆ ಬಂದೆ. ಊರಲ್ಲಿ ಬಡತನವು ಹೆಪ್ಪುಗಟ್ಟಿತ್ತು. ಮದ್ದೂರಲ್ಲಿ ಜಾತ್ರೆ. ಬರಿಗೈಲಿ ಜಾತ್ರೆಗೆ ಹೊರಟೆ, ನನ್ನವ್ವ ಒಂದಾಣೆ ಕೊಟ್ಟು ಉಪ್ಪು ತಾ ಎಂದು ಕೊಟ್ಟಳು. ಹೋದೆ . ಲಾಟರಿ ಹಾಕಿ ಗೆಲ್ಲುತ್ತಿದ್ದವರನ್ನು ನೋಡಿ ನಾನೂ 3 ಕಾಸು ಹಾಕಿದೆ. ಹೋಯ್ತು. ಹಾಗೇನೇ 1 ಆಣೆಯನ್ನೂ ಕಳೆದು ಕೊಂಡು ಸಪ್ಪೆ ಮೊಖ ಮಾಡಿ ಮನೆಗೆ ಬಂದೆ. ತಾಯಿಗೆ ತಪ್ಪನ್ನೊಪ್ಪಿಸಿದೆ. ನನಗೆ ಉಪ್ಪಿಗೂ ಅದೃಷ್ಟವಿಲ್ಲವೆಂದು ಸಂಕಟಪಟ್ಟಳು.

ಬೇಸಿಗೆ ರಜದಲ್ಲಿ ಊರಿಗೆ ಬಂದಾಗ ಅಲ್ಲಿರದೆ ಹೊಸೂರು ನಂಜಯ್ಯನ ಮನೆಗೂ, ಕೋಣಸಾಲೆಗೂ ಹೋಗಿ ರಜ ಕಳೆಯುತ್ತಿದ್ದೆ. ಇದ್ದರೆ ಕೂಲಿ ಮರಿಗೆ ಹೋಗುತ್ತಿದ್ದೆ. ಆ ಊರುಗಳಲ್ಲಿ ತಮಾಷೆಗಾಗಿ ಹೊಲ ಉಳುತ್ತಿದ್ದೆ. ನಂಜಯ್ಯನ ತಾಯಿ ತಾಯಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದಳು. ಕೋಣಸಾಲೆ ಭಾವನ ತಾಯಿ ಕಾಳಿಂಗಮ್ಮನೂ ಅಷ್ಟೇ. ಮಾಂಸದೂಟ ಕನಸು ತಾನೆ?, ನಾನು ಮೀನುಗಳನ್ನು ಹಿಡಿದು ಊಟ ಮಾಡಿಸುತ್ತಿದ್ದೆ. ಊರಲ್ಲಿ ಯಾರ ಮದುವೆಯಾದರೂ ಗಂಡಿನ ಗೆಳೆಯನಾಗಿ ಹೋಗುತ್ತಿದ್ದೆ.



ನಿಂಗಯ್ಯ ಮೈಗಳ್ಳ. ಅವನಿಗೂ ನನಗೂ ನಿತ್ಯ ಹೊಡೆದಾಟವೇ ಆಗುತ್ತಿತ್ತು. ರಜದಲ್ಲಿ ತಿಟ್ಟಿನಲ್ಲಿ ತೊಪ್ಪೆ ಆದು ಒಂದು ವರ್ಷ 3 ಖಂಡುಗ ಭತ್ತ ಬೆಳದದ್ದೇ ನಮ್ಮ ಹರ್ಷದ ವರ್ಷ. ನನ್ನ ಜವರಾಯಿ ಚಿಕ್ಕಪ್ಪನಿಗೆ 3ನೇ ಹೆಂಡ್ತಿ ಚಾಮನಹಳ್ಳಿಯವಳು. ನಾನೂ ನನ್ನ ಅಜ್ಜಿಯೂ ಅಲ್ಲಿಗೆ ಊಟಕ್ಕೆ ಹೋಗಿದ್ದೆವು. ಅಲ್ಲಿ ವಿಶೇಷವಾಗಿ ಹಂದಿ ಮಾಂಸವನ್ನು ಉಪಯೋಗಿಸುತ್ತಿದ್ದರು. ನನಗೆ ಉಂಡಾಗ ಏನೋ ಒಂದು ತರಹ ಆಯ್ತು. ಅದನ್ನು ನಮ್ಮ ಮನೆಯವರು ತಿನ್ನದಂತೆ ಮಾಡಲು ಬಯಸಿದೆ. ನಂಜುಂಡೇಶ್ವರ ಬಂದನೆಂದು ನಟಿಸಿದೆ. ಗಂಧದಕಡ್ಡಿಯನ್ನು ಹಚ್ಚಿ ನನ್ನಜ್ಜಿ ಬೇಡಿಕೊಂಡಳು. ನಾನು ನಂಜುಂಡೇಶ್ವರ, ಈ ಮಾಂಸವನ್ನು ಮುಟ್ಟಕೂಡದು, ಮುಟ್ಟಿದರೆ ನಿಮ್ಮನ್ನು ನಾಶ ಮಾಡುತ್ತೇನೆಂದು ಹೇಳಿದೆ. ಹಾಗೇ ಆಗಲೆಂದು ಅಂದಿನಿಂದ ನಾವುಗಳು ಹಂದಿಮಾಂಸ ಉಪಯೋಗಿಸುವುದಿಲ್ಲ. ಮೈಸೂರಿನಲ್ಲಿ ವಾರ ಮಾಡಿಕೊಂಡು ಓದುತ್ತಿದ್ದಾಗ ನನ್ನ ಜವರಾಯಿ ಚಿಕ್ಕಪ್ಪ ನಂಜನಗೂಡು ದೇವರಿಗೆ ಹೋಗಿ ಬಂದು ನನ್ನನ್ನು ನೋಡಿದ. ಆಗ ಊಟದ ಸಮಯ. ಮಂಗಳವಾರದವರ ಮನೆಗೆ ಹೋಗುತ್ತಿದ್ದೆ. ನನಗೂ ಊಟ ಹಾಕಿಸು ಮೊಗ ಎಂದ. ಹೂಂ ಎಂದೆ. ಒಳಗೆ ಹೋಗಿ ಮನೆಯವರನ್ನು ಕೇಳಲು ನಾಚಿಕೆಯಾಯಿತು. ನನಗೆ ಬೇಡಿ, ನಮ್ಮ ತಂದೆಗೆ ಹಾಕಿ, ಅಥವಾ ಅವನಿಗೂ ಹಾಕಿ ಎಂದು ಕೇಳಿದ್ದರೆ ಆಗುತ್ತಿತ್ತು. ಹಾಗೆ ಮಾಡಲಿಲ್ಲ. ಊಟ ಮಾಡಿ ಹೊರಗೆ ಬಂದೆ. ಚಿಕ್ಕಪ್ಪನಿಗೆ ಊಟವಿಲ್ಲವಂತೆ ಎಂದು ಹೇಳಿಬಿಟ್ಟೆ. ನಮ್ಮೆಲ್ಲರನ್ನೂ ಸಾಕಿದವನು ಅವನೇ. ಅವನಿಗೆ ನಾ ಮಾಡಿದ ಉಪಕಾರವೆಂಥದ್ದು. ಈ ಸಂಗತಿ ಈಗಲೂ ನನ್ನನ್ನು ಬಾಧಿಸುತ್ತಿದೆ. ಮೈಸೂರಿಂದ ಊರಿಗೆ ಬರಬೇಕಾದರೆ ರೈಲು ಟಿಕೆಟ್ಟನ್ನು ಶ್ರೀರಂಗಪಟ್ಟಣಕ್ಕೆ ತೆಗೆದುಕೊಂಡು ಮಂಡ್ಯಕ್ಕೆ ಬಂದು ಬಿಡುತ್ತಿದ್ದೆ. ಆಗ ನಾಲ್ಕಾಣೆ. ಅದನ್ನು ನಂಜಯ್ಯನೆ ಕೊಡುತ್ತಿದ್ದ. ಒಂದು ದಿವಸ ಸಿಕ್ಕಿಕೊಂಡೆ. ಜೇಬಿನಲ್ಲಿ 4-5ಆಣೆ ಇತ್ತು. ಅದನ್ನು ಕಿತ್ತುಕೊಂಡ. ಅಲ್ಲಿಯೇ ಇಳಿಸಿಬಿಟ್ಟ. ಮುಂದಿನ ಗಾಡಿಯಲ್ಲಿ ಬಂದೆ, ಅಂದಿನಿಂದ ಆ ಕೆಲಸ ಬಿಟ್ಟೆ. ಒಂದಾವರ್ತಿ ಊರಿಂದ ಮೈಸೂರಿಗೆ ಹೋಗಬೇಕು. ತಾಯಿ ಹತ್ತಿರ ದುಡ್ಡಿಲ್ಲ. ಒಂದು ಮುದ್ದೆ ಹಿಟ್ಟನ್ನು

ಕಟ್ಟಿಕೊಟ್ಟಳು. ಆ ಬುತ್ತಿಯನ್ನು ಹೊತ್ತು ಮಧ್ಯದಲ್ಲಿ ಉಂಡು ಸಂಜೆ 5 ಗಂಟೆಗೆ ಮೈಸೂರು ಸೇರಿ ಕಾಲ್ಚೆಂಡಾಟವಾಡಿ ಸಾಯಂಕಾಲ ವಾರದ ಮನೆಯಲ್ಲಿ ಊಟಮಾಡಿದೆ. ಹಾಗೆ ನಡೆಯುವ ಶಕ್ತಿ ದೇವರು ಕೊಟ್ಟವರ. ಈಗಲೂ ಆ ಅಭ್ಯಾಸ ಸಾಗುತ್ತಿದೆ. ನನ್ನ ಆರೋಗ್ಯಕ್ಕೆ ಅದೇ ಮೂಲಕಾರಣ. ಅಧಿಕಾರಿಯಾಗಿದ್ದಾಗಲೂ 20-30 ಮೈಲಿ ನಡೆದೇ ಕಾರ್ಯಭಾರ ಮಾಡುತ್ತಿದ್ದೆ. ನಮ್ಮ ಮನೆ ಮುಂದೆ ಮುಂಚಿನ ಮನೆಯವನು ಮನೆಕಟ್ಟಲು ನಮ್ಮ ಜಾಗವನ್ನು ಒತ್ತರಿಸಿ ಹದಿತೆಗೆದ. ಹಾಗೆ ತೆಗೆಯದಂತೆ ನಮ್ಮಪ್ಪ ತಲೆಯನ್ನು ಹದಿ ಮೇಲಿಟ್ಟು ಕಡಿ ಎಂದ. ಇದರ ಅರ್ಥ ಈಗ ನನಗಾಗುತ್ತಿದೆ.

19-6-1977

ನಮ್ಮ ಮನೆತನದ ಚರಿತ್ರೆಯಲ್ಲಿ ನಿನಗೆ ಆಸಕ್ತಿ ಹುಟ್ಟಿರುವ ಹಾಗೆ ಕಾಣುತ್ತದೆ. ಒಳ್ಳೆಯದು. ವಂಶದ ಹೆಮ್ಮೆಯಿದ್ದರೆ ವಂಶದ ಕೀರ್ತಿಯನ್ನು ಕಾಪಾಡುವ ಮನಸ್ಸು ಹುಟ್ಟುತ್ತದೆ. ಅದನ್ನು ವೃದ್ಧಿಪಡಿಸುವ ಧ್ಯೇಯವೂ ಮೂಡುತ್ತದೆ. ನಾನು ಮೈಸೂರಿಗೆ ಹೋಗುವಾಗ ಮತ್ತು ಹೋದ ಮೇಲೆ ಅಂದರೆ 1918-1924ರ ಅವಧಿಯಲ್ಲಿ ನಮ್ಮ ಮನೆ ವಾರ್ತೆ ಅತಿ ಭಯಂಕರ ಮತ್ತು ದುಃಖಮಯವಾಗಿತ್ತು. ಅಂಥ ಸನ್ನಿವೇಶದಲ್ಲಿ ನಾನೇ ಮನೆಗೆ ಹಿರಿಯನಾಗಿದ್ದು ವಿದ್ಯಾಭ್ಯಾಸವನ್ನು ಮುಂದುವರಿಸಿದ್ದೂ ಮತ್ತು ನನ್ನ ತಾಯಿ ಉತ್ತೇಜನ ಕೊಟ್ಟಿದ್ದೂ ಒಂದು ಪವಾಡವೇ ಸರಿ. ಊರಲ್ಲಿ ನನ್ನ ದೊಡ್ಡಚಿಕ್ಕಪ್ಪ ಜವರಾಯಿಗೌಡ ಮನೆಯ ಯಜಮಾನ. ಸಂಸಾರವೆಲ್ಲಾ ಅವನ ಹೆಗಲ ಮೇಲಿತ್ತು. ನನ್ನ ಕಿರಿಯ ಚಿಕ್ಕಪ್ಪ ಸಿದ್ದೇಗೌಡ ವ್ಯವಸಾಯದಲ್ಲಿ ನಿರತನಾಗಿ ಸದಾಗೇಯುತ್ತಿದ್ದ. ಮುಖ್ಯವಾದ ಜೀವನೋಪಾಯ ವ್ಯವಸಾಯ ಮತ್ತು ರೇಷ್ಮೆ ಹುಳು ಸಾಕುವುದು. ದನಗಳ ವ್ಯಾಪಾರದಲ್ಲಿ ಜವರಾಯಿಗೌಡ ದಳ್ಳಾಳಿಯಾಗಿ; ಅಲ್ಪ ಹಣ ಸಂಪಾದಿಸುತ್ತಿದ್ದ. ಹೊಲಗೆಲಸ ಮುಗಿದ ಮೇಲೆ ಒಂದು 3 ತಿಂಗಳು ಕಾಲ ಬೆಂಗಳೂರಿಗೆ ಭತ್ತದ ಹುಲ್ಲಿನ ಗಾಡಿ ಹೊಡೆದು ಕೊಂಡು ಹೋಗುತ್ತಿದ್ದ ಸಿದ್ದೇಗೌಡ. ಬೆಂಗಳೂರಿಂದ ಮೈಸೂರಿಗೆ ವರ್ತಕರ ಸಾಮಾನನ್ನು ಬಾಡಿಗೆಗೆ ಸಾಗಿಸುತ್ತಿದ್ದ.



ಹಾಗೆ ನಮ್ಮೂರಿಂದ 8-10 ಗಾಡಿ ಹೋಗುತ್ತಿದ್ದವು. ಅವರು ಹಿಂದಿರುಗಿದಾಗ ಕಡ್ಲೆ, ಸಕ್ಕರೆ ಇನ್ನೂ ಕೆಲವು ಸಾಮಾನುಗಳನ್ನು ಕದ್ದು ತರುತ್ತಿದ್ದರು. ಕಡಲೆ, ಸಕ್ಕರೆ ಸಿಕ್ಕಿದಾಗ ನಮ್ಮ ಸಂತೋಷಕ್ಕೆ ಪಾರವೇ ಇಲ್ಲ. ನಮ್ಮ ತಂದೆ ತಿಂಗಳಿಗೆ 6ರೂ ನಮ್ಮಜ್ಜಿ ಕೈಲಿತಂದು ಕೊಟ್ಟುಬಿಡುತ್ತಿದ್ದ. ಇನ್ನೇನೂ ಅವನ ಜವಾಬ್ದಾರಿಯೆ ಇರುತ್ತಿರಲಿಲ್ಲ. ನಾವೇಳು ಮಕ್ಕಳು, ಸಿದ್ದೇಗೌಡನ ಇಬ್ಬರು ಹೆಣ್ಣು ಮಕ್ಕಳು ಮತ್ತು ಜವರಾಯಿಗೌಡನ ಒಬ್ಬ ಮಗ– ಇವರೆಲ್ಲರ ಪೋಷಣೆ ಅವನ ಹೊಣೆ. ಅಲ್ಲದೆ ಜವರಾಯಿಗೌಡನಿಗೆ 3 ಹೆಂಡ್ತಿಯರು. ಮೊದಲನೆ ಹೆಂಡ್ತಿಯಲ್ಲಿ ಒಬ್ಬ ಗಂಡು ಮಗ, 2ನೆಯವಳಿಗೆ ಮಕ್ಕಳಿರಲಿಲ್ಲ, 3ನೆಯವಳಲ್ಲಿ ಒಂದು ಹೆಣ್ಣು. 1918-19ರಲ್ಲಿ ಇನ್‌ಫ್ಲೂಯೆಂಜ ಮಾರಿ ಗುಡುಗಿದಳು. ಗೇಯುವ ಸಿದ್ದೇಗೌಡ, ಅವನ ಹೆಂಡ್ತಿ, ಅಜ್ಜಿ ಅದಕ್ಕೆ ತುತ್ತಾದರು. ಜವರಾಯಿಗೌಡನಿಗೆ ಚಿಕ್ಕ ಹೆಂಡ್ತಿ ಕಾಟ. ನಮ್ಮ ತಾಯಿ ಹಳವಾರಿ. ನಮ್ಮಪ್ಪ ನಿರ್ಲಿಪ್ತ. ಉಳುವುದಕ್ಕೆ ಸಮರ್ಥನಾಗಿದ್ದವನು ನಾನೊಬ್ಬನೇ. ಆದರೆ ನಾನು ವಿದ್ಯಾರ್ಥಿ. ಕುಟುಂಬರಕ್ಷಣೆಗೆ ಚಿಕ್ಕಪ್ಪ 400-500ರೂ ಸಾಲ ಮಾಡಿಬಿಟ್ಟ. ಅದು ಆ ಕಾಲಕ್ಕೆ ಹೊರಲಾರದ ಹೊರೆ. ನನ್ನ ತಂದೆಗೆ ಪಾಲುಕೊಟ್ಟು ಬೇರೆಮಾಡಿದ. ನನ್ನ ತಾಯಿಗೆ ಶನಿಹೆಗಲೇರಿದ. ಅಷ್ಟು ಹೊತ್ತಿಗೆ ನನ್ನ ಅಕ್ಕನನ್ನು ಕೋಣಸಾಲೆಗೆ ಕೊಟ್ಟು ಮದುವೆಯಾಗಿತ್ತು. ನನ್ನ ಭಾವ (ನಿಂಗಯ್ಯನ ಹೆಂಡ್ತಿ ಅಪ್ಪ)ನಿಗೆ ವ್ಯವಸಾಯದ ಹೊರೆಬಿತ್ತು. ನಿಂಗಯ್ಯ ಮೈಗಳ್ಳ.

ಅದೇ ಸಮಯಕ್ಕೆ ನನ್ನ ಅಕ್ಕ ತೀರಿಕೊಂಡಳು; ಒಬ್ಬ ಮಗಳನ್ನು ಬಿಟ್ಟು. ಆದಾಗಿ ಕೆಲವು ದಿನಗಳಲ್ಲೇ ಜವರಾಯಿ ಚಿಕ್ಕಪ್ಪನೂ ಕಣ್ಮರೆಯಾದ. ಅನಂತರ ಕೆಲವು ತಿಂಗಳಲ್ಲಿ ನನ್ನ ತಂದೆಯೂ ಪೋಲೀಸು ಕರ್ತವ್ಯದಲ್ಲಿ ಮದ್ದೂರಿನಲ್ಲಿದ್ದಾಗ ಪ್ಲೇಗು ತಗುಲಿ ಊರಿಗೆ ಬಂದು 1921ನೆ ಡಿಸೆಂಬರಿನಲ್ಲಿ ದೈವಾಧೀನನಾದ. ಅಕ್ಕ ಸತ್ತ ಮೇಲೆ ಭಾವಯಾರಿಗೆ? ಆದರೆ ಕೋಣಸಾಲೆ ದೊಡ್ಡನಿಂಗೇಗೌಡರು ನಿಜವಾಗಿಯೂ ದೊಡ್ಡವರೆ, ಅಂತಹ ಉದಾರ ಹೃದಯಿಗಳು ಈ ಜಗತ್ತಿನಲ್ಲಿ ಇರುವುದುಂಟೆ ಎಂದು ಶಂಕಿಸುವ

ಕಾಲ ಬಂದಿದೆ. ಗ್ರಾಮದ ಕಟ್ಟು ಪಾಡುಗಳ ಪ್ರಕಾರ ನನ್ನ ತಂದೆಯನ್ನು ಊರಿಗೆ ಎರಡು ಫರ್ಲಾಂಗು ದೂರದ ಒಂದು ಗುಡಿಸಿಲಿನಲ್ಲಿಟ್ಟರು. ಜವರಾಯಿಗೌಡ ಮತ್ತು ನನ್ನ ಸೋದರತ್ತೆ ಗಂಡ ಇಬ್ಬರೇ ಅವನ ಶುಶ್ರೂಷೆ ಮಾಡಿ ಇಬ್ಬರೇ ಅವನ ಹೆಣ ಹೊತ್ತು ಮಣ್ಣು ಮಾಡಿದರು. ನಾವೆಲ್ಲರೂ ದೂರದಲ್ಲೆ ನಿಂತು ಬಾಯಿ ಬಡಿದುಕೊಂಡೆವು. ನಮ್ಮ ಊರಿಗೆ ಬಂದಾಗ ಊರ ನಾಯಿಯೊಂದಕ್ಕೆ ಒಂದು ತುತ್ತು ಹಿಟ್ಟು ಹಾಕುತ್ತಿದ್ದ. ಅದು ನಿತ್ಯವೂ ಅವನ ಸಮಾಧಿ ಹತ್ತಿರ ಹೋಗಿ ಬಗೆದು ಕಿರಿಚುತ್ತಿದ್ದು ಹಾಗೇ ಅದೂ ಕಣ್ಮರೆಯಾಯಿತು. ಕೋಣಸಾಲೆಯಿಂದ ಹಸುಕೊಟ್ಟರು. ಆಡುಕೊಟ್ಟರು. ಕುರಿಗಳನ್ನು ಕೊಟ್ಟರು. ಒಂದು ದೊಡ್ಡ ಮಂಕರಿಯಲ್ಲಿ ಹಿಟ್ಟಿನ ಮುದ್ದೆಗಳನ್ನು ಮಜ್ಜಿಗೆಯನ್ನೂ ಹೊತ್ತು ತಂದು ಕೊಡುತ್ತಿದ್ದರು, ನಾವೈದು ನಮ್ಮ ಚಿಕ್ಕ ಚಿಕ್ಕಪ್ಪನ ಇಬ್ಬರು ಹೆಣ್ಣುಮಕ್ಕಳು, ಜವರಾಯಿಗೌಡನೊಬ್ಬ ಮಗ ಎಲ್ಲರಿಗೂ ನನ್ನ ತಾಯಿಯೇ ತಾಯಾದಳು. ಮನೆ ಬಿಟ್ಟು ಹೊಲಗದ್ದೆ ಕಡೆಗೂ ಹೋಗದವಳು ಹಸಿವೆಯಿಂದ ತೂರಾಡುತ್ತಾ ಮಗಳನ್ನು ಗಂಡನನ್ನೂ ನೆನೆದುಕೊಂಡು ತಿಟ್ಟು ಮೇಲೆ ನಿಂತು ಅಳಲು ಪ್ರಾರಂಭಿಸಿದಳು.

ನಿಂಗಯ್ಯ ಬೇಸಾಯ ಮಾಡಲು ಸೋಮಾರಿಯಾಗಿ ದನಕುರಿಗಳನ್ನು ಹೊಡೆದು ಸಾಯಿಸಿಬಿಡುತ್ತಿದ್ದ. ಕೋಣಸಾಲೆಯವರು ಕೊಟ್ಟ ದನಕರಗಳೂ ಕೂಡ ರಾತ್ರಿಹೊತ್ತು ಮನೆಯಲ್ಲಿ ನೆಗೆದುಬಿದ್ದು ಸತ್ತು ಹೋಗುತ್ತಿದ್ದುವು. ಇದ್ದಿದ್ದನ್ನು ಅಡಿಗೆ ಆಗುವವರೆಗೆ ಸುಮ್ಮನಿದ್ದು ಆದಕೂಡಲೆ ನಿಂಗಯ್ಯ ಯಾರನ್ನೂ ಕೂಡದೆ ತಾನೊಬ್ಬನೇ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ. ನಾತೇಗೌಡನು 2 ಖಂಡುಗರಾಗಿಗೆ ಹನಕೆರೆ ಚಿಕ್ಕಪ್ಪನ ಮನೆಗೆ ಜೀತಗೇಯಲು ಹೋದ. 5 ವರ್ಷಗೇದರೂ ಅವರ ಸಾಲ ತೀರಲಿಲ್ಲ. ನನ್ನ ಹನಕೆರೆ ಚಿಕ್ಕಪ್ಪ ಮನೆವಾಳತನಕ್ಕೆ ಮದುವೆಯಾಗಿದ್ದರಿಂದ ಅವನಿಗೆ ಸ್ವತಂತ್ರತೆ ಇರಲಿಲ್ಲ. ಹಾಗಿದ್ದರೂ ಕದ್ದು ಕಾಣದ ಹಾಗೆ ಹಸಿಟ್ಟು, ಹುರುಳಿ, ಹುಲ್ಲನ್ನು ಕದ್ದು ತಂದು ಕೊಡುತ್ತಿದ್ದ. ಯಾವುದೋ ಪಿಶಾಚಿ ಮನೆಯೊಳಗಿದೆ ಎಂದು ಚಿಕ್ಕಮ್ಮ ಊರಿಗೆ ಪೂರ್ವವಾಗಿ ಹನಕೆರೆಗೆ ಹೋಗುವ ದಾರಿಯಲ್ಲಿ



ಒಂದು ಗುಡಿಸಲನ್ನು ಹಾಕಿಕೊಂಡು ಎದುರಿಗಿರುವ ಸ್ಮಶಾನವನ್ನು ನೋಡುತ್ತಾ ಹತ್ತಾರು ತಿಂಗಳು ಕಳೆದಳು. ಜವರಾಯಿಗೌಡನ ಮಗ ಸೋದರ ಮಾವನ ಮನೆಗೆ ದೊಡ್ಡಿಗೆ ಹೊರಟುಹೋದ. ಅವನ ಚಿಕ್ಕ ಹೆಂಡ್ತಿ ಒಂದು ಮಗು ಕಟ್ಟಿಕೊಂಡು ಒಂದು ಹಸು ಹಿಡಿದು ಕೊಂಡು ತೌರಿಗೆ ಹೊರಟುಹೋದಳು. ನನ್ನ ಚಿಕ್ಕಚಿಕ್ಕಪ್ಪನ ಎರಡು ಹೆಣ್ಣು ಮಕ್ಕಳು ನಮ್ಮಲ್ಲೆ ಉಳಿದು ಕೊಂಡವು. ನಮ್ಮ ತಾಯಿಯ ಮೈಮೇಲೆ 10-15ರೂಗಳ ಬೆಳ್ಳಿ ಒಡವೆಗಳಿದ್ದುವು. ತೌರಾದ ಕುದುರುಗುಂಡಿಗೆ ಹೋಗಿ ಅಡುವಿಟ್ಟು ಮಕ್ಕಳನ್ನು ಸಾಕುತ್ತಿದ್ದಳು. ಆ ಒಡವೆಗಳನ್ನು ಬಿಡಿಸಿಕೊಳ್ಳಲಾಗಲೇ ಇಲ್ಲ. ಅವಳ ತಾಯಿಯೂ ಆ ಅವಧಿಯಲ್ಲೇ ತೀರಿಕೊಂಡಿದ್ದಳು. ನಮ್ಮ ಸೋದರ ಮಾವಂದಿರಿಬ್ಬರೂ ತೀರಿಹೋಗಿ ಅವರ ಸಣ್ಣ ಮಕ್ಕಳು ಬದುಕುತ್ತಿದ್ದರು. ದೊಡ್ಡಕಟ್ಟೆಯ ಹತ್ತಿರ ಸ್ಮಶಾನದಲ್ಲಿ ಬೆಳೆದಿದ್ದ ನೇರಿಲೆ ಮರದ ಹಣ್ಣು, ಸೊಪ್ಪು ನಮ್ಮಗಳಿಗೆ ಅನೇಕ ದಿನಗಳ ಆಹಾರ. ನನ್ನ ತಾಯಿಯ ಸೀರೆ 3-4 ಬಣ್ಣದ ತೇಪೆ. ಆ ಒಂದು ಬಣ್ಣವನ್ನು ಉಟ್ಟು, ಒಗೆದು ಸ್ನಾನ ಮಾಡಿ ಯಾರೂ ದೊಡ್ಡಕಟ್ಟೆ -ಬಳಿಯಿಲ್ಲದಾಗ -ಬರುತ್ತಿದ್ದಳು. ಒಂದು ದಿನ ಹಾಗೆ ಸ್ನಾನ ಮಾಡುತ್ತಿದ್ದುದ್ದನ್ನು ನೋಡಿ ಅವಳಿಗೆ ಕಾಣಿಸಿಕೊಳ್ಳ ಬಾರದೆಂದು ಮರದ ಹಿಂದೆ ಓಡಿ ಅತ್ತು ಬಿಟ್ಟೆ.

23-5-1977

ಸಿದ್ದೇಗೌಡರು ಪ್ರೌಢಶಾಲೆ ಎರಡನೆ ತರಗತಿಯಲ್ಲಿದ್ದಾಗ ಎಂ.ಎಲ್.ಲಿಂಗಣ್ಣನವರ ಕೊಠಡಿಯಲ್ಲಿದ್ದು ಕೊಂಡು ವ್ಯಾಸಂಗ ಮಾಡುತ್ತಿದ್ದರು. ಅವರಿಗೆ ಏಬ್ರಹಾಂಲಿಂಕನ್‌ನ ಜೀವನ ಚರಿತ್ರೆ (ಆಂಗ್ಲಭಾಷೆ)ಪಠ್ಯಪುಸ್ತಕವಾಗಿತ್ತು. ಆ ಪುಸ್ತಕ ಗೌಡರ ಮೇಲೆ ಅಪಾರ ಪ್ರಭಾವ ಬೀರಿತು. ಬಂಕಿಮಚಂದ್ರ ಚಟರ್ಜಿ ಅವರ 'ವಂದೇಮಾತರಂ' ದೇಶಭಕ್ತಿ ಗೀತೆ ಅವರಲ್ಲಿ ದೇಶಾಭಿಮಾನವನ್ನು ಉದ್ದೀಪನಗೊಳಿಸಿತು.

ಆಗಿನ ಕಾಲದಲ್ಲಿ ಮೈಸೂರು ಸಂಸ್ಥಾನವನ್ನಾಳಿದ ಮಹಾಪ್ರಭು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು (ಕ್ರಿ.ಶ.1902-1940) ಹಾಗೂ

ಧರ್ಮಪ್ರವರ್ತಕ ಸಾಹುಕಾರ್ ಡಿ.ಬನುಮಯ್ಯನವರು ಪರಮಾಪ್ತರಾಗಿದ್ದು ಪ್ರತಿದಿನ ಪ್ರಾತಃಕಾಲ ಜೊತೆಯಲ್ಲಿ ವಾಯುವಿಹಾರಕ್ಕೆ ಹೋಗುತ್ತಿದ್ದರು. ಒಂದು ದಿನ ವಾಯುವಿಹಾರದಿಂದ ಹಿಂದಿರುಗಿ ಬರುವಾಗ ಮಹಾಪ್ರಭು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಸಾಹುಕಾರ್ ಡಿ.ಬನುಮಯ್ಯನವರೊಡನೆ ಸಿದ್ದೇಗೌಡರ ತರಗತಿಗೆ ಆಗಮಿಸಿದಾಗ ವಿದ್ಯಾರ್ಥಿಗಳು ಎದ್ದುನಿಂತು ಮಹಾರಾಜರಿಗೆ ಗೌರವ ಸಲ್ಲಿಸಿದರು. 'ಮಹಾರಾಜರು ಉಪಾಧ್ಯಾಯರನ್ನು ಏನುಪಾಠ ಮಾಡ್ತಾ ಇದ್ದೀರಿ?' ಎಂದು ಪ್ರಶ್ನಿಸಿದರು. ನಂತರ ಅವರು ವಿದ್ಯಾರ್ಥಿಗಳನ್ನುದ್ದೇಶಿಸಿ ''ಲೋ ಹುಡುಗರಿರಾ ಕೈಬಾಯಿ ಕಚ್ಚೆ ಸರಿಯಾಗಿದ್ದರೆ ಬಾಳು ಬದುಕು ಸೊಗಸು'' ಎಂದು ಹಿತವಚನ ಹೇಳಿದರು. ಮಹಾರಾಜರ ಈ ಹಿತನುಡಿ ಸಿದ್ದೇಗೌಡರ ಮನದಲ್ಲಿ ಸ್ಥಿರವಾಗಿ ನಿಂತುಬಿಟ್ಟಿತು. ಈ ಸಂಗತಿಯನ್ನು ತಮ್ಮ ತಂದೆ ಆಗಾಗ್ಗೆ ನೆನಪು ಮಾಡಿಕೊಳ್ಳುತ್ತಿದ್ದರು ಎಂದು ಸಿದ್ದೇಗೌಡರ ಎರಡನೇ ಮಗ ಕೆ.ಎಸ್.ಶ್ರೀಕಂಠಸ್ವಾಮಿ ತಿಳಿಸಿದರು.

ಸಿದ್ದೇಗೌಡರು ಕೆಲವು ಕಾಲ ರಾತ್ರಿವೇಳೆ ಸಾಹುಕಾರ್ ಡಿ.ಬನುಮಯ್ಯ ಅವರಿಗೆ ವರ್ತಮಾನ ಪತ್ರಿಕೆಗಳನ್ನು ಓದಿಹೇಳುತ್ತಿದ್ದರು.

1923-24ರಲ್ಲಿ ಬನುಮಯ್ಯನವರ ಪ್ರೌಢಶಾಲೆ ಜೂನಿಯರ್ ಕಾಲೇಜಾಗಿ ಪರಿವರ್ತಿತವಾಯಿತು. ಪ್ರೌಢಶಾಲಾ ವ್ಯಾಸಂಗದನಂತರ ಸಿದ್ದೇಗೌಡರು ಇಂಟರ್ ಮೀಡಿಯೇಟ್ ಓದಲು ಆ ಜೂನಿಯರ್ ಕಾಲೇಜಿಗೆ ಸೇರಿದರು. ಗಣಿತದ ಪಿಶಾಚಿ ತೊಲಗಿತು. ಆದರೆ ಆಂಗ್ಲಭಾಷೆಯ ತೊಡಕು ಹೆಗಲೇರಿತು. ತರ್ಕಶಾಸ್ತ್ರವೂ ಕಠಿಣವೇ ! ಆದರೂ ಗೌಡರು ಅದೃಷ್ಟ ಪರೀಕ್ಷಿಸಲು ಪರೀಕ್ಷೆಗೆ ಕುಳಿತರು. ಗೌಡರು ಆಂಗ್ಲಭಾಷೆಯ ಉತ್ತರ ಪತ್ರಿಕೆಯನ್ನು ಬರೆಯುತ್ತಿರುವುದನ್ನು ಮನಃಶಾಸ್ತ್ರದ ಪಂಡಿತರಾದ ಡಾ॥ಗೋಪಾಲಸ್ವಾಮಿಯವರು ನೋಡಿ ''ನೀನು ನಾಲ್ಕಾರು ವರ್ಷ ತೆಗೆದುಕೊಳ್ಳಬೇಕು. ಈ ಪರೀಕ್ಷೆ ಮಾಡಲಿಕ್ಕೆ'' ಎಂದರು. ಗೌಡರು ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲ. ಹತಾಶರಾಗಿ ಅವರು ಕಾಲೇಜಿಗೆ ಶರಣು ಹೊಡೆದರು.



# ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಸಿದ್ದೇಗೌಡರು

*ಬದುಕು ಜಟಕಾಬಂಡಿ ವಿಧಿಯದರ ಸಾಹೇಬ।*
*ಕುದುರೆ ನೀನ್ ಅವನು ಹೇಳ್ದಂತೆ ಪಯಣಿಗರು ॥*
*ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು।*
*ಪದಕುಸಿಯೆ ನೆಲವಿಹುದು - ಮಂಕುತಿಮ್ಮ ॥*

- ಡಿ.ವಿ.ಜಿ.

ಅಷ್ಟರಲ್ಲಿ ಅಂದರೆ 1924ನೇ ಡಿಸೆಂಬರ್ ತಿಂಗಳಲ್ಲಿ ಬೆಳಗಾವಿಯಲ್ಲಿ ಅಖಿಲಭಾರತ ಕಾಂಗ್ರೆಸ್ ಅಧಿವೇಶನ ನಡೆಯುವುದೆಂದೂ ಗಾಂಧೀಜಿಯವರೇ ಅದರ ಆ ವರ್ಷದ ಅಧ್ಯಕ್ಷರೆಂದೂ ಪ್ರಕಟವಾಗಿತ್ತು. ಸಿದ್ದೇಗೌಡರ ಹಾಗೆಯೇ ಅವರ ಇನ್ನಿಬ್ಬರು ಸ್ನೇಹಿತರೂ ಪರೀಕ್ಷೆಯಲ್ಲಿ ಡುಂಕಿ ಹೊಡೆದು ಕೆಲಸ ಸಿಕ್ಕದೆ ತೊಳಲಾಡುತ್ತಿದ್ದರು. ಬೊಂಬಾಯಿಯಲ್ಲಿ ಕೆಲಸ ಸಿಕ್ಕುವುದೆಂದು ತಿಳಿದು ಬಂತು. ಗೌಡರು ಅಲ್ಲಿಗೆ ಹೋಗಲು ಹಣಹೊಂಚಲು ಪ್ರಯತ್ನಿಸಿದರು. ಬೊಂಬಾಯಿ ತಲುಪಲು ಬೇಕಾಗಿದ್ದುದು 50 ರೂ. ಸಿದ್ದೇಗೌಡರು ಕಚ್ಚಿಗೆರೆಗೆ ಹೋಗಿ ''ಚನ್ನಾಗಿ ಪಾಸು ಮಾಡಿದ್ದೇನೆ. ಆದ್ದರಿಂದ ಮುಂದಕ್ಕೆ ಓದಲು ಬೊಂಬಾಯಿಗೆ ಹೋಗಬೇಕು. ಅಲ್ಲಿ ಓದಿಬಂದರೆ ಸರ್ಕಾರದಲ್ಲಿ ದೊಡ್ಡ ಕೆಲಸಸಿಗುತ್ತದೆ'' ಎಂದು ತಾಯಿಗೆ, ನೆಂಟರಿಷ್ಟರಿಗೆ ಸುಳ್ಳು ಹೇಳಿದರು. ತಾಯಿ ಊರನಲ್ಲಿ ಮತ್ತು ಕೋಣಸಾಲೆಯಲ್ಲಿ 5,10ರಂತೆ ಸಾಲಮಾಡಿ ಕೊಟ್ಟಳು.

ಆ ಸಂದರ್ಭದಲ್ಲಿ ಕಾಂಗ್ರೆಸ್ ಅಧಿವೇಶನ ಜಾಡಮಾಲಿ ಸ್ವಯಂಸೇವಕರಾಗಿ ಬರುವವರಿಗೆ ಕರೆಬಂತು. ಸಿದ್ದೇಗೌಡರು ಹಾಗೂ ಅವರ ಇನ್ನಿಬ್ಬರು ಸ್ನೇಹಿತರು ಭಂಗಿಸ್ವಯಂ ಸೇವಕರಾಗಿ ಸೇರಿಕೊಂಡು ಬೆಳಗಾಂಗೆ ಹೋಗಿ ಅದನ್ನು ನೋಡಿಕೊಂಡು ಬೊಂಬಾಯಿಗೆ ಹೋಗುವುದೆಂದು ತೀರ್ಮಾನಿಸಿದರು. ಹೋಗುವ ಕಾಲಕ್ಕೆ ಗೆಳೆಯರಿಬ್ಬರೂ ಕೈಕೊಟ್ಟರು! ಸಿದ್ದೇಗೌಡರೊಬ್ಬರೇ ಬೆಂಗಳೂರಿಗೆ ರೈಲು ಹತ್ತಿದರು. ರೈಲು ಹನಕೆರೆ

ನಿಲ್ದಾಣಕ್ಕೆ ಬರುವ ವೇಳೆಗಾಗಲೇ ತಾಯಿ ಅಲ್ಲಿ ಬಂದು ನಿಂತು ಮಗನಿಗಾಗಿ ಕಾಯುತ್ತಿದ್ದಳು. ಮಗನನ್ನು ಕಂಡು ಆ ತಾಯಿ ''ನೀನು ನೀರಿನಿಂದ ಆಚೆಗೆ ಹೋಗುತ್ತೀಯಂತೆ. ನಾಲ್ಕಾರು ವರ್ಷಗಳು ಓದಬೇಕಂತೆ. ನೀನು ಜಾಗ್ರತೆ ಮುಗಿಸಿಕೊಂಡು ಬರದಿದ್ದರೆ ನಾನು ನೀರಿಗೆ ಬಿದ್ದು ಪ್ರಾಣ ಕಳೆದು ಕೊಳ್ಳುತ್ತೇನೆ'' ಎಂದಳು ಅಳುತ್ತಾ. ಬೇರೆ ಏನನ್ನೋ ಧ್ಯಾನಿಸುತ್ತಿದ್ದ ಸಿದ್ದೇಗೌಡರು ''ಬಿದ್ದರೆ ಬೀಳು'' ಎಂದು ಒರಟಾಗಿ ಉತ್ತರಿಸಿ ತಾಯಿಯ ದುಃಖವನ್ನು ಇಮ್ಮಡಿಗೊಳಿಸಿದರು. ಶಿಳ್ಳು ಹಾಕುತ್ತಾ ರೈಲು ಚಲಿಸಲಾರಂಭಿಸಿತು. ಗೌಡರಿಗೆ ತಮ್ಮ ತಪ್ಪಿನ ಅರಿವಾಗಿ ಪಶ್ಚಾತ್ತಾಪ ಪಟ್ಟು ಕಣ್ಣೀರು ಹಾಕಿದರು. ವಿನಾಕಾರಣ ತಾಯಿಯ ಮನಸ್ಸನ್ನು ನೋಯಿಸಿ ಬಿಟ್ಟೆನಲ್ಲಾ ಎಂದು ಕೊರಗಿದರು.

ಅಂತೂ ಇಂತೂ ಗೌಡರು ದೇಶಭಕ್ತರಾಗಿ - ಉದ್ಯೋಗಾರ್ಥಿಯಾಗಿ ಹೊರಟು 1924ನೆ ಡಿಸೆಂಬರ್ ಕೊನೆಯ ವಾರದಲ್ಲಿ ಬೆಳಗಾವಿ ತಲುಪಿದರು. ಆಗ ಬೆಳಗಾವಿಯಲ್ಲಿ ವಿಪರೀತ ಚಳಿ. ದೊನ್ನೆ ತುಂಬ ತುಪ್ಪ, ಬೆಲ್ಲ, ಹತ್ತಾರು ಚಪಾತಿಗಳು ಆ ಸೊಗಸಾದ ಊಟ ಬಹುಕಾಲ ಗೌಡರ ನೆನಪಿನಲ್ಲಿ ಉಳಿದಿತ್ತು.

ಬೆಳಗಾಂ ಕಾಂಗ್ರೆಸ್ ಅಧಿವೇಶನ 4 ದಿನಗಳ ಕಾಲ ನಡೆಯಿತು. ಕಾಂಗ್ರೆಸ್ ಅಧಿವೇಶನದ ಬಯಲಿನ ಹೊರವಲಯದಲ್ಲಿ ಮಲಮೂತ್ರದ ಗುಂಡಿಗಳನ್ನು ಮಾಡಿ ಬಿದಿರು ಚಾಪೆಗಳ ಕೋಣೆ ಕಟ್ಟಿದ್ದರು. ಹೆಂಗಸರಿಗೆ ಬೇರೆ, ಗಂಡಸರಿಗೆ ಬೇರೆ. ಮಲಮೂತ್ರ ವಿಸರ್ಜನೆ ಮಾಡಿದವರು ಪಕ್ಕದಲ್ಲಿಟ್ಟಿದ್ದ ಮಣ್ಣನ್ನು ಪಾಯಖಾನೆ ಮೇಲೆ ಹಾಕಬೇಕು. ಹಾಗೆ ಮಾಡದೆ ಬಿಟ್ಟ ಗುಂಡಿಗಳು ತುಂಬಿ ಉಕ್ಕಿ ಬಂದ ಕಡೆಗಳಲ್ಲೆಲ್ಲಾ ಭಂಗಿಸ್ವಯಂ ಸೇವಕರು ಮಣ್ಣು ಹಾಕುತ್ತಿದ್ದರು. ಆ ಅಧಿವೇಶನಕ್ಕೆ ಭಂಗಿಸ್ವಯಂ ಸೇವಕರಾಗಿಯೇ ಹೋಗಿದ್ದ ಸಿದ್ದೇಗೌಡರೂ ಆ ಎಲ್ಲ ಕೆಲಸ ಮಾಡುತ್ತಿದ್ದರು. ಗಾಂಧೀಜಿಯವರು ಕಕ್ಕಸು ಮೇಲ್ವಿಚಾರಣೆ ನೋಡಿಕೊಳ್ಳಲು ಸಬರಮತಿ ಆಶ್ರಮದ 3-4 ಜನ ಅನುಯಾಯಿಗಳನ್ನು ನೇಮಿಸಿದ್ದರು.



ಕರ್ನಾಟಕದ ಕೇಸರಿ ಗಂಗಾಧರರಾವ್ ದೇಶಪಾಂಡೆಯವರು ಸಮ್ಮೇಳನದ ಮುಖ್ಯ ವ್ಯವಸ್ಥಾಪಕರು. ಸಿದ್ದೇಗೌಡರಿಗೆ 3-4 ದಿನ ಅವರ ದರ್ಶನ ಆಗುತ್ತಲೇ ಇತ್ತು. ಸಮ್ಮೇಳನಕ್ಕೆ ಬಂದಿದ್ದವರ ಪೈಕಿ ಸಿ.ಆರ್.ದಾಸ್, ಮೋತಿಲಾಲ್ ನೆಹರು, ಮೌಲಾನಾ ಆಜಾದ್‌ರವರ ದರ್ಶನವಾಯಿತು.

## ಬೊಂಬಾಯಿಯತ್ತ ಪ್ರಯಾಣ:

ಬೆಳಗಾಂ ಕಾಂಗ್ರೆಸ್ ಅಧಿವೇಶನ ಮುಗಿದ ನಂತರ ಸಿದ್ದೇಗೌಡರು ಕೆಲಸ ಹುಡುಕಲು ಬೊಂಬಾಯಿ ಮಹಾನಗರ ತಲುಪಿದರು. ಕಾಂಕ್ರೀಟ್ ಕಾಡು. ಜನಾರಣ್ಯದ ನಡುವೆ ಗೌಡರಿಗೆ ದಿಕ್ಕೇ ತೋಚದಾಯಿತು. ರಾತ್ರಿ ಸಮುದ್ರದ ದಂಡೆಯ ಕಲ್ಲು ಬೆಂಚಿನ ಮೇಲೆ ನಿದ್ರೆ ಮಾಡಿದರು. ಹತ್ತಿಗಿರಣಿಗಳಲ್ಲಿ ಕೆಲಸದ ಹುಡುಕಾಟ ಪ್ರಾರಂಭವಾಯ್ತು. ಮರಾಠಿ ಭಾಷೆಬಾರದು. ಅಲ್ಲಿ ಕನ್ನಡ ಮಾತಾಡುವವರು ಸಿಕ್ಕಿದರೆ ಸ್ವರ್ಗವೇ ಸಿಕ್ಕಿದಂತೆನಿಸುತ್ತಿತ್ತು. ಆಗ ಬೊಂಬಾಯಿಯಲ್ಲಿ ಟಾಂಗಾ ಹೊಡೆಯುವವರಲ್ಲಿ ಮುಕ್ಕಾಲು ಪಾಲು ನಾಗಮಂಗಲದ ಒಕ್ಕಲಿಗರೇ ಆಗಿದ್ದರು. ಗೌಡರಿಗೆ ಅಂಥವರೊಬ್ಬರ ಪರಿಚಯವಾಯಿತು. ಆತ ''ಬೊಂಬಾಯಿಯಲ್ಲಿ 60-70 ಗಿರಣಿಗಳಿವೆ. ಇಲ್ಲಿ ಕೆಲಸ ಸಿಕ್ಕುವುದಿಲ್ಲ. ಅಹಮದಾಬಾದಿನಲ್ಲಿ 80-90 ಗಿರಣಿಗಳಿವೆ. ಜೀವನದ ಖರ್ಚು ಕಡಿಮೆ. ಇಲ್ಲಿ ದುಬಾರಿ. ಏನನ್ನೂ ಉಳಿಸಲಾಗುವುದಿಲ್ಲ'' ಎಂದ. ನಿರಾಶರಾಗಿ ಗೌಡರು ಅಹಮದಾಬಾದಿಗೆ ಪ್ರಯಾಣ ಬೆಳೆಸಿದರು.

## ಸಬರಮತಿ ಆಶ್ರಮದಲ್ಲಿ ಎರಡೂವರೆ ವರ್ಷ :

ಬೊಂಬಾಯಿಯಿಂದ ಹೊರಟು ಬೆಳಿಗ್ಗೆ 10 ಗಂಟೆಗೆ ಅಹಮದಾಬಾದ್ ತಲುಪಿದ ಸಿದ್ದೇಗೌಡರು ಮಹಾತ್ಮ ಗಾಂಧೀಜಿ ಆಶ್ರಮ ನೋಡಿಕೊಂಡು ಅಲ್ಲಿಯ ಗಿರಣಿಗಳಲ್ಲಿ ಕೆಲಸ ಹುಡುಕುವುದೆಂದು ಮನಸ್ಸಿನಲ್ಲೇ ಲೆಕ್ಕ ಹಾಕುತ್ತಾ ಸಬರಮತಿ ನದಿ ದಾಟಿ ಆಶ್ರಮದ ರಸ್ತೆಯ ಬಳಿಯಿದ್ದ ಹುಣಸೆಮರದ ನೆರಳಿನಲ್ಲಿ ನಿಂತು ಸ್ವಯಂ ಸೇವಕರೊಬ್ಬರ ಹತ್ತಿರ ಕಾಕಾ ಸಾಹೇಬ್ ಕಾಲೇಲ್ಕರ್ ಅವರನ್ನು ನೋಡಬೇಕೆಂದರು. ಕಾಕಾಸಾಹೇಬ್ ಕಾಲೇಲ್ಕರ್‌ರವರು ಬೆಳಗಾಂ ಕಾಂಗ್ರೆಸ್ ಅಧಿವೇಶನದ ಭಂಗಿ ಸ್ವಯಂ

ಸೇವಕರ ಮೇಲ್ವಿಚಾರಣಾಧಿಕಾರಿಗಳಾಗಿದ್ದರು. ಗೌಡರಿಗೆ ಅವರ ಭೇಟಿಯಾಯಿತು. ಆಗ ಗೌಡರು ನಾನು ದೇಶಸೇವೆ ಮಾಡಬೇಕೆಂದು, ಈ ಆಶ್ರಮದಲ್ಲಿರಬೇಕೆಂದೂ, ಕಾಂಗ್ರೆಸ್ ಅಧಿವೇಶನದಲ್ಲಿ ಭಂಗಿ ಸ್ವಯಂ ಸೇವಕನಾಗಿ ಸೇವೆ ಸಲ್ಲಿಸಿದ್ದೇನೆಂದು ಹೇಳಿದರು. ಅಲ್ಲಿ ಒಂದೆರಡು ದಿನಗಳಿದ್ದು ಅವರ ಮುಖಾಂತರ ಯಾವುದಾದರೂ ಕೆಲಸ ಗಿಟ್ಟಿಸಿಕೊಳ್ಳಬೇಕೆಂಬುದು ಗೌಡರ ಅಂತರ್ಯದ ಆಸೆ. ಆದರೆ ಗೌಡರು ಈ ಸಂಗತಿಯನ್ನು ಕಾಲೇಲ್ಕರ್ ಅವರಿಗೆ ತಿಳಿಸಲಿಲ್ಲ. ಆಗ ಕಾಕಾಸಾಹೇಬ್ ಕಾಲೇಲ್ಕರ್ ಅವರು ಗೌಡರನ್ನುದ್ದೇಶಿಸಿ ''ಆಗಬಹುದು. ಆದರೆ ಆಶ್ರಮದಲ್ಲಿ ಮಾಂಸ ತಿನ್ನಕೂಡದು. ಇಲ್ಲಿ ಯಾವ ಕೆಲಸವೂ ತುಚ್ಛವಲ್ಲ. ಎಂಟು ಗಂಟೆ ಕೆಲಸ ಮಾಡಬೇಕು'' ಎಂದು ಹೇಳಿದರು. ಈ ನಿಯಮಗಳಿಗೆ ಗೌಡರು ಒಪ್ಪಿಕೊಂಡರು.

ಸಿದ್ದೇಗೌಡರು ಸಬರಮತಿ ಆಶ್ರಮ ಸೇರಿದ ದಿನವೇ ಒಂದು ದಿಣ್ಣೆಯ ಮಣ್ಣನ್ನು ಅಗೆದು ಹಳ್ಳಕ್ಕೆ ಸುರಿದು ಸಮತಟ್ಟು ಮಾಡಿದರು. ಆಗ ಗೌಡರು ಒಂದು ಖಾದಿ ಕೋಟು, ಷರಟು, ಒಂದು ಪಂಚೆಯುಟ್ಟಿದ್ದರು. ಕ್ರಾಫ್ ಬಿಟ್ಟಿದ್ದರು. ಅಲ್ಲಿ ಬ್ರಹ್ಮಚಾರಿಗಳ ಒಂದು ವಠಾರವಿತ್ತು. 5-6 ಜನ ಕೂಡಿ ಅಡುಗೆ ಮಾಡಿಕೊಳ್ಳುತ್ತಿದ್ದರು. ಅವರಲ್ಲಿ ಓರ್ವ ಅಸ್ಪೃಶ್ಯ ಜನಾಂಗದವನೂ ಇದ್ದ. ಚಪಾತಿ, ಪಲ್ಯ, ಹಾಲು ಸೊಗಸಾದ ಊಟ ಗೌಡರಿಗೆ ತುಂಬಾ ಹಿಡಿಸಿತು. ಮಾರನೇದಿನ ಸಿದ್ದೇಗೌಡರು ಬಟ್ಟೆ ಬದಲಾಯಿಸಿ, ಒಂದು ತುಂಡು ಪಂಚೆಯನ್ನು ಉಟ್ಟು ಬರಿಮೈಯಿಯ ಆಶ್ರಮವಾಸಿಯಾದರು. ಅಂದಿನಿಂದ ಅವರು ಹತ್ತಿ ಹಿಂಜುವುದು. ನೂಲುವುದು, ಪುಸ್ತಕ ಭಂಡಾರವನ್ನು ಸ್ವಚ್ಛಗೊಳಿಸುವುದು, ಗಿಡಗಳಿಗೆ ನೀರು ಹೊಯ್ಯುವುದು, ಬಾವಿಯಿಂದ ನೀರು ಸೇದುವುದು, ಬೆಳಗಿನ, ಸಾಯಂಕಾಲದ ಪ್ರಾರ್ಥನೆಗಳಿಗೆ ಹೋಗುವುದು ಅಡುಗೆ ಮಾಡುವುದು ಇತ್ಯಾದಿ ಕೆಲಸಗಳನ್ನು ಸ್ವಯಂಸ್ಫೂರ್ತಿಯಿಂದ ಮಾಡುತ್ತಿದ್ದರು. ಹಾಗೆಯೇ ಅವರು ಬೆಳಿಗ್ಗೆ, ಮಧ್ಯಾಹ್ನ ಹೊಳೆಸ್ನಾನ ಮಾಡುತ್ತಿದ್ದರು. ಇವುಗಳ ಜೊತೆಗೆ ಸಿದ್ದೇಗೌಡರು ಮಾಡುತ್ತಿದ್ದ ಬಹು ಮುಖ್ಯವಾದ ಕೆಲಸವೆಂದರೆ -ಆಶ್ರಮದ ಒಂದು ಪಾರ್ಶ್ವದಲ್ಲಿದ್ದ



ವಾನಪ್ರಸ್ಥರ 7-8 ವಾಸದ ಮನೆಗಳ ಕಕ್ಕಸನ್ನು ನಿತ್ಯವೂ ಶುಚಿಮಾಡಿ, ಮಲ ಮೂತ್ರವನ್ನು ಹತ್ತಿರದಲ್ಲೇ ಇದ್ದ ಹತ್ತಿ ಹೊಲದಲ್ಲಿ ಗುಂಡಿ ತೆಗೆದು ಹೂತು ಮಣ್ಣು ಮುಚ್ಚುವುದೇ ಆಗಿತ್ತು. ಈ ಕೆಲಸವನ್ನು ಬೆಳಿಗ್ಗೆ 8 ರಿಂದ 12 ಗಂಟೆಯತನಕ ಮಾಡುತ್ತಿದ್ದರು. ಆಮೇಲೆ ಸ್ನಾನ ಅಡಿಗೆ ಇತ್ಯಾದಿ.

ಆಶ್ರಮದಲ್ಲಿ ಸಿದ್ದೇಗೌಡರಿಗೆ ಕೊಠಡಿಯೊಂದನ್ನು ಕೊಟ್ಟಿದ್ದರು. ರಾತ್ರಿ ವೇಳೆ 9 ಗಂಟೆಗೆ ಮಲಗಬೇಕು. ಬೆಳಿಗ್ಗೆ 5 ಗಂಟೆಗೆ ಏಳಬೇಕು. ಸಾಮೂಹಿಕವಾಗಿ ಆಶ್ರಮವಾಸಿಗಳೆಲ್ಲಾ ನೂಲುವುದು ನಡೆಯುತ್ತಿತ್ತು. ಗೌಡರಿಗೆ ಗುಜರಾತಿ ಭಾಷೆ ಗೊತ್ತಾಗುತ್ತಿರಲಿಲ್ಲ. ಆಂಗ್ಲ ಭಾಷೆಯಲ್ಲಿಯೇ ಅವರು ತಮ್ಮ ಎಲ್ಲ ವ್ಯವಹಾರಗಳನ್ನು ನಡೆಸುತ್ತಿದ್ದರು. ಗೌಡರು ಕಾಕಾಸಾಹೇಬರ ನೆಚ್ಚಿನ ಶಿಷ್ಯರಾದರು. ಕಾಕಾಸಾಹೇಬರು ಗುಜರಾತಿನ ಬಹುದೊಡ್ಡ ಸಾಹಿತಿಗಳು. ಕ್ರಮೇಣ ಗೌಡರಿಗೆ ಕೊಂಕಣದವರಾದ ಕನ್ನಡ ಬರುತ್ತಿದ್ದ ತಿಮ್ಮಪ್ಪಯ್ಯನವರಲ್ಲಿ ಸ್ನೇಹ ಬೆಳೆಯಿತು. ಅವರು ಬ್ರಹ್ಮಚಾರಿಗಳಾಗಿಯೇ ಇದ್ದು ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಿ ಒಳ್ಳೆ ಸತ್ಯಾಗ್ರಹಿ ಎನಿಸಿದ್ದರು. ಅವರು ಒಂದೆರಡು ವರ್ಷಗಳ ನಂತರ ತೀರಿಕೊಂಡರು.

ಪೂರ್ವ ಅಪ್ಪಣೆ ಪಡೆದು ಯಾರು ಬೇಕಾದರೂ ಮಹಾತ್ಮಗಾಂಧೀಜಿ ಅವರರೊಡನೆ ಸಂಭಾಷಣೆ ನಡೆಸಬಹುದಿತ್ತು. ಸಿದ್ದೇಗೌಡರು ಒಂದು ದಿನ ಮಹಾತ್ಮ ಗಾಂಧೀಜಿಯವರು ಚರಕದಿಂದ ನೂಲುತ್ತಿದ್ದಾಗ ''ಗೋಶಾಲೆಯಲ್ಲಿ ಕೆಲಸ ಮಾಡುವವರು ಆಶ್ರಮದ ಗುಲಾಮರಲ್ಲವೆ?'' ಎಂದು ಪ್ರಶ್ನಿಸಿದರು. ಆಗ ಗಾಂಧೀಜಿ ಅವರು ಕೊಟ್ಟ ಉತ್ತರ ಗೌಡರ ಜ್ಞಾಪಕದಲ್ಲಿ ಉಳಿಯಲಿಲ್ಲ. ಮತ್ತೊಂದು ದಿನ ಸಾಯಂಕಾಲ ಪ್ರಾರ್ಥನೆಯ ಸಮಯದಲ್ಲಿ ಗೌಡರು. "Where is Good?" ಎಂದು ಆಂಗ್ಲ ಭಾಷೆಯಲ್ಲಿ ಪ್ರಶ್ನಿಸಿದರು. ಆಗ ಗಾಂಧೀಜಿ "What is that That Speaks Through You" ಎಂದು ಮರು ಪ್ರಶ್ನೆ ಹಾಕಿದರು. ಗೌಡರು ಉತ್ತರ ಕೊಡಲಾಗಲಿಲ್ಲ. ಆ ವಿಷಯದ ಮೇಲೆಯೇ ಆ ದಿವಸದ ಅವರ

ಉಪನ್ಯಾಸವಾಯಿತು. ಸಿದ್ದೇಗೌಡರು ಮಹಾತ್ಮ ಗಾಂಧೀಜಿ ಅವರ ಮೆಚ್ಚಿನ ಶಿಷ್ಯರಾಗಿದ್ದರು.

ಸಿದ್ದೇಗೌಡರಿಗೆ ಆಶ್ರಮದ ಚಟುವಟಿಕೆಗಳು ಪೂರ್ಣವಾಗಿ ಅರ್ಥವಾಗುತ್ತಿರಲಿಲ್ಲ. ದೇಶಸೇವೆ ಮಾಡಬೇಕೆಂಬುವವರು ಬ್ರಹ್ಮಚಾರಿಗಳಾಗಿದ್ದು ಮಾಡಿದರೆ ಶ್ರೇಷ್ಠ ಸೇವೆ ಮಾಡಬಹುದೆಂಬುದೇ ಆಶ್ರಮದ ವಾತಾವರಣವಾಗಿತ್ತು.

ಆಶ್ರಮದಲ್ಲಿದ್ದಷ್ಟು ಕಾಲವೂ ಸಿದ್ದೇಗೌಡರು ತಾಯಿಗೆ ಕಾಗದ ಬರೆಯುತ್ತಿದ್ದರು. ತಾಯಿಯೂ ಸಹ ಪ್ರತ್ಯುತ್ತರವಾಗಿ ಕಾಗದ ಬರೆಸುತ್ತಿದ್ದಳು. ಸಾಯುವ ಮುಂಚಿನ ದಿನಗಳಲ್ಲಿ ತಂದೆ ಮಾಡಿಬಿಟ್ಟು ಹೋಗಿದ್ದ ನೂರು ರೂಪಾಯಿ ಸಾಲ ತೀರಿಸುವಂತೆ ಆಗ್ರಹ. ಆದಷ್ಟು ಜಾಗ್ರತೆ 'ಓದು' ಮುಗಿಸಿಬರಬೇಕೆಂದು ಆಗ್ರಹಿಸಿ ತಾಯಿ ಪತ್ರ ಬರೆಸುತ್ತಿದ್ದಳು. ಸಿದ್ದೇಗೌಡರು ಕಾಲಕ್ರಮೇಣ ಕಾಕಾಸಾಹೇಬರಿಗೆ ತಂದೆ ಮಾಡಿದ ಸಾಲದ ವಿಷಯ ತಿಳಿಸಿ 15-20ರೂಗಳಂತೆ ತಿಂಗಳು ತಿಂಗಳಿಗೆ ಕಳಿಸಿ ಸಾಲ ತೀರಿಸಿದರು. ಆದರೂ ತಾಯಿಯ ಬಡತನ ಭೂತಾಕಾರವಾಗಿ ಬೆಳೆಯುತ್ತಿದ್ದುದು ಆಕೆ ಬರೆಸುತ್ತಿದ್ದ ಪತ್ರಗಳಿಂದ ತಿಳಿದು ಮನಸ್ಸು ನೋಯುತ್ತಿತ್ತು.

## ಸಬರಮತಿ ಆಶ್ರಮಕ್ಕೆ ಡಾ|| ಕೆ. ಶಿವರಾಮ ಕಾರಂತರ ಭೇಟಿ

ಅದು 1927ರ ಫೆಬ್ರವರಿ ತಿಂಗಳು. ಕನ್ನಡ ಸಾಹಿತಿ ದಿಗ್ಗಜ, ಕಡಲತಡಿ ಭಾರ್ಗವ ಡಾ|| ಕೆ. ಶಿವರಾಮ ಕಾರಂತರು ಸಿದ್ದೇಗೌಡರಿಗೆ ಒಂದು ಪರಿಚಯ ಪತ್ರವನ್ನು ತೆಗೆದುಕೊಂಡು ಬಂದು ಆಶ್ರಮದಲ್ಲಿ ಅವರನ್ನು ನೋಡಿದರು. ಸಿದ್ದೇಗೌಡರು ಅವರನ್ನು ಸಂತೋಷದಿಂದ ಆಶ್ರಮಕ್ಕೆ ಸ್ವಾಗತಿಸಿ, ಅವರಿಗೆ ಆಶ್ರಮದ ಪರಿಚಯ ಮಾಡಿಕೊಟ್ಟರು. ಹಾಗೆಯೇ ಕಾರಂತರಿಗೆ ಕಾಕಾಸಾಹೇಬರನ್ನೂ ಪರಿಚಯಿಸಿದರು. ಆಗ ಕರ್ನಾಟಕದ ಮಂಗಳೂರಿನ ಮಲ್ಯರಾಮರಾವ್, ಉತ್ತರ ಕನ್ನಡದ ತಿಮ್ಮಪ್ಪಯ್ಯ, ಧಾರವಾಡದ ದೇಸಾಯಿ ಅವರೂ ಆಶ್ರಮ ವಾಸಿಗಳಾಗಿದ್ದರು. ಡಾ|| ಶಿವರಾಮಕಾರಂತರು



ಆಶ್ರಮದಲ್ಲಿ 20 ದಿನಗಳ ಕಾಲ ಇದ್ದು ಮುಂದೆ ಪ್ರಯಾಣ ಬೆಳೆಸಿದರು. ಈ ಸಂಗತಿಯನ್ನು ಕಾರಂತರು ತಮ್ಮ ''ಹುಚ್ಚು ಮನಸ್ಸಿನ ಹತ್ತು ಮುಖಗಳು'' ಆತ್ಮಕಥನದಲ್ಲಿ ಸ್ಮರಸಿಕೊಂಡಿದ್ದಾರೆ.

## ಆಶ್ರಮದ ಕೆಲವು ನಡಾವಳಿ – ಘಟನೆಗಳು

ಆಶ್ರಮದ ಜೀವನದಲ್ಲಿ ಆಟ ಪಾಠಗಳಿಗೆ ಪ್ರವಾಸಕ್ಕೆ ಅವಕಾಶವಿತ್ತು. ಸಿದ್ದೇಗೌಡರು ಆಶ್ರಮವಾಸಿಯೊಬ್ಬನ ಮೇಲೆ ಕುಸ್ತಿ ಆಡಿಗೆದ್ದರು. ಅವರು ಪಶ್ಚಿಮ ಸಮುದ್ರದ ಕೆಲವು ಪ್ರದೇಶಗಳನ್ನು ಗಿರ್ನಾರ್, ಅಬು ಪರ್ವತಗಳನ್ನೂ ನೋಡಿದರು. ಗಾಂಧೀಜಿಯವರು ಬಾಲಕ-ಬಾಲಕಿಯರ ಸಂಗಡ ಸ್ಪರ್ಧೆಹೂಡಿ ಈಜುವುದರಲ್ಲಿ ಗೆದ್ದುದುಂಟು. ಕಸ್ತೂರಿ ಮಾತೆಯವರು ಬೆಳದಿಂಗಳ ಹೊಳೆಯ ಮರಳಲ್ಲಿ ಅಡ್ಡಾಡಿ ಪ್ರಕೃತಿ ರಮಣೀಯತೆಯನ್ನು ಆಸ್ವಾದಿಸಿದ್ದೂ ಉಂಟು. ಸಿದ್ದೇಗೌಡರು ಆಶ್ರಮದಲ್ಲಿದ್ದಾಗ ಲೋಕಮಾನ್ಯ ತಿಲಕರ ಗೀತಾರಹಸ್ಯ, ಟಾಲ್‌ಸ್ಟಾಯ್‌ರವರ What then must we do ಶಂಕರಾಚಾರ್ಯರ ಭಗವದ್ಗೀತೆ, ಪುರಂದರದಾಸರ ಕೀರ್ತನೆ ಕೃತಿಗಳನ್ನು ಕೊಂಡು ಕೊಂಡರು. ಹಾಗೆಯೇ ಗಾಂಧೀಜಿಯವರು ಪ್ರಕಟಿಸುತ್ತಿದ್ದ Young India ಪತ್ರಿಕೆಯನ್ನು ತಪ್ಪದೆ ಓದುತ್ತಿದ್ದರು. ಆಶ್ರಮದಲ್ಲಿ ಹಿಂದಿ ಕಲಿಕೆಯನ್ನು ಪ್ರೋತ್ಸಾಹಿಸಲು, ಹಿಂದಿಯ ತುಳಸಿ ರಾಮಾಯಣವನ್ನು ಗೌಡರಿಗೆ ಉಚಿತವಾಗಿ ಕೊಟ್ಟರು. ಆದರೆ ಗೌಡರು ಹಿಂದಿ ಭಾಷೆಯನ್ನು ಕಲಿಯಲಿಲ್ಲ. ಕಾಕಾಸಾಹೇಬರು ಅನಾರೋಗ್ಯದ ನಿಮಿತ್ತ ಪೂನಾದ ಹತ್ತಿರವಿರುವ ಸಿಂಹ ಘಡಕ್ಕೆ ಹೋದಾಗ ಅವರ ಸೇವೆಗಾಗಿ ಗೌಡರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದರು. ಕಾಲಕ್ರಮೇಣಗೌಡರು ಅವರನ್ನು ಗುರುಗಳೆಂದು ಭಾವಿಸಿ ಪೂಜಿಸುತ್ತಿದ್ದರು.

## ಅನೈತಿಕ ಘಟನೆಗೆ ಗಾಂಧೀಜಿಯವರಿಂದ ಉಪವಾಸ:

ಆಶ್ರಮದಲ್ಲಿ ಅನೈತಿಕ ವರ್ತನೆಗಳು ಗಾಂಧೀಜಿಯವರ ಗಮನಕ್ಕೆ ಬಂದರೆ ಅವರು ತನ್ನ ತಪಸ್ಸು ದುಷ್ಕೃತ್ಯಗಳನ್ನು ತಡೆಗಟ್ಟುವಷ್ಟು ಪ್ರಭಾವಿತವಾಗಲಿಲ್ಲವೆಂದು ನಾಲ್ಕಾರು ದಿವಸ ಉಪವಾಸ ಬೀಳುತ್ತಿದ್ದರು.

ಅಂಥದ್ದೊಂದು ಪ್ರಸಂಗ ಇಬ್ಬರು ಹುಡುಗರಿಂದ ನಡೆದಾಗ ಅವರು ಒಂದು ವಾರ ಉಪವಾಸ ಬಿದ್ದರು. ಅದರ ಪರಿಣಾಮ ಎಲ್ಲರೂ ಆತ್ಮಶೋಧನೆ ಮಾಡಿಕೊಂಡು ಶುದ್ಧ ಬ್ರಹ್ಮಚರ್ಯಾಚರಣೆಗೆ ಪ್ರೇರಕವಾಗಿತ್ತು.

ಸಿದ್ದೇಗೌಡರು ಶುದ್ಧಬ್ರಹ್ಮಚಾರಿ ಜೀವನ ನಡೆಸಿ ದೇಶಸೇವೆ ಮಾಡಬೇಕೆಂದು ಹಂಬಲಿಸುತ್ತಿದ್ದರು. ಆದರೆ ಇಂದ್ರಿಯನಿಗ್ರಹ ಅದೆಷ್ಟು ಕಷ್ಟ ಎಂಬುದು ಅವರಿಗೆ ಅರಿವಾಗಿತ್ತು. ಒಂದು ದಿವಸ ದೈವಪ್ರೇರಣೆ ಎಂಬಂತೆ ಕಾಕಾ ಸಾಹೇಬರು ಗಾಂಧೀಜಿ ಸಂಗಡ ಮಾತಾಡುತ್ತಿದ್ದಾಗ ಗೌಡರು ಹೋಗಿ ಅವರನ್ನು ನೋಡಿದರು. ಕಾಕಾಸಾಹೇಬರು ಸ್ವಲ್ಪ ಹೊತ್ತಿನಲ್ಲೇ ಕೊಠಡಿಗೆ ಬಂದ ಮೇಲೆ ಗೌಡರು ತಮ್ಮ ಮನೋವ್ಯಾಪಾರವನ್ನು ಅವರಿಗೆ ತಿಳಿಸಿ. ತಾವು ಹಿಮಾಲಯಕ್ಕೆ ಹೋಗಬೇಕೆಂದು ನಿಶ್ಚಯಿಸಿರುವುದನ್ನು ಅವರಿಗೆ ತಿಳಿಸಿದರು. ಆಗ ಕಾಕಾಸಾಹೇಬರು ಸ್ವಲ್ಪ ಹೊತ್ತು ಅಂತರ್ಮುಖಿಯಾಗಿ ಆಲೋಚಿಸಿ ಸಿದ್ದೇಗೌಡರಿಗೆ ಗಾಯತ್ರಿ ಮಂತ್ರವನ್ನು ಉಪದೇಶಿಸಿದರು. ನಂತರ ಕಾಕಾಸಾಹೇಬರು ಗಂಭೀರ ವದನರಾಗಿ ''ಅಲ್ಲಿಯ ಅನ್ನ ಸತ್ರಗಳಲ್ಲಿ ಬಿಟ್ಟಿಕೂಳನ್ನು ತಿನ್ನಬೇಡ. ದುಡಿದು ತಿನ್ನು ಕಳ್ಳಸನ್ಯಾಸಿಗಳಿದ್ದಾರೆ. ದುರಾಚಾರದಸ್ತ್ರೀಯರೂ ಆಗಾಗ್ಗೆ ಸುಳಿಯುತ್ತಾರೆ. ಎಚ್ಚರಿಕೆಯಿಂದಿರು. ಗಾಂಧೀಜಿಯವರು ಸದಾ ಹೇಳುತ್ತಿರುವಂತೆ ಆತ್ಮವಂಚನೆಮಾಡಿಕೊಳ್ಳದೆ ನಡೆದುಕೊ'' ಎಂದು ಖರ್ಚಿಗೆ ದುಡ್ಡುಕೊಟ್ಟು. ಒಂದು ಚೆಂಬು, ಒಂದು ಹೊದಿಕೆ ಕೊಟ್ಟು ಆಶೀರ್ವದಿಸಿ ಬೀಳ್ಕೊಟ್ಟರು. ಸಿದ್ದೇಗೌಡರು ಸಬರಮತಿ ಆಶ್ರಮದಲ್ಲಿದ್ದ ಎರಡೂವರೆ ವರ್ಷಕಾಲವೂ ಶೌಚಗೃಹದ ನಿರ್ಮಲೀಕರಣವನ್ನು ನಡೆಸಿದರು. 1927ರ ಮಧ್ಯದಲ್ಲಿ ಸಬರಮತಿ ಆಶ್ರಮವನ್ನು ಬಿಟ್ಟರು. ನಂತರ ದಿನಗಳಲ್ಲಿ ಸಬರಮತಿ ಆಶ್ರಮದಲ್ಲಿನ ಸಿದ್ದೇಗೌಡರ ಅನುಭವಗಳನ್ನು ಡಾ॥ ಹಾ.ಮಾ.ನಾಯಕರ ಪ್ರೇರಣೆಯಿಂದ ಬೆಂಗಳೂರು ಆಕಾಶವಾಣಿಯವರು ಪ್ರಸಾರ ಮಾಡಿದರು.



## ದೇಶ ಪರ್ಯಟನೆ: ಹಿಮಾಲಯ ದರ್ಶನ

ಸಿದ್ದೇಗೌಡರು ತಮಗೆ ಸತ್ಯ ಅಹಿಂಸೆಯ ಮಾರ್ಗವನ್ನು ತೋರಿಸಿ ಜ್ಞಾನಾಮೃತವನ್ನು ಉಣಬಡಿಸಿದ ಸಬರಮತಿ ಆಶ್ರಮದಿಂದ ಭಾರವಾದ ಹೃದಯದಿಂದ ಹೊರಟು ಆಗ್ರಾದ ತಾಜ್‌ಮಹಲನ್ನು ನೋಡಿ ಸಂತಸಪಟ್ಟರು. ನಂತರ ಮಥುರಾದಲ್ಲಿ (ಶ್ರೀಕೃಷ್ಣನ ಲೀಲಾ ಸ್ಥಳ) ತಮ್ಮ ತಂದೆಗೆ ಪಿಂಡಹಾಕಿ ದೆಹಲಿಗೆ ಹೋದರು. ಗೌಡರು ಅಲ್ಲಿ ಮಹಮ್ಮದೀಯರ ಜಾಮಿಯ ಮಿಲಿಯ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಡಾ॥ ಜಾಕಿರ್ ಹುಸೇನ್ (ಮುಂದೆ ಇವರು ಭಾರತದ ರಾಷ್ಟ್ರಪತಿಯಾದರು) ಅವರನ್ನು ಭೇಟಿಮಾಡಿದರು. ಜಾಕಿರ್ ಹುಸೇನ್‌ರವರು ಸಿದ್ದೇಗೌಡರನ್ನು ಗಾಂಧೀಜಿ ಆಶ್ರಮದಿಂದ ಬಂದವರೆಂದು ಗೌರವದಿಂದ ಕಂಡರು. ಮಾಂಸಾಹಾರವನ್ನು ಬಿಟ್ಟಿದ್ದರಿಂದ ಅವರು ಎಷ್ಟು ಒತ್ತಾಯ ಮಾಡಿದರೂ ಗೌಡರು ಊಟಮಾಡಲಿಲ್ಲ. ಆಗತಾನೇ ದೆಹಲಿಯಲ್ಲಿ ಲೋಕಸಭಾಂಗಣ, ರಾಷ್ಟ್ರಪತಿ ಭವನಗಳ ನಿರ್ಮಾಣ ಕಾರ್ಯ ಪ್ರಾರಂಭವಾಗಿತ್ತು. ಆ ರಾತ್ರಿ ಗೌಡರು ಡೆಲ್ಲಿಯ ಹೊರವಲಯದ ನಿರ್ಜನ ಪ್ರದೇಶದ ಒಂದು ಕಲ್ಲು ಬಂಡೆಯ ಮೇಲೆ ಮಲಗಿ ನರಿಗಳ 'ಗಾನ'ವನ್ನು ಆಸ್ವಾದಿಸುತ್ತಾ ಕಳೆದು, ಮಾರನೇದಿನ ಕೆಂಪು ಕೋಟೆ, ಕುತುಬ್‌ಮಿನಾರ್ ಮತ್ತಿತರ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಹರಿದ್ವಾರಕ್ಕೆ ಪ್ರಯಾಣ ಬೆಳೆಸಿದರು.

ಸಿದ್ದೇಗೌಡರು ಹರಿದ್ವಾರವನ್ನು ತಲುಪಿದ ಮೇಲೆ ಅವರಿಗೆ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿದ್ದ ಹಿಮಾಲಯ ಪರ್ವತವನ್ನು ಹತ್ತಬೇಕೆಂಬ ಆಸೆ ಉಂಟಾಯಿತು. ಅವರು ಅಲ್ಲಿ ಒಂದು ಬಿದಿರು ದೊಣ್ಣೆ ಹಾಗೂ ತುಳಸಿ ಜಪ ಮಾಲೆಯನ್ನು ಕೊಂಡುಕೊಂಡು 16 ಮೈಲಿ ದೂರದಲ್ಲಿ ಗಂಗಾನದಿಯ ದಡದಲ್ಲಿದ್ದ ಹೃಷಿಕೇಶಕ್ಕೆ ಹೋದರು. ಈ ಪ್ರಯಾಣಕಾಲದಲ್ಲಿ ದಾರಿಯಲ್ಲಿ ಮಾರುತ್ತಿದ್ದ ಪೂರಿಪಲ್ಯದ ಅರೆಹೊಟ್ಟೆಯ ಆಹಾರವೇ ಗತಿಯಾಯಿತು. ಸಾಯಂಕಾಲದ ಹೊತ್ತಿಗೆ ಅವರು ಪವಿತ್ರ ಹೃಷಿಕೇಶವನ್ನು ತಲುಪಿದರು. ಒಂದು ಪಂಚೆಯನ್ನುಟ್ಟು, ಮತ್ತೊಂದು ಪಂಚೆಯನ್ನು ಹೊದ್ದು ಜೀವನ

ಸಾಗಿಸಿದರು. ಅಲ್ಲಿ ಕಾಲಿಕಂಬಳಿವಾಲಾ ಎಂಬ ಮಠವಿದೆ. ಅಲ್ಲಿ ಸಾಧು ಸನ್ಯಾಸಿಗಳಿಗೆ ಒಂದು ಹೊತ್ತು ಊಟಹಾಕುತ್ತಾರೆ. ಗುರುಗಳ ವಚನ ಉಲ್ಲಂಘನೆ ಮಾಡಿ ಗೌಡರು ಅಲ್ಲಿ ಊಟ ಮಾಡಿದರು. ಆ ಮಠ ಗಂಗಾನದಿಯ ಎಡದಂಡೆಯ ಮೇಲಿದ್ದು, ಬಲದಂಡೆಯಲ್ಲಿ ಮುನಿಕಿರೇತಿ ಎಂಬ ಸಮತಳದ ಜಾಗದಲ್ಲಿ ಪುಸ್ತಕ ಭಂಡಾರವಿದೆ. ಗೌಡರು ಅಲ್ಲಿ 8-10ದಿನಗಳಿದ್ದು ವಿವೇಕಾನಂದರ ಜೀವನ ಚರಿತ್ರೆ ಮತ್ತು ತತ್ವ ಗ್ರಂಥಗಳನ್ನು ಓದಿದರು. ನಿತ್ಯವೂ ಸಾಧ್ಯವಾದಷ್ಟು ಗಾಯತ್ರಿಮಂತ್ರ ಜಪಿಸುತ್ತಿದ್ದರು. ಅಲ್ಲಿಯ ಯಾತ್ರಾರ್ಥಿಗಳು ಬ್ರಹ್ಮಚಾರಿಗಳನ್ನು ತುಂಬಾ ಗೌರವದಿಂದ ಕಾಣುತ್ತಿದ್ದರು. ಸಿದ್ದೇಗೌಡರು ಕುಳಿತು ಧ್ಯಾನ, ತಪಸ್ಸು ಮಾಡುವವರ ಸೋಗುಹಾಕದೆ, ಕಾಸಿನ ಭಿಕ್ಷೆ ಬೇಡದೆ ತತ್ಕಾಲದ ಚಿತ್ತಸ್ವಾಸ್ಥತೆಯಿಂದ ಕಾಲಕಳೆದರು. ಗೌಡರು ಅಲ್ಲಿಂದಲೂ ತಮ್ಮ ತಾಯಿಗೆ ಯೋಗಕ್ಷೇಮ ವಿಚಾರಿಸಿ ಕಾಗದ ಬರೆಯುತ್ತಿದ್ದರು.

## ಸಿದ್ದೇಗೌಡರ ಕೈಗೆ ಕೋಳ ಹಾಕಿ ಮೆರವಣಿಗೆ

ಒಂದು ದಿನ ಹೃಷಿಕೇಶದಿಂದ ಬದರಿನಾಥ, ಕೇದಾರನಾಥಕ್ಕೆ ಹೋಗುವ ಯಾತ್ರಾರ್ಥಿಗಳಿಗೆ ಪೊಲೀಸಿನವರು ತೊಂದರೆ ಕೊಡುತ್ತಿದ್ದರು. ಅದು ಸ್ವಾತಂತ್ರ್ಯ ಹೋರಾಟದ ಕಾಲವಾದ್ದರಿಂದ ಆಂಗ್ಲ ಪ್ರಭುಗಳು ಯಾತ್ರಾಸ್ಥಳಗಳಲ್ಲಿ ಸ್ವತಂತ್ರ ಹೋರಾಟಗಾರರು, ಕ್ರಾಂತಿಕಾರರು, ಸಾಧು ಸನ್ಯಾಸಿಗಳ ವೇಷದಲ್ಲಿರುತ್ತಾರೆಂಬ ಭಯದಿಂದ ಪೊಲೀಸು ಆಡಳಿತವನ್ನು ಬಹು ಬಿಗಿ ಮಾಡಿದ್ದರು. ಅಂಥ ಒಂದು ಸಂದರ್ಭದಲ್ಲಿ ಸಿದ್ದೇಗೌಡರು ಆಂಗ್ಲಭಾಷೆಯಲ್ಲಿ ಪೊಲೀಸಿನವರೊಂದಿಗೆ ವಾದಿಸಿದರು. ಯಾತ್ರಾರ್ಥಿಗಳಿಗೆ ವಿನಾಕಾರಣ ಏಕೆ ತೊಂದರೆ ಕೊಡುತ್ತೀರೆಂದು ಏರುದನಿಯಲ್ಲಿ ಪೊಲೀಸರಿಗೆ ದಬಾಯಿಸಿದರು. ಇದರಿಂದ ಕುಪಿತರಾದ ಪೊಲೀಸರು ಸಿದ್ದೇಗೌಡರ ಕೈಗೆ ಕೋಳಹಾಕಿ ಅಲ್ಲಿ ಮೆರವಣಿಗೆ ಮಾಡಿದರು. ಮೆರವಣಿಗೆಯುದ್ದಕ್ಕೂ ಗೌಡರು ನಗುತ್ತಲೇ ಇದ್ದುದನ್ನು ಕಂಡು ಪೊಲೀಸರು ಅಪ್ರತಿಭರಾಗಿ ''ಇವನು ಕೇಡಿಯಲ್ಲ ಹುಚ್ಚ'' ಎಂದು ಅವರ ಕೈಕೋಳ ಕಳಚಿ ಬಿಟ್ಟುಬಿಟ್ಟರು!



ಗಂಗಾನದಿಯ ಎಡದಂಡೆಯಲ್ಲಿ ಕೇವಲ 2-3ಗಜ ಅಗಲದ ದಾರಿಯಿದೆ. ಸುಮಾರು 160 ಮೈಲಿ ಪರ್ವತವನ್ನು ಹತ್ತಿ ಇಳಿದು ಆ ದಾರಿಯಲ್ಲಿ ಹೋದರೆ ಬದರಿಗೆ ಹೋಗಬಹುದು. ನಡೆಯಲಾರದವರು 150-200ರೂಗಳನ್ನು ಕೊಟ್ಟರೆ ಬೆನ್ನ ಮೇಲೆ ಕುರ್ಚಿಕಟ್ಟಿಕೊಂಡು ಅದರೊಳಗೆ ಯಾತ್ರಿಕನನ್ನು ಕುಳ್ಳಿರಿಸಿಕೊಂಡು ಹೋಗುತ್ತಾರೆ. ಆ ಪ್ರಯಾಣ ಸುಮಾರು 40-45ದಿನಗಳು ಹಿಡಿಯುತ್ತದೆ. ಕೆಲವೊಮ್ಮೆ ಮಂಜಿನ ಹೆಬ್ಬಂಡೆಗಳು ಕರಗಿ ದಾರಿಹೋಕ ಯಾತ್ರಾರ್ಥಿಗಳ ಮೇಲೆ ಬಿದ್ದು ಮುಕ್ತಿಕೊಡುತ್ತವೆ. ಅಂಥ ಸಾವನ್ನು ಹರ್ಷದಿಂದ ಸ್ವಾಗತಿಸುವ ದೈವಭಕ್ತರೂ ಇದ್ದಾರೆ.

ಸಿದ್ದೇಗೌಡರ ಹಿಮಾಲಯ ಯಾತ್ರೆಯ ಕಾಲಕ್ಕೆ ಅವರಿಗೆ ಧರ್ಮಶ್ರದ್ಧೆಯ ಒಂದು ಅಪೂರ್ವ ದರ್ಶನವಾಯಿತು. ಸುಮಾರು 40 ವರ್ಷ ವಯಸ್ಸಿನ ಬಂಗಾಳದ ಹೆಂಗಸೊಬ್ಬಳು ಕಾಲಿಲ್ಲದ ತನ್ನ ಗಂಡನನ್ನು ತನ್ನ ಬೆನ್ನ ಮೇಲೆ ಹೊತ್ತು ಬದರಿ, ಕೇದಾರ ಯಾತ್ರೆ ಮಾಡಿಸಲು ತನ್ನೂರಿನಿಂದ ಸಾವಿರಾರು ಮೈಲಿ ನಡೆದಿದ್ದಳು!

ಸಿದ್ದೇಗೌಡರಿಗೆ ಹೃಷಿಕೇಶ ಹಿಡಿಸಲಿಲ್ಲ. ಅಲ್ಲಿ ಏಕಾಂತವಾಸಕ್ಕೆ ಅವಕಾಶವಿಲ್ಲ. ಅಲ್ಲದೆ ಸ್ತ್ರೀ ಯಾತ್ರಿಕರು ಬ್ರಹ್ಮಚಾರಿಗಳ ಸೇವೆಗೆ ಕಾತರರಾಗಿರುತ್ತಿದ್ದರು. ಗಂಡಂದಿರು ಬಹುದೂರದಲ್ಲಿ ಜೀವನೋಪಾಯಕ್ಕೆ ವಾಸವಾಗಿರುವ ಸಂದರ್ಭದಲ್ಲಿ ಪತಿಯ ಅನುಮತಿಯಿಂದ, ಸಾಧು ಸನ್ಯಾಸಿಗಳಿಂದ ಗರ್ಭಾದಾನ ಪಡೆಯುವ ರಹಸ್ಯ ಪದ್ಧತಿ ಉಂಟೆಂದು ಕೇಳಿ ಬಂತು! ಗೌಡರು ಹೋಗಿರುವುದು ಕಟ್ಟಾಬ್ರಹ್ಮಚಾರಿಯಾಗಿರುವುದಕ್ಕೆ. ಗುರುವಾಜ್ಞೆ ಮೀರಿ ಅನೈತಿಕ ವೃತ್ತಿಗೆ ಇಳಿಯುವುದು ಪಾಪಕರವೆಂದು ತಿಳಿದು ಅವರು ಗಂಗೆಯ ಬಲದಂಡೆಯಲ್ಲೇ ಇನ್ನೂ ಹಿಮಾಲಯವನ್ನು ಏರಿಹೋಗಬೇಕೆಂದು ತೀರ್ಮಾನಿಸಿದರು. ಅಲ್ಲಿಂದ 4-5 ಮೈಲಿಗಳಲ್ಲಿ ಬ್ರಹ್ಮಪುರಿ ಎಂಬ ಊರಿನ ಎದುರು ದಡದಲ್ಲಿ ಸ್ವಾಮಿರಾಮತೀರ್ಥರ ಗುಹೆ ಇದೆ ಎಂದು ತಿಳಿದು ಗೌಡರು ಅಲ್ಲಿಗೆ ಹೋದರು. ಅಲ್ಲಿ ಒಬ್ಬ ಸಾಧು ಇದ್ದ. ಒಂದು ಖಾಲಿ ಇದ್ದ ಗುಡಿಸಲೂ ಇತ್ತು. ಮುಂಭಾಗದಲ್ಲಿ ಗಂಗೆ ರಭಸದಿಂದ

ಹರಿಯುತ್ತಿದ್ದಳು. ಕಾಡು ನಿಬಿಡವಾಗಿತ್ತು. ಕಾಲಿಕಂಬಳಿ ಮಠದವರು ವಾರಕ್ಕೊ ವರ್ಷಕ್ಕೊ ಒಂದಾವರ್ತಿ ಗೋಧಿಹಿಟ್ಟು, ಹೆಸರುಕಾಳು, ಉಪ್ಪು ಕೊಡುತ್ತಾರೆ. ನೀರು ಕುಡಿಯುವುದಕ್ಕೆ ಒಂದುಲೋಟ, ರೊಟ್ಟಿ ಸುಡಲು ಕಾವಲಿಯನ್ನೂ ಕೊಡುತ್ತಾರೆ. ಸ್ಥಳ ಬಿಟ್ಟು ಹೋಗುವಾಗ ಆ ಪಾತ್ರೆಗಳನ್ನು ಅವರಿಗೆ ಕೊಟ್ಟು ಹೋಗಬೇಕು.

ಅದು ಬೇಸಿಗೆ ಕಾಲವಾದ್ದರಿಂದ ಸಿದ್ದೇಗೌಡರು ಚಳಿಯ ಹೊಡೆತಕ್ಕೆ ಸಿಕ್ಕಲಿಲ್ಲ. ಆದರೂ ಒಂದು ಅಗ್ನಿಕುಂಡವನ್ನು ಇಟ್ಟುಕೊಂಡಿದ್ದರು. ಹುಲಿ, ಕರಡಿಗಳ ಕಾಟದಿಂದ ತಪ್ಪಿಸಿಕೊಳ್ಳಲು ಅದು ಅವಶ್ಯಕವಾಗಿ ಬೇಕಾಗಿತ್ತು. ಒಂದು ಲಕ್ಷ ಗಾಯತ್ರಿ ಮಂತ್ರ ಜಪಿಸಿದರೆ ಒಂದು ಸಿದ್ಧಿ ಘಟ್ಟವೆಂದು ಗೌಡರು ತಿಳಿದಿದ್ದರು. ದಿನಕ್ಕೆ 10-12 ಗಂಟೆಗಳ ಕಾಲ ಜಪಮಾಡಿ ಸುಮಾರು 50-70 ಸಾವಿರಕ್ಕೆ ಬಂದಿದ್ದರು. ಸ್ತ್ರೀ ಸಂಬಂಧವಾದ ವಿಚಾರಗಳು ತಲೆಯಿಂದ ಪೂರ್ಣವಾಗಿ ತೊಲಗಲಿಲ್ಲ. ಸಿದ್ದೇಗೌಡರು ಕಾದ ಮರಳಿನ ಮೇಲೆ ಹಗಲೆಲ್ಲಾ ನಿಂತು ಜಪಮಾಡಿದರು. ದೇಹದ ಆರೋಗ್ಯ ಕೆಡದಂತೆ ದೊಣ್ಣೆ ವರಸೆ ಅಭ್ಯಾಸ ಮಾಡುತ್ತಿದ್ದರು. (ಗೌಡರು ಊರಿಗೆ ಬಂದ ಮೇಲೆ ನಿಂಗಯ್ಯನ ಹೆಂಡತಿ ಆ ದೊಣ್ಣೆಯನ್ನು ಮಜ್ಜಿಗೆ ಕಡೆಯುವ ಮಂತನ್ನಾಗಿ ಮಾಡಿಕೊಂಡಳು) ಆದರೆ ತುಳಸಿ ಜಪಮಾಲೆ ಗೌಡರ ಮಂಡ್ಯದ ಮನೆಯ ಪೂಜಾಗೃಹದಲ್ಲಿ ಈಗಲೂ ಇದೆ. (ಗೌಡರು ಗಾಂಧೀಜಿ ಆಶ್ರಮದಿಂದ ತೆಗೆದುಕೊಂಡು ಹೋಗಿದ್ದ ದಪ್ಪ ನೂಲಿನ ದುಪ್ಪಟಿಯನ್ನು ಅವರ ಪತ್ನಿ ಕೆಲವು ವರ್ಷಗಳ ನಂತರ ಹಳೆ ಬಟ್ಟೆಗೆ ತಪ್ಪಲೆ ಕೊಡುವವರಿಗೆ ಕೊಟ್ಟುಬಿಟ್ಟರು.) ಗೌಡರಿಗೆ ಈ ವಿಷಯಗಳು ತುಂಬಾ ವ್ಯಸನವನ್ನುಂಟು ಮಾಡಿದುವು.

ಸಿದ್ದೇಗೌಡರಿಗೆ ಒಂದು ದಿವಸ ಹುಲಿರಾಯ ದರ್ಶನಕೊಟ್ಟ! ಅವರು ಹೆದರಿ ಬೆಚ್ಚಿಬಿದ್ದರು. 'ಬ್ರಹ್ಮಚಾರಿ ನಿರ್ಭೀತನಾಗಿರಬೇಕಲ್ಲವೆ?' ಎಂದು ಯಾರೋ ಹಂಗಿಸಿದಂತಾಯ್ತು. ಗೌಡರು. ಇದಕ್ಕಾಗಿ 5-6 ದಿವಸ ಉಪವಾಸವಿದ್ದು ಪ್ರಾಯಶ್ಚಿತ್ತ ಮಾಡಿಕೊಂಡರು. ಅವರಿದ್ದ ಸ್ಥಳ ದೊಡ್ಡ ಮರ, ಬೆಟ್ಟಗಳಿಂದ ಕೂಡಿದ ಕಣಿವೆಯಾಗಿತ್ತು. ರಾತ್ರಿಯ ಅಂಧಕಾರ



ಸೂರ್ಯೋದಯವಾದ 4-5 ಗಂಟೆಗಳವರೆಗೂ ಇರುತ್ತಿತ್ತು. ನಡುರಾತ್ರಿಯ ದೃಶ್ಯವಂತೂ ರುದ್ರರಮಣೀಯ. ಗೌಡರು ಕೆಲವು ಸಾರಿ ''ಭಂ ಭಂ ಶಂಭೋ ಶಂಕರ'' ಎಂದು ಆಕಾಶದತ್ತ ಮುಖ ಮಾಡಿ ಗಟ್ಟಿಯಾಗಿ ಕೂಗು ಹಾಕುತ್ತಿದ್ದರು. ಆ ಕೂಗಿಗೆ ಪ್ರತಿಧ್ವನಿ ಮೊಳಗುತ್ತಿತ್ತು - ಹತ್ತಾರುಸಾರಿ! ನಿದ್ರಾವಸ್ಥೆಯಲ್ಲಿದ್ದ ಹಕ್ಕಿ ಪಕ್ಷಿಗಳು ಹೆದರಿ ಚೀರಾಡುತ್ತಿದ್ದುವು. ಕಾಡುಮೃಗಗಳೂ ಕೂಗಾಡುತ್ತಿದ್ದುವು. ಕಗ್ಗತ್ತಲ ನೀರವತೆ ಕಲಕಿ ಹೋಗುತ್ತಿತ್ತು. ನಾನಾಗಿ ಮೃತ್ಯುವಿಗೆ ಏಕೆ ಕರೆಗೊಡಲಿ ಅದು ಹಿಂಸೆ ಎಂದು ತಿಳಿದು ಗೌಡರು ರಾತ್ರಿ ವೇಳೆ ಕೂಗುವುದನ್ನು ಬಿಟ್ಟು ಬಿಟ್ಟರು. ಒಮ್ಮೆ ಗೌಡರ ಗುಡಿಸಿಲ ಮುಂದೆಯೇ ದುಷ್ಟಪ್ರಾಣಿ ಮತ್ತೊಂದು ಪ್ರಾಣಿಯನ್ನು ತಿಂದು ಬಿಟ್ಟು ಹೋಗಿತ್ತು!

## ಕರುಳಿನ ಕರೆಗೆ ಓಗೊಟ್ಟು ಮರಳಿ ಮನೆಗೆ

ಒಂದು ದಿನ ಆಂಗ್ಲ ಸರ್ವೆಯರ್ ಒಬ್ಬರು ಗಂಗಾನದಿಯ ದಡದಲ್ಲಿ ಸಮೀಕ್ಷೆ ನಡೆಸುತ್ತಿದ್ದ. ಆತನ ಹೆಸರು ಪೆಸಿಜ್ವಲ್ ಲಾಟರ್. ಒಂದು ದಿನ ತತ್ವದ ಚರ್ಚೆ ನಡೆದ ಮೇಲೆ ಗೌಡರು ಆತನಿಗೆ ತಮ್ಮಲ್ಲಿದ್ದ ಶಂಕರಾಚಾರ್ಯರ ಗೀತವನ್ನು ಕೊಟ್ಟರು. ಆತ ಅದಕ್ಕೆ ಪ್ರತಿಯಾಗಿ ಇಂಗ್ಲೆಂಡಿಗೆ ಹೋದ ಮೇಲೆ ಗೌಡರು ಕೇಳಿಕೊಂಡಿದ್ದಂತೆ ಷೇಕ್ಸ್‌ಪಿಯರ್‌ನ ಸಮಗ್ರ ನಾಟಕಗಳ ಗ್ರಂಥವನ್ನು ಕಳುಹಿಸಿಕೊಟ್ಟ.

ಈ ನಡುವೆ ತಾಯಿ ತನ್ನ ಮಗನನ್ನು ಹಿಂದಿರುಗಿ ಬರಬೇಕೆಂದು ಕಾಗದದ ಮೇಲೆ ಕಾಗದ ಹಾಕಿ ಕೊನೆಗೆ ತಕ್ಷಣ ಬಾರದಿದ್ದರೆ ಉಪವಾಸ ಬಿದ್ದು ಸಾಯುತ್ತೇನೆಂದು ಬರೆಸಿದ್ದಳು. ಅಲ್ಲಿಯೇ ಇದ್ದ ಓರ್ವಸಾಧು ''ನೀನು ಈ ಜನ್ಮದಲ್ಲಿ ಗೃಹಸ್ಥನಾಗಿಯೇ ಬಾಳಬೇಕಾಗಿದೆ'' ಎಂದ. ಗೌಡರಿಗೆ ತ್ರಿಕರಣ ಶುದ್ಧಿಯ ಬ್ರಹ್ಮಚಾರಿಯಾಗುವುದು ಅಸಾಧ್ಯವೆಂದು ಅರಿವಾಯಿತು. ಪದವೀಧರನಾಗದೇ ಸಮಾಜದಲ್ಲಿ ಸ್ಥಾನ ಮಾನವಿಲ್ಲವೆಂದೂ, ಜೀವನ ಭರಣವೂ ಸಾಧ್ಯವಿಲ್ಲವೆಂದೂ ತನ್ನ ದೌರ್ಬಲ್ಯಗಳನ್ನು ಗೆಲ್ಲುವುದು ಅಸಾಧ್ಯವೆಂದೂ ಗೌಡರು ತಿಳಿದುಕೊಂಡರು. ಒಂದು ದಿನ ಧ್ಯಾನ ಮಾಡುತ್ತಾ ಗೌಡರು ಸಂಕಲ್ಪವೊಂದನ್ನು ಮಾಡಿದರು. ಪುರಂದರದಾಸರ ಪುಸ್ತಕವನ್ನು

ಕಣ್ಣುಮುಚ್ಚಿ ತೆಗೆದಾಗ ಬಲಗಡೆಯ ಪುಟದ ಮೊದಲನೆ ಪಂಕ್ತಿಯ ಆದೇಶದಂತೆ ನಡೆದುಕೊಳ್ಳುವುದಾಗಿ ನಿರ್ಧರಿಸಿದರು. ಹಾಗೆ ತೆಗೆದಾಗ ''ತಂದೆ ತಾಯಿಗಳ ಬಳಲಿಸಿ ಮಗ ಯಾತ್ರೆ ಮಾಡಿದರೇನು ಫಲ?'' ಎಂದು ಬಂತು. ಅವರಿಗೆ ಇದು ನಿಜವಾಗಿಯೂ ದೇವರು ಪ್ರತ್ಯಕ್ಷವಾಗಿ ನೀಡಿದ ಆದೇಶ ಎನ್ನಿಸಿತು.

ಮಾರನೇ ದಿನ ಯಾತ್ರಾರ್ಥಿಗಳ ಸಂಗಡ ಸಿದ್ದೇಗೌಡರು 10-12 ಮೈಲಿ ದೂರದಲ್ಲಿದ್ದ ವಸಿಷ್ಠರ ಗುಹೆಯನ್ನು ನೋಡಲು ಹೊರಟರು. ಆ ಯಾತ್ರೆಯ ನಂತರ ಛತ್ರಕ್ಕೆ ಕೊಡಬೇಕಾದ ಪಾತ್ರೆಗಳನ್ನು ಹಿಂದಿರುಗಿಸಿ ಹರಿದ್ವಾರಕ್ಕೆ ನಡೆದು ಬಂದು ರೈಲು ಹತ್ತಿದರು- ಅಹಮದಾಬಾದಿಗೆ. ಅದು 1927ನೆ ಆಗಸ್ಟ್ ತಿಂಗಳ ಕೊನೆಯ ವಾರ. ಸಿದ್ದೇಗೌಡರು ಸೀದಾ ಸಬರಮತಿಗೆ ಬಂದು ಆಶ್ರಮದೊಳಕ್ಕೆ ಹೋಗದೆ ಆಶ್ರಮದ ಚೆಂಬನ್ನು ಹಿಂದಿರುಗಿಸಿ: ಆಶ್ರಮವಾಸಿಯೊಬ್ಬರಿಂದ 35ರೂಗಳನ್ನು ಸಾಲವಾಗಿ ತೆಗೆದುಕೊಂಡು ಮದ್ರಾಸಿಗೆ ರೈಲು ಹತ್ತಿದರು. ಕಾಕಾಸಾಹೇಬರು ಗಾಂಧೀಜಿ ಸಂಗಡ ದಕ್ಷಿಣ ದೇಶದ ಪ್ರವಾಸದಲ್ಲಿದ್ದರು. ಸಿದ್ದೇಗೌಡರು ಅವರನ್ನು ಒಂದು ರೈಲು ನಿಲ್ದಾಣದಲ್ಲಿ ಭೇಟಿಮಾಡಿ ವಿಷಯ ತಿಳಿಸಿದರು. ಆಗ ಕಾಕಾಸಾಹೇಬರು ರೈಲಿನ 3ನೇ ತರಗತಿಯ ಬೋಗಿಯಲ್ಲಿ ಕುಳಿತಿದ್ದ ಮಹಾತ್ಮ ಗಾಂಧೀಜಿ ಅವರನ್ನು ಗೌಡರಿಗೆ ಭೇಟಿ ಮಾಡಿಸಿದರು. ''ಆತ್ಮ ವಂಚನೆಯಿಲ್ಲದೆ ನಡೆದುಕೊ'' ಎಂಬ ಮಹಾತ್ಮರ ಆಶೀರ್ವಾದವನ್ನು ಹೊತ್ತು ಗೌಡರು ಮರಳಿ ಮನೆಗೆ ಬಂದರು.

## ಮತ್ತೆ ವಿದ್ಯಾಭ್ಯಾಸ

ತಾಯಿ ಮಗನ ಆಗಮನದಿಂದ ಸಂತಸಪಟ್ಟು ''ನಿಮ್ಮಪ್ಪ ಮರಣಕಾಲದಲ್ಲಿ ಹೇಳಿದ್ದ ಪರೀಕ್ಷೆಯನ್ನು ಮಾಡಿಯಾಯಿತೆ?'' ಎಂದಾಗ ಗೌಡರು ''ಇಲ್ಲ'' ಎಂದರು. ''ಇಷ್ಟು ದಿವಸ ಆದೇಶದಲ್ಲಿ ಓದಿದ್ದು ಇನ್ನೇನನ್ನು? ಇನ್ನೂ ಎಷ್ಟು ವರ್ಷ ಓದಿದರೆ ಆ ಪರೀಕ್ಷೆ ಮಾಡಬಹುದು?'' ಎಂದು ತಾಯಿ ಕೇಳಿದಾಗ ಅವರು ''ಇನ್ನೂ ನಾಲ್ಕಾರು ವರ್ಷ'' ಎಂದು



ಉತ್ತರಿಸಿದರು. ಆಗ ತಾಯಿ ಏನನ್ನೋ ಆಲೋಚಿಸಿ '' ಅಯ್ಯೋ, ಬಿಡು ಸರಸ್ವತಿಯೇ ಇನ್ನೂ ಓದುತ್ತಿದ್ದಾಳಂತೆ. ಇನ್ನು ಮನುಷ್ಯನದು ಏನು! ನಾನು ನಿಮ್ಮಪ್ಪನಿಗೆ ಭಾಷೆ ಕೊಟ್ಟಿದ್ದೇನೆ. ಏನಾದರೂ ಆಗಲಿ ಅದನ್ನು ನೆರವೇರಿಸು'' ಎಂದು ಉತ್ತೇಜನ ಕೊಟ್ಟಳು.

ಸಿದ್ದೇಗೌಡರಿಗೆ ತಾನು ಪದವೀಧರನಾದರೆ ಸಮಾಜದಲ್ಲಿ ಸ್ಥಾನಮಾನವೆಂದು ಹಿಮಾಲಯದಲ್ಲಿದ್ದಾಗಲೇ ಮನವರಿಕೆಯಾಗಿತ್ತು. ಏಳೆಂಟು ತಿಂಗಳು ಊರಿನಲ್ಲಿದ್ದ ಗೌಡರು 1928ರ ಜೂನ್ ತಿಂಗಳಿನಲ್ಲಿ ಒಂದು ಪಂಚೆಉಟ್ಟು, ಒಂದು ಪಂಚೆ ಹೊದ್ದು ಮೈಸೂರಿಗೆ ಹೋಗಿ ಹಳೆಯ ಗೆಳೆಯರನ್ನು ಮೊದಲು ವಾಸಮಾಡುತ್ತಿದ್ದ ಆಲಮ್ಮನ ಛತ್ರ, ಶ್ರೀರಾಮ ಪೇಟೆಯಲ್ಲಿ ನೋಡಿದರು. ಗೌಡರ ಅವಸ್ಥೆ ಅವರೆಲ್ಲರಿಗೂ ಆಶ್ಚರ್ಯವನ್ನು ಉಂಟು ಮಾಡಿತು. ಅದೇ ದಿನ ಗೌಡರ ಅನ್ನ ವಸತಿ ವಿದ್ಯೆಗೆ ಸಹಾಯ ಮಾಡಿದ್ದ ಧರ್ಮ ಪ್ರವರ್ತಕ ಸಾಹುಕಾರ್ ಡಿ.ಬನುಮಯ್ಯನವರು ವಿಧಿವಶರಾಗಿದ್ದರು. ಗೌಡರ ಕಣ್ಣಲ್ಲಿ ನೀರು ಬಟ್ಟಾಡಿತು. ಅನ್ನದಾತ, ವಿದ್ಯಾದಾನಿ ಬನುಮಯ್ಯನವರ ಅಂತಿಮ ದರ್ಶನ ಪಡೆದ ಗೌಡರು ಶವಯಾತ್ರೆಯಲ್ಲಿ ಭಾಗವಹಿಸಿ, ಅಷ್ಟು ದೂರ ಶವಹೊತ್ತರು.

ಸಿದ್ದೇಗೌಡರು ಮೈಸೂರು ಯುವರಾಜ ಕಾಲೇಜಿಗೆ ಇಂಟರ್ ಮೀಡಿಯೇಟ್ ವ್ಯಾಸಂಗ ಮಾಡಲು ಸೇರಿದರು. ಆಗ ವೈಶ್ಯರ ವಿದ್ಯಾರ್ಥಿನಿಲಯದಲ್ಲಿದ್ದು ಕೊಂಡು ಚಿಕ್ಕಲಿಂಗಯ್ಯನವರು ಬಿ.ಎಲ್. ಪರೀಕ್ಷೆಗೆ ಓದುತ್ತಿದ್ದರು. ಗೌಡರು ಅವರ ಮೊರೆ ಹೊಕ್ಕು ಅವರ ಕೊಠಡಿಯಲ್ಲೇ ವಾಸ್ತವ್ಯ ಹೂಡಿದರು. ಊಟದ ವ್ಯವಸ್ಥೆ ಹಾಗೂ ಕಾಲೇಜು ಶುಲ್ಕ ಕಟ್ಟಲು ವಿದ್ಯಾರ್ಥಿಗಳಿಗೆ ಮನೆಪಾಠ ಹೇಳಿಕೊಡುತ್ತಿದ್ದರು. ಆಗ ಸುಪ್ರಸಿದ್ಧ ಸಾಹಿತಿ ನಾ.ಕಸ್ತೂರಿ ಯುವರಾಜ ಕಾಲೇಜಿನಲ್ಲಿ ಇತಿಹಾಸದ ಅಧ್ಯಾಪಕರಾಗಿದ್ದರು. ಅವರು ತಮ್ಮ ಶಿಷ್ಯಸಿದ್ದೇಗೌಡರಿಗೆ ವಿದ್ಯಾರ್ಥಿವೇತನ ದೊರಕಿಸಿಕೊಟ್ಟರು. ಆಗ ಯುವರಾಜ ಕಾಲೇಜಿನಲ್ಲಿ ವರಕವಿ ಕುವೆಂಪು ಕನ್ನಡ ಅಧ್ಯಾಪಕರಾಗಿದ್ದರು. ಅವರ ಪಾಠಕೇಳುವ ಭಾಗ್ಯ ಸಿದ್ದೇಗೌಡರ

ದಾಗಿತ್ತು. ಸಿದ್ದೇಗೌಡರು ಮೊದಲನೆ ವರ್ಷದ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ವರ್ಗಕ್ಕೆ ಮೊದಲನೆಯವರಾಗಿ ಉತ್ತೀರ್ಣರಾದರು. ಅವರಲ್ಲಿ ಆತ್ಮವಿಶ್ವಾಸ ಬೆಳೆಯತೊಡಗಿತು.

1929ನೆ ಇಸವಿ ಬೇಸಿಗೆ ರಜೆ ಕಳೆದ ನಂತರ ಸಿದ್ದೇಗೌಡರು ಇಂಟರ್ ಮೀಡಿಯೇಟ್ ಕೊನೆ ಪರೀಕ್ಷೆಗೆ ಓದಲಾರಂಭಿಸಿದರು. ಆಗ ಆ ಕಾಲೇಜಿಗೆ ಆರ್.ವಿ.ಕೃಷ್ಣಸ್ವಾಮಿ ಅಯ್ಯಂಗಾರ್‌ರವರು ಪ್ರಾಂಶುಪಾಲರಾಗಿದ್ದರು. ಅವರು ಸಿದ್ದೇಗೌಡರನ್ನು ಚೆನ್ನಾಗಿ ಓದುವ ಹುಡುಗನೆಂದು ಪ್ರೋತ್ಸಾಹಿಸುತ್ತಿದ್ದರು. ಅವರ ಅನುಮತಿಯನ್ನು ಪಡೆದು ಗೌಡರು 1930ನೆ ಜನವರಿಯಿಂದ ಕ್ಲಾಸಿಗೆ ಹೋಗದೆ ವ್ಯಾಸಂಗ ಮಾಡಲು ಪ್ರಾರಂಭಿಸಿದರು.

ಸಿದ್ದೇಗೌಡರು ಬೆಳಿಗ್ಗೆ ಏಳುಗಂಟೆಯಿಂದ ಸಂಜೆ ಆರುಗಂಟೆಯವರೆಗೆ ತೋಟದ ಮನೆಯಲ್ಲಿ ಪಠ್ಯಪುಸ್ತಕಗಳನ್ನು ಓದುತ್ತಿದ್ದರು. ಆ ಮೇಲೆ ಹೋಟೆಲ್‌ನಲ್ಲಿ ಊಟ ಮಾಡಿ ರಾತ್ರಿ ಎಂಟುಗಂಟೆಯಿಂದ ಹನ್ನೊಂದು ಗಂಟೆಯತನಕ ಕಾಲೇಜಿನ ಅಂಗಳದ ದೀಪದ ಬೆಳಕಿನಲ್ಲಿ ಓದಿ ಅಲ್ಲಿಯೇ ನಿದ್ರೆ ಹೋಗುತ್ತಿದ್ದರು. ಅವರಿಗೆ ಈ ಪರೀಕ್ಷೆಯಲ್ಲಿ ತಾನು ತೇರ್ಗಡೆಯಾಗುವೆನೆಂಬ ಆತ್ಮವಿಶ್ವಾಸ ಮೂಡಿತು.

1930ರ ಮಾರ್ಚಿ ತಿಂಗಳಲ್ಲಿ ಪರೀಕ್ಷೆಕಟ್ಟಬೇಕು. ಪರೀಕ್ಷೆ ಶುಲ್ಕ 18 ರೂಗಳು ಮಾತ್ರ. ಈ ಹಣಕ್ಕೆ ಅವರು ಕೇಳುವವರನ್ನೆಲ್ಲಾ ಕೇಳಿ ವಿಫಲಗೊಂಡರು. ತಮ್ಮಲ್ಲಿದ್ದ ಪುಸ್ತಕಗಳನ್ನು ಮಾರಿ ಹಣ ಕೂಡಿಸಲು ಪ್ರಯತ್ನಿಸಿ ವಿಫಲರಾದರು. ಇದುವರೆವಿಗೆ ತಾನು ಪಟ್ಟ ಕಷ್ಟವೆಲ್ಲಾ ವಿಫಲವಾಯಿತೆಂದು ಮನನೊಂದ ಸಿದ್ದೇಗೌಡರು ಒಂದು ದಿನ ಒಂದಾಣೆ ಕೊಟ್ಟು ಪಾದರಸವನ್ನು ತಂದು ಆತ್ಮಹತ್ಯೆ ಮಾಡಿಕೊಳ್ಳಲು ನಿಶ್ಚಯಿಸಿದರು. ಪಾದರಸವನ್ನು ಪುಸ್ತಕಗಳ ಮುಂದಿಟ್ಟು ಪ್ರಾರ್ಥಿಸಲು ಪ್ರಾರಂಭಿಸಿದರು. ಪರೀಕ್ಷೆ ಶುಲ್ಕ ಕಟ್ಟಲು ಅಂದೇ ಕೊನೆಯ ದಿನವಾಗಿತ್ತು. ಅಷ್ಟರಲ್ಲಿ ಕೊಠಡಿಯ ಬಾಗಿಲನ್ನು ಯಾರೋ ತಟ್ಟಿದರು. ಬಾಗಿಲು ತೆಗೆದಾಗ ಅವರ ಆಪ್ತಮಿತ್ರ ಬಿ.ಲಿಂಗೇಗೌಡರು ಒಳಬಂದು ''ಬಾಗಿಲು ಹಾಕಿಕೊಂಡು ಏನು



ಮಾಡುತ್ತಿದ್ದೀಯೆ? ಪರೀಕ್ಷೆ ಫೀಜು ಕಟ್ಟಿದೆಯಾ?'' ಎಂದರು. ಗೌಡರು ಪಾದರಸವನ್ನು ತೋರಿಸಿ ''ನನಗೆ ಉಳಿದಿರುವುದು ಇದೊಂದೇ ಮಾರ್ಗ'' ಎಂದರು. ಪರಿಸ್ಥಿತಿಯನ್ನು ಅರ್ಥಮಾಡಿ ಕೊಂಡ ಲಿಂಗೇಗೌಡರು ತನ್ನ ಸ್ನೇಹಿತನನ್ನು ಸಮಾಧಾನ ಪಡಿಸಿ ಕಾಲೇಜಿಗೆ ಗೌಡರನ್ನು ಕರೆದುಕೊಂಡುಹೋಗಿ ತಾವೇ ಪರೀಕ್ಷೆ ಶುಲ್ಕ ಕಟ್ಟಿದರು. ಗೌಡರನ್ನು ಆಪದ್ಬಾಂಧವನಂತೆ ಬಂದು ಕಾಪಾಡಿದ ಬಿ. ಲಿಂಗೇಗೌಡರು ಮುಂದೆ ಬಿ.ಎಸ್ಸಿ. ಪದವೀಧರರಾಗಿ ರೈಲ್ವೆ ಇಲಾಖೆಯಲ್ಲಿ ಉನ್ನತ ಹುದ್ದೆ ಅಲಂಕರಿಸಿದರು. ಲಿಂಗೇಗೌಡರು ದೇಹಾರೋಗ್ಯಕ್ಕೋಸ್ಕರ ಪ್ರತಿನಿತ್ಯ ಶಿರಸಾಸನ ಹಾಕುತ್ತಿದ್ದರು. ಅವರು ಧಾರವಾಡದಲ್ಲಿದ್ದಾಗ ಎಂದಿನಂತೆ ಪ್ರಾತಃಕಾಲ ಶಿರಸಾಸನ ಮಾಡುತ್ತಿದ್ದಾಗ ರಕ್ತ ಕಾರಿ ಸತ್ತುಹೋದರು.

ಸಿದ್ದೇಗೌಡರು ಪರೀಕ್ಷೆ ಮುಗಿಸಿಕೊಂಡು 1930ನೆ ಮಾರ್ಚಿ ತಿಂಗಳಿನಲ್ಲಿ ಊರಿಗೆ ಬಂದರು. ಆ ರಜೆಯಲ್ಲಿಯೇ ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ, ಮಾರಸಿಂಗನಹಳ್ಳಿ ದೊಡ್ಡಗೂಳಿಗೌಡರ ಮಗಳು ದೇವಮ್ಮ ಅವರೊಡನೆ ಸಿದ್ದೇಗೌಡರ ವಿವಾಹ ನೆರವೇರಿತು.

ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಸಿದ್ಧೇಗೌಡರು ಬಿ.ಎ.(ಆನರ್ಸ್) ಪದವಿಗೆ ಸೇರಿದರು. ಬಿ.ಎ.ನಲ್ಲಿ ಅವರ ಐಚ್ಛಿಕ ವಿಷಯ ಫಿಲಾಸಫಿ ಆಗಿತ್ತು. ಆಗ ಅವರಿಗೆ 12 ರೂ ವಿದ್ಯಾರ್ಥಿವೇತನ ಬರುತ್ತಿತ್ತು.

ಸಿದ್ದೇಗೌಡರಿಗೆ ವಿದ್ಯಾಭ್ಯಾಸ ಮಾಡಲು ಅವರ ಶ್ರೀಮಂತ ಮಾವನವರಿಂದ ಅಂತಹ ಸಹಾಯವೇನೂ ಸಿಗಲಿಲ್ಲ. ತಾನು ಶ್ರೀಮಂತನ ಅಳಿಯನಾಗಿ ಬಡವಿದ್ಯಾರ್ಥಿಯಾಗಿಯೇ ಪದವಿ ವ್ಯಾಸಂಗ ಮಾಡಿದೆನೆಂದು ಒಂದು ಕಡೆ ಬರೆದಿದ್ದಾರೆ. ಸಿದ್ದೇಗೌಡರು ಹಾಗೂ ಹೀಗೂ ಕಷ್ಟ ಪಟ್ಟು ವ್ಯಾಸಂಗ ಮಾಡಿ 1933ರಲ್ಲಿ ಬಿ.ಎ (ಆನರ್ಸ್) ಪದವಿ ಉತ್ತೀರ್ಣರಾಗಿ ತಂದೆ ತಾಯಿಯ ಇಚ್ಛೆಯನ್ನು ಪೂರೈಸಿ ಕೃತಾರ್ಥರಾದರು.

ಸಿದ್ದೇಗೌಡರು ಬಿ.ಎ (ಆನರ್ಸ್) ಪದವೀಧರರಾದನಂತರ ಬೊಂಬಾಯಿ ಅಥವಾ ಪೂನಾಕ್ಕೆ ಹೋಗಿ ಕಾನೂನು ವಿದ್ಯಾಭ್ಯಾಸ ಮಾಡಬೇಕು. ಇಲ್ಲವೇ ಪ್ಲೀಡರ್ ಟೆಸ್ಟ್ ಪರೀಕ್ಷೆಯನ್ನು ಮನೆಯಲ್ಲೇ ಓದಿ ಪರೀಕ್ಷೆ ಕಟ್ಟಿ ಪಾಸು ಮಾಡಬೇಕು. ವಕೀಲ ವೃತ್ತಿಯನ್ನವಲಂಬಿಸಬೇಕು. ರಾಜಕೀಯರಂಗಕ್ಕೆ ಪ್ರವೇಶಿಸಬೇಕು ಎಂದೆಲ್ಲಾ ಆಸೆಯನ್ನಿಟ್ಟುಕೊಂಡಿದ್ದರು. ಆದರೆ ಆ ಆಸೆಗಳು ಬರೀ ಆಸೆಯಾಗಿಯೇ ಉಳಿದುವು.

1933ನೆ ಇಸವಿಯಲ್ಲಿ ಭತ್ತ ಕಬ್ಬು ಬೆಳೆಯಲು ಕನ್ನಂಬಾಡಿಕಟ್ಟೆಯಿಂದ ನಾಲೆಗಳಿಗೆ ನೀರು ಹರಿಸಿದರು. ಕಟ್ಟಿಗೆರೆ ಗ್ರಾಮಸ್ಥರು ಮದ್ದೂರು ಶಾಖೆ ನಾಲೆಗೆ ಹೋಗಿ-ಅದರಲ್ಲಿ ಕಾವೇರಿ ನೀರು ಹರಿಯುತ್ತಿರುವುದನ್ನು ನೋಡಿ ಸಂತಸ ಪಟ್ಟರು. ಹೆಣ್ಣು ಮಕ್ಕಳು ಗಂಗೆ ಪೂಜೆ ಮಾಡಿದರು. ಮಂಡ್ಯದಲ್ಲಿ ಸಕ್ಕರೆ ಕಂಪನಿ ಪ್ರಾರಂಭವಾಗಿತ್ತು. ಆದರೆ ರೈತರು ಕಬ್ಬು ನೆಡಲು ಅಷ್ಟಾಗಿ ಉತ್ಸಾಹ ತೋರಲಿಲ್ಲ. ಸರ್ಕಾರಿ ಅಧಿಕಾರಿಗಳು ಗ್ರಾಮ ಗ್ರಾಮಕ್ಕೆ ಭೇಟಿಯಿತ್ತು ಕಬ್ಬುನೆಡುವಂತೆ ರೈತರನ್ನು ಉತ್ತೇಜಿಸುತ್ತಿದ್ದರು. ಮನೆಯಲ್ಲಿ ತಮ್ಮ ಹಾಗೂ ತಾಯಿ ಛಳಿ ಜ್ವರ ಪೀಡಿತರಾಗಿದ್ದರು. ಸಿದ್ದೇಗೌಡರು ಎರೆ ಹೊಲವನ್ನು ಸ್ವತಃ ಉಳುಮೆ ಮಾಡಿ ಮಟ್ಟ ಮಾಡಿಸಿ ತೆವುರಿ ಹಾಕಿಸಿದರು. ನಂತರ ಅವರು ಮಂಡ್ಯಕ್ಕೆ ಗಾಡಿ ಹೊಡೆದುಕೊಂಡು ಬಂದು ಬಿತ್ತನೆ ಕಬ್ಬನ್ನು ತುಂಬಿಕೊಂಡು ಹೋದರು. ಮಾರನೆ ದಿನವೇ ಕಬ್ಬು ನೆಡಿಸಿದರು. ಪೂರ್ವದಲ್ಲಿ ಗುಳಿಮಾಡಿ ಕಬ್ಬುನೆಡುತ್ತಿದ್ದರು. ಗೌಡರು ವ್ಯವಸಾಯ ಇಲಾಖೆಯವರ ಮಾರ್ಗದರ್ಶನದಂತೆ ನೇಗಿಲ ಸಾಲುಗಳ ಬದಿಯಲ್ಲಿ ಬಿತ್ತನೆ ಹಾಕಿ ಮಣ್ಣು ಮುಚ್ಚಿಸಿದ್ದನ್ನು ನೋಡಿ ''ಓದಿದವನ ಆರಂಭನೋಡು'' ಎಂದು ಹಾಸ್ಯಮಾಡಿದರು. ಎಳೆಂಟು ದಿನಗಳಲ್ಲಿಯೇ ಕಬ್ಬಿನ ಮೊಳಕೆಯೊಡೆದು ಗೌಡರು ಸಂತಸಪಟ್ಟರು.

## ವೃತ್ತಿ

ಒಂದು ದಿನ ಮಂಡ್ಯದಲ್ಲಿ ಸಿದ್ದೇಗೌಡರ ಹಳೆಯ ಗೆಳೆಯ ನಂಜಯ್ಯನ ಭೇಟಿಯಾಯಿತು. ಆಗ ಅವರು ಟಿ.ನರಸೀಪುರದ ಸಬ್‌ರಿಜಿಸ್ಟ್ರಾರ್



ಆಫೀಸಿನಲ್ಲಿ ಗುಮಾಸ್ತರಾಗಿದ್ದರು. ನಂಜಯ್ಯನವರು ''ಟಿ.ನರಸೀಪುರ ತಾಲ್ಲೂಕು ಕಛೇರಿಯಲ್ಲಿ 25ರೂ. ಗುಮಾಸ್ತೆ ಕೆಲಸ ಖಾಲಿ ಇದೆ. ಅದಕ್ಕೆ ಅರ್ಜಿಹಾಕು'' ಎಂದರು. ಮಾರನೆ ದಿನ ನಂಜನಗೂಡಿನ ಸಬ್‌ಡಿವಿಜನ್ ಆಫೀಸರು ನರಸೀಪುರಕ್ಕೆ ಬಂದರು. ಅವರ ಜೊತೆಯಲ್ಲಿ ಗುಮಾಸ್ತನಾಗಿದ್ದ; ಪ್ರೌಢಶಾಲೆಯಲ್ಲಿ ಸಿದ್ದೆಗೌಡರ ಸಹಪಾಠಿಯಾಗಿದ್ದ ಬ್ರಹ್ಮದೇವಯ್ಯನವರೂ ಬಂದಿದ್ದರು. ಪರಿಚಯ ಮರುಕಳಿಸಿತು. ಅವರು ಪ್ರವಾಸಿ ಮಂದಿರದಲ್ಲಿದ್ದಾಗ ಸಿದ್ದೇಗೌಡರು ಅರ್ಜಿಕೊಟ್ಟರು. ಆಫೀಸರ್‌ರವರು ಗೌಡರ ವಿದ್ಯಾರ್ಹತೆ ಮತ್ತು ದುಂಡಗಿನ ಅಕ್ಷರವನ್ನು ನೋಡಿ ''ನೀನು ತುಂಬ ವಿದ್ಯಾವಂತ, ಮುತ್ತಿನಂಥ ಅಕ್ಷರ ಬರೆಯುತ್ತಿದ್ದೀಯೆ. ಈ ಕೆಲಸಕ್ಕೆ ಎಸ್. ಎಸ್. ಎಲ್.ಸಿ. ಮಾಡಿದವನು ಸಾಕು. ನೀನು ಈ ಕೆಲಸದಲ್ಲೇ ಉಳಿಯುವವನಲ್ಲ'' ಎಂದಾಗ ಗೌಡರು ''ನನಗೆ ಯಾರೂ ಶಿಫಾರಸ್ಸು ಮಾಡುವವರಿಲ್ಲ. ನಾನು ಯಾವ ದೊಡ್ಡವರ ಮಗನೂ ಅಲ್ಲ. ಅಳಿಯನೂ ಅಲ್ಲ. ನಾನು ಬಡವ. ತಾವು ಈ ಕೆಲಸ ನನಗೆ ದಯಮಾಡಿಕೊಡಿ'' ಎಂದು ಕೋರಿಕೊಂಡರು. ಅವರಿಂದ ಹುಕುಂಬರುವುದಕ್ಕೂ ಅರ್ಜಿಕೊಟ್ಟಿದ್ದಕ್ಕೂ ನಾಲ್ಕಾರು ದಿನ ಹಿಡಿಯಿತು. ಆ ಅವಧಿಯಲ್ಲಿ ಗೌಡರು ತಾನು ಸರ್ಕಾರಿ ಕೆಲಸ ಮಾಡಬಲ್ಲನೆ. ತನ್ನ ಧ್ಯೇಯವೇನಾಯಿತು ಎಂದು ತೊಳಲಾಡಿ ಭಯಭೀತರಾದರು. ಸಿದ್ದೇಗೌಡರು 1934ರ ಏಪ್ರಿಲ್ 4ನೇ ತಾರಿಖು ಟಿ.ನರಸೀಪುರ ತಾಲ್ಲೂಕು ಕಛೇರಿಯಲ್ಲಿ ತಕರಾರು ತಃಖ್ತೆ ಗುಮಾಸ್ತರಾಗಿ ಕೆಲಸಕ್ಕೆ ಸೇರಿಕೊಂಡರು. ಆಗ ಅವರಿಗೆ ಬರುತ್ತಿದ್ದುದು 25ರೂ ಸಂಬಳ.

ಸಿದ್ದೇಗೌಡರು ಪ್ರತಿನಿತ್ಯ ಬೆಳಿಗ್ಗೆ ಕಾವೇರಿ ಕಪಿಲಾ ಸಂಗಮದಲ್ಲಿ ಸ್ನಾನಮಾಡಿ ಅಶ್ವತ್ಥಕಟ್ಟೆ (ಬ್ರಹ್ಮಾಶ್ವತ್ಥ)ಯನ್ನು ಪ್ರದಕ್ಷಿಣೆ ಹಾಕಿ ಅಗಸ್ತ್ಯೇಶ್ವರನಿಗೆ ದಾರಿ ತೋರೆಂದು ಬೇಡಿಕೊಂಡು 'ಕೆಲಸಕ್ಕೆ ಹಾಜರಾಗುತ್ತಿದ್ದರು. ಮೊದಲನೆ ತಿಂಗಳ ಸಂಬಳ ಬಂದ ತಕ್ಷಣವೇ ಸಿದ್ದೇಗೌಡರು ಬಾಡಿಗೆ ಮನೆಯೊಂದನ್ನು ಹಿಡಿದು ತಮ್ಮ ಪತ್ನಿ ದೇವಮ್ಮನವರನ್ನು ಕರೆಸಿಕೊಂಡು ಸಂಸಾರ ಹೂಡಿದರು.

2 ತಿಂಗಳು ಕಳೆದ ಮೇಲೆ ಬೆಂಗಳೂರಿನ ಮುಖ್ಯ ರಿಜಿಸ್ಟ್ರೇಷನ್ ಆಫೀಸಿಗೆ 35ರೂ ಸಂಬಳದ ಮೇಲೆ ಬರುವಂತೆ ಹುಕುಂಬಂತು. ಗೌಡರು ಪತ್ನಿಯನ್ನು ಊರಿಗೆ ಕರೆದುಕೊಂಡು ಹೋಗಿ ಬಿಟ್ಟು ಬೆಂಗಳೂರಿಗೆ ರೈಲು ಹತ್ತಿದರು. ಬೆಂಗಳೂರು ಪ್ರಧಾನ ರಿಜಿಸ್ಟ್ರೇಷನ್ ಆಫೀಸಿನ ಗುಮಾಸ್ತೆ ಹುದ್ದೆ ತಾತ್ಕಾಲಿಕವಾದದ್ದಾಗಿತ್ತು. 45 ದಿನಗಳ ನಂತರ ಅವರನ್ನು ಮತ್ತೆ ಟಿ.ನರಸೀಪುರ ತಾಲ್ಲೂಕು ಕಛೇರಿಗೆ ವರ್ಗಮಾಡಲಾಯಿತು. ನಾಲ್ಕಾರು ತಿಂಗಳ ನಂತರ ಸರ್ಕಾರ ಸಿದ್ದೇಗೌಡರನ್ನು ಮೈಸೂರಿಗೆ ಜಿಲ್ಲಾ ಶೇಂದಿ ಇಲಾಖೆಯ ಆಫೀಸಿನಲ್ಲಿ 35ರೂ ಸಂಬಳದ ಗುಮಾಸ್ತೆ ಕೆಲಸ ನೀಡಿತು.

ಗೌಡರು ಮೈಸೂರಿನಲ್ಲಿ ಸಂಸಾರ ಹೂಡಿದರು. ಅಲ್ಲಿ ಒಂದೆರಡು ವರ್ಷ ಸೇವೆ ಸಲ್ಲಿಸಿದ ಸಿದ್ದೇಗೌಡರನ್ನು ಕೃಷ್ಣರಾಜನಗರ ತಾಲ್ಲೂಕು ಕಛೇರಿಯ ಹೆಡ್‌ಕ್ಲಾರ್ಕ್‌ಆಗಿ ನೇಮಿಸಿ ವರ್ಗಮಾಡಲಾಯ್ತು.

ಆಗ ಕೃಷ್ಣರಾಜಸಾಗರ ನಿರ್ಮಾಣದಿಂದ ಹಳೆಯ ಊರಾದ ಎಡತೊರೆ ಮುಳುಗಿ ಹೋಗಿತ್ತು. ಕೃಷ್ಣರಾಜನಗರವೆಂಬ ಹೆಸರಿನಿಂದ ಹೊಸ ಪಟ್ಟಣ ನಿರ್ಮಾಣವಾಗಿತ್ತು. ಅದೇ ಊರಿನ ರೈಲ್ವೆ ಸ್ಟೇಷನ್‌ನಲ್ಲಿ ರೈಲಿಗೆ ನೀರೆತ್ತುವ ಕೆಲಸದಲ್ಲಿ ಗೌಡರ ತಮ್ಮ ಕರಿಗೌಡನೂ ಇದ್ದನು. ಆಗಿನ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಸರ್ ಮಿರ್ಜಾಇಸ್ಮಾಯಿಲ್‌ರವರು ಕೆ.ಆರ್.ನಗರದ ಪುರೋಭಿವೃದ್ಧಿಗೆ ವಿಶೇಷ ಆಸಕ್ತಿವಹಿಸಿದ್ದರು. ಒಂದು ವರ್ಷದ ನಂತರ ಸಿದ್ದೇಗೌಡರನ್ನು ಕೆ.ಆರ್.ನಗರದಿಂದ ಮೈಸೂರು ಜಿಲ್ಲಾ ಖಜಾನೆಗೆ ವರ್ಗಮಾಡಿದರು.

1939ನೆ ಜುಲೈ ತಿಂಗಳಿನಲ್ಲಿ ಮೈಸೂರು ಜಿಲ್ಲೆ ಇಬ್ಭಾಗವಾಗಿ, ನೂತನವಾಗಿ ಮಂಡ್ಯ ಜಿಲ್ಲೆ ಅಸ್ತಿತ್ವಕ್ಕೆ ಬಂತು. ಸಿದ್ದೇಗೌಡರ ಮನವಿಯ ಮೇರೆಗೆ ಅವರನ್ನು ಮಂಡ್ಯ ಜಿಲ್ಲಾ ಖಜಾನೆಗೆ ಗುಮಾಸ್ತರನ್ನಾಗಿ ವರ್ಗ ಮಾಡಲಾಯ್ತು. ಆಗ ಗೌಡರು ಹೊಸ ಜಿಲ್ಲೆಯಲ್ಲಿ ಖಾಯಂ ಸ್ಥಳ ಖಾಲಿ ಇದ್ದುದರಿಂದ ಖಾಯಂ ಮಾಡಿ ಎಂದು ಪ್ರತಿ ತಿಂಗಳೂ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಳ್ಳಲು ಪ್ರಾರಂಭಿಸಿದರು. ಕೊನೆಗೆ ಜಿಲ್ಲಾಧಿಕಾರಿಗಳು



ಸಬ್‌ಡಿವಿಜನ್ ಆಫೀಸಿನಲ್ಲಿ ವಿಶ್ವೇಶ್ವರಯ್ಯ ನಾಲಾ ಗುಮಾಸ್ತೆ ಕೆಲಸಕ್ಕೆ ನೇಮಿಸಿದರು. ಆಗ ಅವರಿಗೆ ಬರುತ್ತಿದ್ದುದು ಮಾಹೆಯಾನೆ 45ರೂ ಸಂಬಳ.

ಮಂಡ್ಯಕ್ಕೆ ಬಂದ ಒಂದು ವಾರದೊಳಗಾಗಿಯೇ ಸಿದ್ದೇಗೌಡರು ಮಲೇರಿಯ ಜ್ವರ ಪೀಡಿತರಾದರು. ಊರಿನಲ್ಲೂ ತಮ್ಮಂದಿರು, ತಾಯಿಯೂ ಆ ಖಾಯಿಲೆಯಿಂದ ನರಳುತ್ತಿದ್ದರು. ಗೌಡರೇ ಮನೆಯ ಕಡೆಯೂ ನೋಡಿಕೊಳ್ಳಬೇಕಾಯ್ತು. ಬರುತ್ತಿದ್ದ ಸಂಬಳವೆಲ್ಲಾ ವೈದ್ಯಕೀಯ ತಪಾಸಣೆ, ಔಷಧೋಪಚಾರಕ್ಕಾಗಿಯೇ ಖರ್ಚಾಗುತ್ತಿತ್ತು. ಒಂದು ತಿಂಗಳ ನಂತರ ಗೌಡರು ಗುಣಮುಖರಾದರು.

ಪಿತ್ರಾರ್ಜಿತ ಆಸ್ತಿಯಲ್ಲಿ ಸಿದ್ದೇಗೌಡರು ಮತ್ತು ತಮ್ಮಂದಿರಿಗೆ 4 ಎಕರೆ ಜಮೀನು ಬಂದಿತ್ತು. ಈ ಜಮೀನಿಗೆ ಕಬ್ಬುನೆಟ್ಟು ಸಂಪಾದನೆ ಮಾಡಿ ಹೊಸದಾಗಿ ಜಮೀನು ಕೊಳ್ಳಬೇಕೆಂಬ ಆಸೆ ಗೌಡರಿಗೆ. ಇದ್ದ ತಮ್ಮಂದಿರಲ್ಲಿ ಆಸ್ತಿ ರೂಢಿಸುವ ಜ್ಞಾನ ತಮ್ಮ ಕರೀಗೌಡನಿಗಿತ್ತು. ಕೆ.ಆರ್. ನಗರದಲ್ಲಿದ್ದಾಗ ಗೌಡರು ಆತನಿಗೆ ಓದುಬರಹಕಲಿಸಿದ್ದರು. ಧನಾರ್ಜನೆಯನ್ನು ಧರ್ಮಮಾರ್ಗದಿಂದ ಮಾಡಬೇಕು. ಅದನ್ನು ಸದಾಶೆಗಳಿಗೆ ಬಳಸಿಕೊಳ್ಳಬೇಕೆಂದೂ ಅದರಿಂದ ಮುಕ್ತಿಯುಂಟಾಗುತ್ತದೆ ಎಂದೂ ನಮ್ಮ ಧರ್ಮಶಾಸ್ತ್ರಗಳು ಹೇಳುತ್ತವೆ. ಗೌಡರು ಈ ಮಾರ್ಗವನ್ನೇ ಅನುಸರಿಸಿ ಸಾಧ್ಯವಾದಷ್ಟು ಆಚರಣೆಗೆ ತಂದರು. ತಮ್ಮ ಸೇವಾವಧಿಯಲ್ಲಿ ಗೌಡರು ಎಂದೂ ಲಂಚ ರುಷುವತ್ತುಗಳಿಗೆ ಕೈ ಚಾಚಲಿಲ್ಲ. ನಿಷ್ಠೆ ದಕ್ಷತೆ ಪ್ರಾಮಾಣಿಕತೆಯಿಂದ ಕೆಲಸ ನಿರ್ವಹಿಸಿದರು. ಜನತಾ ಜನಾರ್ಧನನಿಗೆ ಮೋಸ ಮಾಡುವುದೂ ಒಂದೆ, ದೇವರಿಗೆ ಮೋಸ ಮಾಡುವುದೂ ಒಂದೆ ಎಂದು ತಿಳಿದು ಅವರು ಕಲ್ಲುಮುಳ್ಳಿನದಾದರೂ ಸತ್ಯ ಮಾರ್ಗದಲ್ಲೇ ನಡೆದರು. ತಮ್ಮ ಕರೀಗೌಡನಿಗೆ ಯಜಮಾನಿಕೆ ವಹಿಸಿ ಮನೆತನದ ಪುರೋಭಿವೃದ್ಧಿಯ ಕಡೆಗೆ ಗಮನ ಹರಿಸುವಂತೆ ಹಿತವಚನ ಹೇಳಿದರು. ಕಬ್ಬಿನ ಹಣದ ಜೊತೆಗೆ ಸಾಲ ಮಾಡಿ ಸಿದ್ದೇಗೌಡರು ಕೇವಲ ಎರಡು ಮೂರು ವರ್ಷಗಳಲ್ಲೇ 10 ಎಕರೆ ನೀರಾವರಿ ಜಮೀನನ್ನು ಖರೀದಿಸಿದರು.

ಶುರುವಾಯಿತು. ಆಗದವರಿಗೆ –ಹೊಟ್ಟೆಕಿಚ್ಚು! ಜನ ಬದುಕಿದರೆ ಬಾಯಿ ಬಡಿದುಕೊಳ್ಳುತ್ತಾರೆ. ಕೆಟ್ಟರೆ ತಿಕ ಬಡಿದು ಕೊಳ್ಳುತ್ತಾರೆ!

ಸಿದ್ದೇಗೌಡರು 1943ನೇ ಸೆಪ್ಟಂಬರ್‌ನಲ್ಲಿ ಮಳವಳ್ಳಿ ಖಜಾನೆ ಶಿರಸ್ತೇದಾರರಾಗಿ ವರ್ಗವಾದರು. ಸಿದ್ದನಂಜಪ್ಪನವರು ಆಗ ತಹಶೀಲ್ದಾರರಾಗಿದ್ದರು. ಅವರ ಬಾಯಲ್ಲಿ ಯಾವಾಗಲೂ ಬೈಗುಳದ ಮಾತುಗಳೇ. ಆದರೆ ನಿಷ್ಕಲ್ಮಶ ಹೃದಯಿ ಆಗಿದ್ದರು. ಸಿದ್ದೇಗೌಡರು ಶಿರಸ್ತೆದಾರ ಹುದ್ದೆ ವಹಿಸಿಕೊಳ್ಳಲು ಹೋದಾಗ ಅವರಿಗೆ ನಮಸ್ಕಾರ ಮಾಡಿದರು. ಆಗ ಸಿದ್ದನಂಜಪ್ಪನವರು 'ಲೋಕೇಲೋ ಇಲ್ಲಿ. ತಾಲ್ಲೂಕಿಗೆ ನಾನಲ್ಲ ಅಮಲ್ದಾರ ನೀನುಕಣೊ. ಏನಾದರೂ ದುರ್ಘಟನೆಗಳಾಗುವ ಸಂದರ್ಭ ಬಂದಾಗ ನಾನು ಹಿಂದಿನ ತಾರೀಖು ರಜಹಾಕಿ ಹೊರಟು ಹೋಗುತ್ತೇನೆ. ಏನಾದರೂ ನೀನೇ ಹೊಣೆ. ನಾನೇ ರುಜು ಮಾಡಬೇಕಾದ ಕಾಗದ ಕಟ್ಟುಗಳನ್ನು ಕಳಿಸು. ಉಳಿದವುಕ್ಕೆಲ್ಲಾ ನೀನೇ ಠಘಾಡಿಸು ಗೊತ್ತಾಯಿತೇನೋ'' ಎಂದು ಹೇಳಿ ಮನೆಗೆ ಹೊರಟು ಹೋದರಂತೆ.

ಮಂಡ್ಯ ಸಬ್ ಡಿವಿಜನ್ ಆಫೀಸರು ತಹಶೀಲ್ದಾರ್ ಸಿದ್ದನಂಜಪ್ಪನವರ ಸ್ನೇಹಿತರಾಗಿದ್ದರು. ಟೀ ಕುಡಿಯುವುದು, ಸಿಗರೇಟು ಸೇದುವುದು ಇಸ್ಪೀಟು ಆಡುವುದು, ಮಾತು ಮಾತಿಗೂ ''ಜೈನಂಜುಂಡ'' ಎನ್ನುವುದು, ರೈತರು ಯಾರಾದರೂ ಮನೆಗೆ ಹೋಗಿ ಕಂಡರೆ, ಊಟದ ಹೊತ್ತಾಗಿದ್ದರೆ ''ಹೋಗೊ ಒಳಗೆ ಹೋಗಿ ಊಟ ಮಾಡಿ ಬಾ ಆ ಮೇಲೆ ನಿನ್ನ ಕಷ್ಟದ ವಿಚಾರಣೆ'' ಎನ್ನುತ್ತಿದ್ದರು. ಮೊದಲು ಆತ ಊಟ ಮಾಡಿ ಬಂದ ಮೇಲೆ '' ಲೇ ಹೋಗೊ ಕಛೇರಿಗೆ ಅಮಲ್ದಾರ್ರು ಅಲ್ಲವರೆ. ಹೇಳಿಕೊ ಹೋಗು, ನಿನ್ನ ಅಹವಾಲನ್ನು ಕೇಳಿ ಉಪಕಾರಮಾಡುತ್ತಾರೆ'' ಎಂದು ಕಳಿಸಿ ಬಿಡುತ್ತಿದ್ದರು. ಅವರು ವರ್ಗವಾಗಿ ಹೋಗುವಾಗ ಬೇಕಾದಷ್ಟು ಸಂಘ ಸಂಸ್ಥೆಗಳು ಬೀಳ್ಕೊಡುವ ಸಮಾರಂಭದಲ್ಲಿ ನಿಜವಾಗಿಯೂ ಒಂದು ಜಟಕಾಗಾಡಿಯ ತುಂಬಾ ಹೂವಿನ ಹಾರ ತುಂಬಿದ್ದುವು. ಡೆಪ್ಯುಟಿ ಕಮೀಷನರು ಅಮಲ್ದಾರರ ಈ ದೌರ್ಬಲ್ಯವನ್ನು ನೋಡಿಯೇ



ಸಿದ್ದೇಗೌಡರ ಪ್ರಾಮಾಣಿಕತೆ, ದುಡಿಮೆಯಲ್ಲಿ ನಂಬಿಕೆಯನ್ನಿಟ್ಟು ಅವರನ್ನು ಮಳವಳ್ಳಿಗೆ ವರ್ಗ ಮಾಡಿದರಂತೆ.

## ಶಿವನ ಸಮುದ್ರದಲ್ಲಿ ಮಹಾರಾಜರ ಬಿಡಾರ

ಮೈಸೂರು ಸಂಸ್ಥಾನದ ಕೊನೆಯ ಅರಸು ಶ್ರೀ ಜಯ ಚಾಮರಾಜ ಒಡೆಯರ್‌ರವರು (ಕ್ರಿ.ಶ.1940–47) 1944ನೆ ಇಸವಿಯಲ್ಲಿ ಅರಮನೆ ಪರಿವಾರ ಸಮೇತ ಶಿವನಸಮುದ್ರವನ್ನು ನೋಡಿಕೊಂಡು ಮಳವಳ್ಳಿ ಮಾರ್ಗವಾಗಿ ಮೈಸೂರಿಗೆ ಹಿಂದಿರುಗುವ ಕಾರ್ಯಕ್ರಮ ಪ್ರಕಟಿತವಾಯಿತು. ಆಗ ಮಳವಳ್ಳಿಯಲ್ಲಿ ಪ್ಲೇಗು ಇದ್ದುದರಿಂದ ಸಾರ್ವಜನಿಕರಿಂದ ಹಾರತುರಾಯಿ ತೆಗೆದುಕೊಳ್ಳದೆ ಮತ್ತು ನಿಲ್ಲದೆಯೂ ಹೊರಟು ಹೋಗುತ್ತಾರೆಂದು ತಿಳಿದು ಬಂತು. ಸರ್ಕಾರದ ಯಾವ ಇಲಾಖೆಯವರಿಗೂ ಸಂಭ್ರಮದ ಸ್ವಾಗತದ ಸಿದ್ಧತೆ ಮಾಡಬೇಕಾದ ಪ್ರಮೇಯ ಒದಗಲಿಲ್ಲವೆಂದು ಸಿದ್ದೇಗೌಡರು ಭಾವಿಸಿದ್ದರು. ಹಾಗೆ ಆಗಿದ್ದರೆ ಕಂದಾಯದ ಇಲಾಖಾ ಅಧಿಕಾರಿಗಳಾದ ಜಿಲ್ಲಾಧಿಕಾರಿ ಸಬ್ ಡಿವಿಜನ್ ಆಫೀಸರು ಮತ್ತು ತಹಶೀಲ್ದಾರರು ಹೆಚ್ಚಿಗೆ ಶ್ರಮ ವಹಿಸಬೇಕಿತ್ತು. ಶಿವನಸಮುದ್ರದಲ್ಲಿ ಮಹಾರಾಜರ ತಂಗಣೆಗೆ ಹಾಲು, ಸೌದೆ, ತರಕಾರಿ ಇತ್ಯಾದಿಗಳನ್ನು ಒದಗಿಸುವುದು ಮಾತ್ರ ತಹಶೀಲ್ದಾರರ ಕೆಲಸವಾಗಿತ್ತು. ಕೇವಲ 30–32 ಗಂಟೆಗಳ ಮುಂಚೆ ಮಹಾರಾಜರು ಸಾರ್ವಜನಿಕರ ಹಾರತುರಾಯಿಗಳನ್ನು ಸ್ವೀಕರಿಸುತ್ತಾರೆಂದು ಡೆಪ್ಯುಟಿ ಕಮಿಷನರು ತಿಳಿಸಿದರು. ತಹಶೀಲ್ದಾರರು ಮೊದಲೇ ಹೇಳಿದ್ದಂತೆ ರಜಹಾಕಿ ಮನೆಯಲ್ಲಿ ಕುಳಿತರು! ಸಿದ್ದೇಗೌಡರೇ ಇನ್‌ಛಾರ್ಜ್ ಅಮಲ್ದಾರರೆಂದು ಸಬ್‌ಡಿವಿಜನ್ ಆಫೀಸರಿಂದ ಖುದ್ದು ಹುಕುಂ ಬಂದಿತು. ಶೇಕದಾರರನ್ನು ಕಲೆ ಹಾಕಿ ಸಮಾಲೋಚನೆ ಮಾಡಿ ಮಳವಳ್ಳಿ ಪುರಸಭೆ ಮತ್ತು ಹರಿಜನರು, ಗಂಗಾ ಮತಸ್ಥರು ಒಕ್ಕಲಿಗರು ಅಚ್ಚುಕಟ್ಟಾದ ಚಪ್ಪರಗಳನ್ನು ಹಾಕಬೇಕೆಂದು ಆದೇಶ ನೀಡಲಾಯ್ತು. ಆದರೆ ಯಾರೂ ಹಾರತುರಾಯಿಗಳನ್ನು ಪ್ಲೇಗಿನ ಸೋಂಕಿರುವುದರಿಂದ ಮಹಾರಾಜರಿಗೆ ಅರ್ಪಿಸಕೂಡದೆಂದು ತಾಕೀತು ಮಾಡಲಾಯ್ತು.

ಮಹಾರಾಜರು ಮಳವಳ್ಳಿಗೆ ಬರುವ ಹಿಂದಿನ ರಾತ್ರಿ ಜಿಲ್ಲಾಧಿಕಾರಿಗಳು ಬಂದು ಪ್ರವಾಸಿ ಮಂದಿರದಲ್ಲಿ ತಂಗಿದರು. ಪುರಜನರು ಹರ್ಷಚಿತ್ತರಾಗಿ ಕೇವಲ 4-5 ಗಂಟೆಗಳಲ್ಲಿ ಸೊಗಸಾದ ಚಪ್ಪರಗಳನ್ನು ಹಾಕಿಬಿಟ್ಟರು. ಇದು ಮಳವಳ್ಳಿಯ ಜನರು ಅಮಲ್ದಾರ್ ಸಿದ್ದನಂಜಪ್ಪನವರ ಮೇಲೆ ಇಟ್ಟಿದ್ದ ಪ್ರೀತಿಯ ಅಭಿಮಾನದ ದ್ಯೋತಕವಾಗಿತ್ತು. ಜಿಲ್ಲಾಧಿಕಾರಿಗಳಿಗೆ ಸಂತೋಷವಾಗಿತ್ತು. ಆದರೆ ಹೂವಿನ ಹಾರ ಒಪ್ಪಿಸುವುದಕ್ಕೆ ಅವಕಾಶವಿಲ್ಲವೆಂದು ವ್ಯಥೆಯಾಗಿತ್ತು. ಆಗ ರಾತ್ರಿ 9-10 ಗಂಟೆಯಾಗಿತ್ತು. ಜಿಲ್ಲಾಧಿಕಾರಿಗಳು ಮಹಾರಾಜರಿಗೆ ಹೂವಿನ ಹಾರ ಹಾಕಬಹುದೆಂದು ವಿಷಯ ತಿಳಿಸಿದರು. ಆಗ ಸಿದ್ದೇಗೌಡರು ''ಆಗಲಿ ಸ್ವಾಮಿ, ಮೈಸೂರಿಗೆ ಒಬ್ಬ ಶೇಕದಾರರನ್ನು ಕಳಿಸಿ ಹೂವಿನ ಹಾರವನ್ನು ಬೆಳಗಿನ 6 ಗಂಟೆಯೊಳಗಾಗಿ ತರಿಸುತ್ತೇನೆ' ಎಂದರು. ಜಿಲ್ಲಾಧಿಕಾರಿಗಳು ಸಂತೃಪ್ತರಾಗಿ'' ಹಾಗೆಯೇ ಮಾಡಿ. ಮಳವಳ್ಳಿಯ ಹೂವಾಡಿಗರಿಂದ ಕಟ್ಟಿಸಬೇಡಿ'' ಎಂದು ಸೂಚಿಸಿದರು. ಆಗ ಮಳವಳ್ಳಿಯಲ್ಲಿ ಈಗಿನಂತೆ ವಾಹನ ಸೌಕರ್ಯವಿರಲಿಲ್ಲ. ಆ ಅವೇಳೆಯಲ್ಲಿ ಮೈಸೂರಿಗೆ ಹೋಗಿ ಮಹಾರಾಜರಿಗಾಗುವ 51/2 ಅಡಿಯ ದಪ್ಪವಾದ ಹೂವಿನ ಹಾರವನ್ನು ಕಟ್ಟಿಸಿ ತೆಗೆದುಕೊಂಡು ಬರುವುದು ಅಸಾಧ್ಯವಾಗಿತ್ತು. ಆಗ ಗೌಡರು ಗೋಪ್ಯವಾಗಿ ಸ್ಥಳದ ಹೂವಾಡಿಗರನ್ನೇ ಕರೆದು ಸುಂದರವಾದ ಹಾರವನ್ನು ಕಟ್ಟಿ ಕೊಡಬೇಕೆಂದು ಹೇಳಿದರು. ನಾಲ್ಕಾರು ಹೂವಾಡಿಗರು ಸೇರಿ ರಾತ್ರಿಯೆಲ್ಲಾ ಸೊಗಸಾದ ಹಾರವನ್ನು ಕಟ್ಟಿ ಬೆಳಗಿನ ಜಾವ 5 ಗಂಟೆಗೆ ತಂದೊಪ್ಪಿಸಿದರು ಬಹುಗೋಪ್ಯವಾಗಿ. ಜಿಲ್ಲಾಧಿಕಾರಿಗಳು ಆಹಾರವನ್ನು ನೋಡಿ 'ಮಹಾರಾಜರಿಗೆ ಒಪ್ಪುತ್ತದೆ' ಎಂದು ಮೆಚ್ಚುಗೆ ಸೂಚಿಸಿದರು. ಮಹಾರಾಜರ ಆಪ್ತಕಾರ್ಯದರ್ಶಿಗಳಿಗೆ ಪುರಸಭೆಯವರು ಮೈಸೂರಿಂದ ತಂದ ಹಾರ ಒಪ್ಪಿಸುತ್ತಾರೆಂದು ತಿಳಿಸಿದರು. ಮಹಾರಾಜರ ತಂಗಣೆಗೆ ಬೇಕಾದ ಹಾಲಿಗೋಸ್ಕರ ಸೊಗಸಾದ ನಾಲ್ಕೈದು ನಾಡ ಹಸುಗಳನ್ನು ಅವುಗಳ ಮಾಲೀಕರಿಂದ ಎರವಲಾಗಿ ತೆಗೆದುಕೊಂಡು ಕಳಿಸಿದ್ದರು -ಗೌಡರು.



ಕ್ಯಾಂಪಿಗೆ ತಿನ್ನಲು ಹಸಿಕಡಲೇ ಕಾಯಿಯನ್ನು ರಾತ್ರೋರಾತ್ರಿ ಶೇಕದಾರರ ಜವಾನರನ್ನು ಹಲಗೂರಿಗೆ ಕಳಿಸಿ ತರಿಸಿಕೊಟ್ಟರು. ಮಹಾರಾಜರು ಪ್ರವಾಸದಿಂದ ಹಿಂದಿರುಗಿದ ಮೇಲೆ ಅರಮನೆಯಿಂದ ಮೆಚ್ಚುಗೆಯ ಓಲೆ ಬಂತು - ತಾಲ್ಲೂಕು ಅಮಲ್ದಾರರಿಗೆ !

ಸಿದ್ದೇಗೌಡರು ಮಳವಳ್ಳಿ ತಾಲ್ಲೂಕು ಶಿರಸ್ತೆದಾರರಾಗಿದ್ದ ಕಾಲದಲ್ಲಿ ತಾಲ್ಲೂಕು ಬಂಧಿಖಾನೆಯ ಅಧಿಕಾರಿಯೂ ಆಗಿದ್ದರು. 1944ರಲ್ಲಿ ಸಿದ್ದೇಗೌಡರಿಗೆ ಮಾತೃವಿಯೋಗವಾಯ್ತು. ಮನೆಯ ಯಜಮಾನಿಕೆ ಹೊತ್ತಿದ್ದ ತಮ್ಮ ಕರೀಗೌಡ ತಾಯಿಯನ್ನು ಸರಿಯಾಗಿ ನೋಡಿಕೊಳ್ಳಲಿಲ್ಲವೆಂದೂ ಆಕೆ ಖಾಯಿಲೆ ಬಿದ್ದಾಗ ಮಂಡ್ಯದ ಆಸ್ಪತ್ರೆಗೆ ಸೇರಿಸಲಿಲ್ಲವೆಂದೂ ಗೌಡರಿಗೆ ನಂತರ ಗೊತ್ತಾಯಿತು.

ಈ ನಡುವೆ ಸಿದ್ದೇಗೌಡರು ಸಪತ್ನೀಕರಾಗಿ ತೀರ್ಥಯಾತ್ರೆ ಕೈಗೊಂಡರು. ಕಲ್ಕತ್ತದಲ್ಲಿರುವ ಬೇಲೂರು ಶ್ರೀರಾಮಕೃಷ್ಣಾಶ್ರಮ, ಗಯಾ, ಮಧುರೆ, ರಾಮೇಶ್ವರ ಮತ್ತಿತರ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿದರು. ಈ ಸಂದರ್ಭದಲ್ಲಿ ಗೌಡರು ತಾಯಿಯ ಚಿತಾಭಸ್ಮವನ್ನು ಗಯಾ ಕ್ಷೇತ್ರದ ಫಲ್ಗುಣಿ ನದಿಯಲ್ಲಿ ವಿಸರ್ಜಿಸಿದರು.

ನಂತರದ ವರ್ಷಗಳಲ್ಲಿ ಸಿದ್ದೇಗೌಡರು ಎಳಂದೂರು ತಾಲ್ಲೂಕಿನ ಅಮಲ್ದಾರರಾಗಿ ನೇಮಕಗೊಂಡರು. ಆಂಗ್ಲ ಸರ್ಕಾರ ಎಳಂದೂರು ತಾಲ್ಲೂಕನ್ನು ಟಿಪ್ಪುಸುಲ್ತಾನನ ಮರಣಾನಂತರ ದಿವಾನರಾಗಿ ಸೇವೆಸಲ್ಲಿಸಿದ್ದ ಪೂರ್ಣಯ್ಯನವರಿಗೆ ಜಹಾಗೀರಿಯಾಗಿ ಕೊಟ್ಟಿತ್ತು. ಅದರ ಆದಾಯವನ್ನೆಲ್ಲಾ ಖರ್ಚು ಕಳೆದು ಅವರ ಸಂತತಿಯವರು ಅನುಭವಿಸಿಕೊಂಡು ಬರುವ ಮಾನ್ಯತೆ ಕೊಟ್ಟಿದ್ದರು. ಪೂರ್ಣಯ್ಯನವರ ವಂಶೀಕರು ತಾಲ್ಲೂಕಿನ ಆಡಳಿತ ನಡೆಸಲು ಸರ್ಕಾರಕ್ಕೆ ವಹಿಸಿದ್ದರು. ಅದರ ಮೇಲೆ ಸರ್ಕಾರದ ಅಧಿಕಾರವೂ ಇತ್ತು. ಸಿದ್ದೇಗೌಡರು ಈ ಎರಡೂ ಸರ್ಕಾರಗಳನ್ನೂ ಮೈ ಮೇಲೆ ಹಾಕಿಕೊಳ್ಳದೇ ಪ್ರಜೆಗಳ ನಿಂದನೆಗೂ ಪಾತ್ರರಾಗದೇ ಯಶಸ್ವಿಯಾಗಿ ಅಧಿಕಾರ ನಡೆಸಿದರು. ಸರ್ಕಾರದ ಆದೇಶದಂತೆ ಸಿದ್ದೇಗೌಡರು ಎಳಂದೂರು

ಅಮಲ್ದಾರಿ ಜೊತೆಗೆ ಮಾಂಬಳ್ಳಿ ಮತ್ತು ಎಳಂದೂರು ಪುರಸಭೆಗಳಿಗೂ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು.

1948ರ ಜನವರಿಯಲ್ಲಿ ಮಹಾತ್ಮ ಗಾಂಧೀಜಿಯವರ ಕೊಲೆಯಾಯಿತು. ಸಿದ್ದೇಗೌಡರು ಧನ ಧಾನ್ಯವನ್ನು ವಸೂಲ್ಮಾಡಿ ಎಳಂದೂರಿನಲ್ಲಿ ಅವರ ಪುಣ್ಯತಿಥಿಯಂದು ಅನ್ನ ಸಂತರ್ಪಣೆ ಏರ್ಪಡಿಸಿದ್ದರು. ಆ ಸಂದರ್ಭದಲ್ಲಿ ಗೌಡರ ಧರ್ಮಪತ್ನಿ ದೇವಮ್ಮನವರೂ ಸಹಕರಿಸಿದ್ದು ಜನಮೆಚ್ಚುಗೆಗೆ ಪಾತ್ರವಾಯಿತು.

ಸಿದ್ದೇಗೌಡರು ಎಳಂದೂರಿನಲ್ಲಿ ಅಮಲ್ದಾರರಾಗಿದ್ದಾಗ ಮಾಡಿದ ಸಾಧನೆಯೆಂದರೆ ಆ ಊರಿನಲ್ಲಿ ದಾನಿಗಳ ನೆರವಿನಿಂದ ಪ್ರೌಢಶಾಲೆಯೊಂದನ್ನು ತೆರೆದಿದ್ದು ಚಿರಸ್ಮರಣೀಯ. ಆಗ ಎಳಂದೂರಿನಲ್ಲಿ ಮಾಧ್ಯಮಿಕ ವ್ಯಾಸಂಗದ ನಂತರ ಪ್ರೌಢಶಾಲೆಗೆ ಸೇರಲು ವಿದ್ಯಾರ್ಥಿಗಳು ಮೈಸೂರಿಗೆ ಹೋಗಬೇಕಾಗಿತ್ತು. ಇದರಿಂದ ಶೇ.95ರಷ್ಟು ವಿದ್ಯಾರ್ಥಿಗಳು ಮುಂದಿನ ವಿದ್ಯಾಭ್ಯಾಸದಿಂದ ವಂಚಿತರಾಗುತ್ತಿದ್ದರು. ಇದನ್ನು ಮನಗಂಡ ಸಿದ್ದೇಗೌಡರು ತಾಲ್ಲೂಕಿನ ಮುಖಂಡರನ್ನೂ, ಧನಿಕರನ್ನೂ, ದಾನಿಗಳನ್ನೂ ಆಹ್ವಾನಿಸಿ ವಿದ್ಯೆಯ ಮಹತ್ತಿನ ಬಗ್ಗೆ ನಾಲ್ಕು ಮಾತಾಡಿ ದಾನಿಗಳು ಉದಾರವಾಗಿ ದಾನಮಾಡಿದರೆ ಈ ತಾಲ್ಲೂಕಿನಿಂದ ಪರಸ್ಥಳಕ್ಕೆ ಓದಲು ಹೋಗುವ ತಮ್ಮ ಮಕ್ಕಳ ಖರ್ಚು ಶೇ.90ರಷ್ಟು ಕಡಿಮೆಯಾಗುವುದೆಂದು ಮನವರಿಕೆ ಮಾಡಿಕೊಟ್ಟರು. 15-20 ಸಾವಿರದ ಪಟ್ಟಿ ಸಿದ್ಧವಾಯಿತು. ಅನೇಕ ಮಂದಿ ಅಪಹಾಸ್ಯ ಮಾಡಿದರು. ಸಿದ್ದೇಗೌಡರು ದಾನಿಗಳ ಮನೆಗೆಲ್ಲಾ ಅಲೆದರು. 'ಆದಾನಿಯಿಂದ ತೆಗೆದುಕೊಂಡು ಬನ್ನಿ ನಾ ಆ ಮೇಲೆ ಕೊಡುತ್ತೇನೆ' ಎಂದು ಜವಾಬು ಬರುತ್ತಿದ್ದುದರ ರಹಸ್ಯವನ್ನು ಕುರಿತು ಚಿಂತಿಸಿದರು. ಸ್ವಲ್ಪ ಹೊಳೆಯಿತು. ಅದು 'ಬುದ್ಧಿಜೀವಿಗಳ' ಪ್ರಚಾರ! ಮಕ್ಕಳೆಲ್ಲಾ ಬಾಲಕಿಯರಾದಿಯಾಗಿ ಓದಿದರೆ ಮನೆಗೆಲಸ ಹೊಲಗೆಲಸದ ಗತಿಯೇನು? ಅವರ ಓದಿಗಾಗುವ ಖರ್ಚೇನು? ಓದಿದವರು ಹೊಲಗದ್ದೆಗಳನ್ನು ಉತ್ತು ಬೇಸಾಯ ಮಾಡವೆ. ಸರ್ಕಾರಿ ಕೆಲಸ ಸಿಕ್ಕಿದರೆ ಸರಿ ಸಿಕ್ಕದಿದ್ದರೆ



ಪುಢಾರಿಗಳಾಗಿ ಸಮಾಜ ಜೀವನವನ್ನೇ ಹಾಳು ಮಾಡುತ್ತಾರೆ. ಬಾಲಕ ಬಾಲಕಿಯರು ಬೆರೆತು ಓದುವುದರಿಂದ ಮಾನ ಮರ್ಯಾದೆಗಳಿಗೆ ಆತಂಕ. ತಾಯಿ ತಂದೆಗಳಿಗೆ ಅಪಕೀರ್ತಿ! ಇತ್ಯಾದಿಯಾಗಿ ಹೇಳಿ ಈ ಪಾಪಕೃತ್ಯಕ್ಕೆ ಧನಸಹಾಯ ಮಾಡುವಿರಾ? ಎಂದು ಅಪಪ್ರಚಾರ ಮಾಡುತ್ತಿದ್ದುದು ಗೌಡರಿಗೆ ತಿಳಿದು ಬಂತು. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿ ಕಾರ್ಯಸಾಧನೆ ಸುಲಭಸಾಧ್ಯವಾಗಿರಲಿಲ್ಲ.

ಸಿದ್ದೇಗೌಡರು ದೀರ್ಘವಾಗಿ ಆಲೋಚಿಸಿ ದಾನದ ಪಟ್ಟಿಗೆ ರುಜು ಹಾಕಿದ್ದ ದಾನಿಗಳಿಗೆಲ್ಲಾ ಗಮನ ಸೆಳೆವ ಪತ್ರ ಬರೆದರು. ಆ ಪತ್ರದಲ್ಲಿ ''ದಾನಿಗಳಾದ ನೀವುಗಳು ವಚನ ಭ್ರಷ್ಠರಾಗುವುದು ನಿಮಗೆ ಯೋಗ್ಯವಲ್ಲ. ಆದರಿಂದ ತಾವುಗಳು ಮುಕ್ತಿ ಹೊಂದಲೆಂದು ನಿರ್ದಿಷ್ಟಕಾಲದೊಳಗೆ ದಾನದ ಮೊಬಲಗನ್ನು ಕೊಡದಿದ್ದರೆ ನಾನು ಉಪವಾಸ ಬೀಳುತ್ತೇನೆ'' ಎಂದು ನಿರೂಪಿಸಿದ್ದರು. ಈ ಕ್ರಮ ಆ ದಾನಿಗಳಿಗೆ ಆಶ್ಚರ್ಯವನ್ನುಂಟು ಮಾಡಿತು. ಅಲ್ಲಿ ಕೆಲವು ಬುದ್ಧಿಜೀವಿಗಳು ಈ ವಿಚಾರವನ್ನು ಮೇಲಧಿಕಾರಿಗಳಿಗೆ ತಿಳಿಸುವುದಲ್ಲದೆ ಅಪರಾಧ ಸಂಹಿತೆಯ ಕಲಂ ಪ್ರಕಾರ ನ್ಯಾಯಾಲಯಕ್ಕೂ ಗೌಡರನ್ನು ಎಳೆಯಬೇಕೆಂದು ಆಲೋಚಿಸುತ್ತಿದ್ದರು. ನಿಯಮಿತ ಕಾಲ ಮೀರಿದ ಮಾರನೆ ದಿವಸ ಸಿದ್ದೇಗೌಡರು ತಮ್ಮ ಮನೆಯ ಜಗತಿಯ ಮೇಲೆ ಉಪವಾಸ ಮಲಗಿದರು. ಕೆಲ ಕುಹಕಿಗಳು 'ಕಳ್ಳ ಪೂಜಾರಿ ಸತ್ತರೆ ಒಂದು ಪಾವು ಅಕ್ಕಿ ಉಳಿಯತೆಂದುಕೊಂಡರು. ಒಂದು ದಿನ ಕಳೆಯಿತು. ತಾಲ್ಲೂಕು ಕಛೇರಿಯ ನೌಕರರು, ಜವಾನರುಗಳ ಮುಖಾಂತರ ನಿಜಾಂಶ ತಿಳಿದುಕೊಂಡರು. ಗೌಡರು ನಿಷ್ಠೆಯಿಂದ ವ್ರತಾಚರಣೆ ಮಾಡುತ್ತಿದ್ದಾರೆಂದು ಗೊತ್ತಾಯಿತು. ಶ್ರೀ ಸಾಮಾನ್ಯರಲ್ಲಿ ವಿಚಾರ ಪ್ರಚೋದನೆಯಾಗಿ ದಾನಿಗಳ ಹೃದಯ ಪರಿವರ್ತನೆಯಾಯಿತು. ಉಪವಾಸ ವ್ರತನಡೆಯುತ್ತಿದ್ದಲ್ಲಿಗೆ ನಾಲ್ಕಾರು ಮಂದಿ ಬಂದು ದಾನ ಮಾಡಿದರು.

ನಂತರ ಸಿದ್ದೇಗೌಡರು ಎಳಂದೂರು ತಾಲ್ಲೂಕಿನ ಅಂಚಿನಲ್ಲಿದ್ದ ಒಬ್ಬ ಶ್ರೀಮಂತ ಗೌಡನನ್ನು ಕಂಡು ''ನಿನ್ನ ಆತಿಥ್ಯವನ್ನು ಸ್ವೀಕರಿಸಬೇಕೆಂದಿದ್ದೇನೆ''

ಎಂದರು. ಅವರ ಹೆಸರು ರಾಜೇಗೌಡ. ಆತಿಥ್ಯಕ್ಕೆ ಗೊತ್ತಾದ ದಿನ ಸಿದ್ದೇಗೌಡರು ಇಬ್ಬರು ಗಣ್ಯವ್ಯಕ್ತಿಗಳು ಮತ್ತು ಶೇಕದಾರರ ಸಮೇತ ಊಟಕ್ಕೆ ಕುಳಿತರು. ಎಲೆಯ ಮೇಲೆ ಬಗೆ ಬಗೆಯ ಭಕ್ಷ್ಯ ಭೋಜ್ಯಗಳು. ಸಿದ್ದೇಗೌಡರು ಎಲೆಗೆ ಕೈ ಹಾಕಲಿಲ್ಲ. ರಾಜೇಗೌಡರು ಆಶ್ಚರ್ಯಚಕಿತರಾಗಿ ''ಊಟ ಮಾಡಿ'' ಎಂದಾಗ ಸಿದ್ದೇಗೌಡರು ಪ್ರೌಢಶಾಲಾ ಸ್ಥಾಪನೆಯ ವಿಚಾರವನ್ನೆತ್ತಿ ಗದ್ಗದ ಸ್ವರದಿಂದ '' ನೀವೇನನ್ನಾದರೂ ದಾನವನ್ನು ಈಗಲೇ ಕೊಡುವುದಾದರೆ ಊಟಮಾಡುತ್ತೇನೆ'' ಎಂದರು. ರಾಜೇಗೌಡರು ಸಂತೋಷದಿಂದ ''ಖಂಡಿತ ಆಗಲಿ'' ಎಂದು ಭರವಸೆ ಕೊಟ್ಟ ಮೇಲೆ ಊಟ ಮಾಡಿದರು. ಊಟ ಮುಗಿಸಿ ಮಂದಲಿಗೆಯ ಮೇಲೆ ಕುಳಿತಾಗ ಹೃದಯ ಶ್ರೀಮಂತಿಕೆಯಲ್ಲೂ ದೊಡ್ಡ ವ್ಯಕ್ತಿಯಾದ ರಾಜೇಗೌಡರು ಎಲೆಯಡಿಕೆಯ ತಟ್ಟೆಯಲ್ಲಿ 500 ರೂಗಳನ್ನಿಟ್ಟು ಕೊಟ್ಟರು. ಆಗ ಸಿದ್ದೇಗೌಡರ ಹೃದಯ ತುಂಬಿಬಂದು ಕಾಲು ನಡಿಗೆಯಲ್ಲೆ ಎಳಂದೂರಿಗೆ ಹಿಂದಿರುಗಿದರು.

ದಾನಿಗಳ ಪೈಕಿ ಇಬ್ಬರು ಅಣ್ಣ ತಮ್ಮ ದೊಡ್ಡ ಶ್ರೀಮಂತರು. ತಮ್ಮನ ಹತ್ತಿರ ತೆಗೆದುಕೊಂಡು ಬನ್ನಿ ಅಂತ ಅಣ್ಣ. ಅಣ್ಣನ ಹತ್ತಿರ ಈಸಿಕೊಂಡು ಬನ್ನಿ ಅಂತ ತಮ್ಮ ಸತಾಯಿಸುತ್ತಿದ್ದರು. ಆ ಶ್ರೀಮಂತ ಸಹೋದರರು ಹಣಗಳಿಸುವ ವಿಧಾನಗಳಲ್ಲೊಂದು ಮಧ್ಯಾಹ್ನದ 3-4 ಗಂಟೆಗೆ ಊಟಮಾಡಿ ರಾತ್ರಿಯೂಟದ ಖರ್ಚನ್ನು ಉಳಿಸಿಕೊಳ್ಳುವುದು! ಸೋಮವಾರ ಉಪವಾಸ ವ್ರತಾಚರಣೆ ಬೇರೆ! ಲೇವಾದೇವಿ ಪತ್ರಗಳನ್ನೆಲ್ಲಾ ಖಜಾನೆ ಕೋಣೆಯಲ್ಲಿ ಕಲೆ ಹಾಕಿಕೊಂಡು ಸಾಲ ವಸೂಲಾತಿಗೆ ಏನೇನು ಕ್ರಮತೆಗೆದು ಕೊಳ್ಳಬೇಕು ಆದಾಯ ಖರ್ಚಿನಿಂದ ನಿವ್ವಳ ಲಾಭವೇನು, ಸಾಲದ ಪತ್ರಗಳನ್ನು ಬರೆಸಿಕೊಳ್ಳುವವರಿಂದ ಯಾವ್ಯಾವ ಆಸ್ತಿಯನ್ನು ಆಧಾರ ಮಾಡಿಕೊಳ್ಳಬೇಕು ಇತ್ಯಾದಿ ಅವರ ಲೆಕ್ಕಾಚಾರ ನಡೆದಿತ್ತು. ಸಿದ್ದೇಗೌಡರು ಬೆಳಗಿನ 7 ಗಂಟೆಗೆ ಹೋಗಿ ಅವರ ಜಗಲಿ ಮೇಲೆ ತಮ್ಮನ ಜೊತೆ ಕುಳಿತರು. ಗೌಡರು ಅಂದು ಊಟ ಮಾಡದೇ ಕುಳಿತಿದ್ದಾರೆಂದು ಗೊತ್ತಾಗಿ 'ಅಣ್ಣ' ಸಾಯಂಕಾಲ 5 ಗಂಟೆಗೆ 1000 ರೂ ತಂದು ಕೊಟ್ಟರು. ಆಮೇಲೆ ಅವರ ತಮ್ಮನೂ 1001/-ರೂ



ಕೊಟ್ಟರು. ಗೌಡರು ಅವರಿಗೆ ಧನ್ಯವಾದ ಅರ್ಪಿಸಿಬಂದರು. ಮಾರನೇದಿನ ಅದುವರೆಗೆ ದಾನವಾಗಿ ಬಂದ ಹತ್ತು ಸಾವಿರದ ತೊಂಭತ್ತೊಂದು ರೂಗಳನ್ನು ಬ್ಯಾಂಕ್‌ಗೆ ಕಟ್ಟಿ ದಾನಿಗಳ ಪಟ್ಟಿಯನ್ನು ತಾಲ್ಲೂಕು ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಿದರು. ಜನಗಳಿಗೆ ಅತ್ಯಾಶ್ಚರ್ಯವೊಂದೇ ಅಲ್ಲ, ಗೌಡರ ಬಗ್ಗೆ ನಂಬಿಕೆಯೂ ಹುಟ್ಟಿತು.

ಅಮಲ್ದಾರ್ ಸಿದ್ದೇಗೌಡರು ಈ ಎಲ್ಲಾ ವಿಷಯವನ್ನು ಆಗಿನ ಮೈಸೂರು ಜಿಲ್ಲಾಧಿಕಾರಿ ನಾಗರಾಜರಾಯರಿಗೆ ತಿಳಿಸಿದರು. ಆದರೆ ಪ್ರೌಢ ಶಾಲೆಯನ್ನು ಪ್ರಾರಂಭಿಸಲು ಸ್ವಂತ ಕಟ್ಟಡವಿಲ್ಲ. ಜಹಗೀರುದಾರರಿಗೆ ಎರಡು ಮಹಡಿ ಮನೆಗಳಿದ್ದುವು. ಒಂದರ ತಳಭಾಗದಲ್ಲಿ ಆಸ್ಪತ್ರೆ ನಡೆಯುತ್ತಿತ್ತು. ಮೇಲ್ಭಾಗದಲ್ಲಿ ಪುರಸಭಾ ಕಛೇರಿಯಿತ್ತು. ಜಿಲ್ಲಾಧಿಕಾರಿಗಳು ಪುರಸಭಾ ಕಛೇರಿಯನ್ನು ಸ್ಥಳಾಂತರಗೊಳಿಸಿ ಆ ಜಾಗದಲ್ಲಿ ಶಾಲೆಯನ್ನು ಪ್ರಾರಂಭಿಸು. ಜಹಗೀರುದಾರರು ಅದಕ್ಕೆ ಒಪ್ಪದೆ ಸ್ಥಳೀಯ ಮಹಾಜನರ ಮಾತಿನಂತೆ ತಕರಾರು ಮಾಡಬಹುದು. ಅದನ್ನೆಲ್ಲಾ ನಾನು ನೋಡಿಕೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಹೀಗೆ 1948 ರಲ್ಲಿ ಎಳಂದೂರಿನಲ್ಲಿ ಪ್ರೌಢಶಾಲೆ ಪ್ರಾರಂಭವಾಯಿತು. ಸಿದ್ದೇಗೌಡರು ಎಳಂದೂರು -ಮಾಂಬಳ್ಳಿ ಪುರಸಭೆಗಳಿಂದ ತಿಂಗಳೊಂದಕ್ಕೆ ಸಾವಿರರೂಗಳಂತೆ ಸಹಾಯಧನ ಕೊಡುವಂತೆ ಮಾಡಿ, ಸರ್ಕಾರದ ಸಹಾಯಧನಕ್ಕೆ ವ್ಯವಹಾರ ನಡೆಸಿಶಾಲೆನಡೆಯುವಂತೆ ಮಾಡಿದರು.

ಆ ಸಂದರ್ಭದಲ್ಲಿ ಮೈಸೂರು ಜಿಲ್ಲಾಧಿಕಾರಿಗಳಾಗಿದ್ದ ನಾಗರಾಜರಾಯರು ಮಹಾರಾಜರ ಕಾರ್ಯದರ್ಶಿಯಾಗಿ ವರ್ಗವಾದರು. ಸಿದ್ದೇಗೌಡರು ಅವರನ್ನು ಹೋಗಿ ನೋಡಿದಾಗ ನಾಗರಾಜರಾಯರು ''ನಾನು ಅಲ್ಲಿಗೆ ಹೋದರೂ ಶಾಲೆ ಭದ್ರವಾದ ಬುನಾದಿಯ ಮೇಲೆ ನಿಲ್ಲುವಂತೆ ಮಾಡುತ್ತೇನೆ'' ಎಂದ ಭರವಸೆ ನೀಡಿದರು. ಆನಂತರ ಸಿದ್ದೇಗೌಡರ ಮೇಲೆ ಸರ್ಕಾರಕ್ಕೆ ಬೇಕಾದಷ್ಟು ಅರ್ಜಿಗಳು, ತಾರು ತಂತಿಗಳು ಹೋಗಿ, ಸರ್ಕಾರದವರು ಪ್ರೌಢಶಾಲಾ ಸ್ಥಾಪನೆಗಾಗಿ ಹಣ ವಸೂಲ್ಮಾಡಿ ದುರುಪಯೋಗ

ಪಡಿಸಿಕೊಂಡಿರುವನೆಂದೂ, ಸರ್ಕಾರದ ಮತ್ತು ಜಹಗೀರುದಾರರ ಅನುಮತಿಯನ್ನು ಪಡೆಯದೆ ಇರುವುದರಿಂದಲೂ ತಾಶೀಲ್ದಾರರ ಬಗ್ಗೆ ತನಿಖೆ ನಡೆಸಿ ವರದಿ ಕಳಿಸಬೇಕೆಂದು ಆಜ್ಞೆ ಮಾಡಿದ್ದರಂತೆ, ಅದಕ್ಕೆ ಮಹಾರಾಜರ ಕಾರ್ಯದರ್ಶಿಯಾಗಿ ವರ್ಗಾವಣೆಗೊಂಡಿದ್ದ ನಾಗರಾಜರಾಯರು ''ತನ್ನ ಆದೇಶದಂತೆ ತಹಶೀಲ್ದಾರರು ನಡೆದುಕೊಂಡಿರುವವರೆಂದೂ, ಹಣಾಪಹರಣವಾಗಿಲ್ಲವೆಂದೂ, ಒಂದು ವೇಳೆ ಆತನಿಗೆ ಶಿಕ್ಷೆ ವಿಧಿಸುವುದಾದರೆ ಅದನ್ನು ತನಗೇ ವಿಧಿಸಬೇಕು ಎಂದು ವರದಿ ಮಾಡಿದ್ದರಂತೆ. ಈಗ ಆ ಪ್ರೌಢಶಾಲೆ ಸರ್ಕಾರಿ ಶಾಲೆಯಾಗಿದ್ದು, ಅಲ್ಲಿ ವ್ಯಾಸಂಗ ಮಾಡಿದವರಲ್ಲಿ ಕೆಲವರು ಪಾಶ್ಚಾತ್ಯದೇಶಗಳಲ್ಲಿ ದೊಡ್ಡಹುದ್ದೆಗೇರಿದ್ದಾರೆ 'ಬುದ್ಧಿಜೀವಿಗಳ ಕುತಂತ್ರ ಅಡಗಿ ಹೋಯಿತು. ಜಹಗೀರಿಯೂ ಸರ್ಕಾರಕ್ಕೆ ಸೇರಿಕೊಂಡಿತು. ಸಿದ್ದೇಗೌಡರು ಸೇವೆಯಿಂದ ನಿವೃತ್ತರಾದ ಮೇಲೂ ಒಂದೆರಡಾವರ್ತಿ ಎಳಂದೂರಿಗೆ ಹೋಗಿ ಆ ಪ್ರೌಢಶಾಲೆಯನ್ನು ನೋಡಿ ಬಂದಿದ್ದರು.

ಮೈಸೂರು ಸಂಸ್ಥಾನದ ಕೊನೆಯ ಅರಸು ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್‌ರವರಿಗೆ ಭರತಪುರದ ಮಹಾರಾಜರು ಭಾವಮೈದುನ. ಒಮ್ಮೆ ಅವರಿಬ್ಬರೂ ಬಿಳಿಗಿರಂಗನ ಬೆಟ್ಟಕ್ಕೆ ಬೇಟೆಗಾಗಿ ಹೋಗಿದ್ದರಂತೆ. ಆಗ ಅವರೀರ್ವರೂ ಆನೆಗಳ ಕಾಟಕ್ಕೊಳಗಾಗಿ ಪ್ರಾಣ ಭಯಕ್ಕೀಡಾಗಿ ಭರತ ಪುರದ ಮಹಾರಾಜರು ಬೆಟ್ಟದಲ್ಲಿರುವ ಶ್ರೀಗಂಗಾಧರೇಶ್ವರ ಸ್ವಾಮಿಗೆ ಹರಕೆ ಮಾಡಿಕೊಂಡಿದ್ದರು. ಪ್ರತಿ ವರ್ಷ ಶಿವರಾತ್ರಿಯ ನಾಲ್ಕು ಝಾವವೂ ಪೂಜೆ ಮಾಡಿಸಿದ ತೀರ್ಥ ಪ್ರಸಾದವನ್ನು ಸ್ವೀಕರಿಸುತ್ತೇನೆಂದು, ಅವರು ದೇವರಿಗೆ ಬಹು ಬೆಲೆಬಾಳುವ ಚಿನ್ನದ ಕೊಳಗವನ್ನು ಮಾಡಿಸಿಕೊಟ್ಟಿದ್ದರು. ಶಿವರಾತ್ರಿ ದಿವಸ ಅದನ್ನು ದೇವರಿಗೆ ಧರಿಸಿ ರಾತ್ರಿ 6,9, 12 ಗಂಟೆ, ಬೆಳಗಿನ 4 ಗಂಟೆ ಮತ್ತು ಸೂರ್ಯೋದಯಕ್ಕೆ ಮುಂಚಿನ ಪೂಜೆಗಳನ್ನು ತಹಶೀಲ್ದಾರರು ಖುದ್ದು ಜಾಗರಣೆ ಮಾಡಿ ಪೂಜೆ ಮಾಡಿಸಿ, ನಾಲ್ಕು ಜನ ಬ್ರಾಹ್ಮಣರಿಗೆ ಅನ್ನಸಂತರ್ಪಣೆ ಮಾಡಿಸಿ, ತೀರ್ಥ ಪ್ರಸಾದವನ್ನು ಮಾರನೆ ದಿವಸವೇ ಅರಮನೆಗೆ ಕಳಿಸಬೇಕೆಂಬ ನಿಯಮವಿತ್ತು.



ಹಿಂದಿದ್ದ ಅಮಲ್ದಾರ್ರುಗಳು ಸಾಮಾನ್ಯವಾಗಿ ಯಳಂದೂರಿನಲ್ಲೇ ಇದ್ದುಕೊಂಡು ರೆಡ್ಡಿ ಮತ್ತು ಅರ್ಚಕರ ಸಹಾಯದಿಂದ ಶಿವರಾತ್ರಿ ಪ್ರಸಾದವನ್ನು ಅರಮನೆಗೆ ಕಳಿಸುತ್ತಿದ್ದರಂತೆ! ಸಿದ್ದೇಗೌಡರಿಗೆ ಹಾಗೆ ಮಾಡಲು ಮನಸ್ಸು ಬರಲಿಲ್ಲ. ಎಂದಿನಂತೆ ಗೌಡರು ರೆಡ್ಡಿಯವರ ಸಮೇತ ಎತ್ತಿನ ಗಾಡಿಯನ್ನು ಕಟ್ಟಿಸಿಕೊಂಡು ಪೂಜಾ ಸಕಲ ಸಾಮಗ್ರಿ ಮತ್ತು ಚಿನ್ನದ ಕೊಳಗವನ್ನು ಬಂದೂಕ ಸಮೇತ ಬೆಟ್ಟಕ್ಕೆ ಪ್ರಯಾಣ ಬೆಳೆಸಿ ಸಾಯಂಕಾಲ 5 ಗಂಟೆಗೆ ಗಂಗಾಧರನ ಸನ್ನಿಧಿಗೆ ಸೇರಿದರು. ಎತ್ತಿನಗಾಡಿ ಒಂದು ರೀತಿಯಲ್ಲಿ ಸುಖಕರವಾಗಿದ್ದರೂ ಇನ್ನೊಂದು ರೀತಿಯಲ್ಲಿ ಅವುಗಳ ದೆಸೆಯಿಂದ ಪ್ರಾಣಭಯವೂ ಇತ್ತು. ಹುಲಿಕಿರುಬಗಳ ಕಣ್ಣಿಗೆ ಬಿದ್ದರಾಯಿತಲ್ಲ! ಗಂಗಾಧರ ಬೆಟ್ಟದ ದಟ್ಟವಾದ ಕಾಡಿನ ಮಧ್ಯೆವಾಸ. ಗುಡಿ ಸುಮಾರು 8 X 6 ಅಡಿ ಮಾತ್ರ. ಪೂಜೆ ಪ್ರಾರಂಭವಾಯ್ತು. ಗುಡಿಯ ನಾಲ್ಕು ದಿಕ್ಕುಗಳಲ್ಲೂ ಬೆಂಕಿ ಹಾಕಿಸಿ ಮಧ್ಯೆ ಎತ್ತುಗಳನ್ನು ಕಟ್ಟಿಕೊಂಡು ಕಾಡು ಸೋಲಿಗರ ಸಹಾಯ ಪಡೆದು ಗೌಡರು ಜಾಗರಣೆ ಮಾಡಲು ಪ್ರಾರಂಭಿಸಿದರು.

ರಾತ್ರಿ 12 ಗಂಟೆ ಪೂಜಾ ಸಮಯದಲ್ಲಿ ಎರಡು ಹುಲಿಮರಿಗಳು ಕಾಣಿಸಿಕೊಂಡು ದೊಡ್ಡ ಬೆಕ್ಕಿನಂತೆ ಆರಚುತ್ತಾ ಬೆಂಕಿಯ ಕಡೆಗೇ ಬರಲು ಪ್ರಾರಂಭಮಾಡಿದುವು. ಹಿಂದುಗಡೆ ತಾಯಿ ಹುಲಿ ಬರುತ್ತಿರುವುದೆಂದು ಎಲ್ಲರೂ ಭಾವಿಸಿದರು. ಗಂಗಾಧರನೇಗತಿ, ಎತ್ತುಗಳಿಗೆ ನಂದೀಶನೇ ಗತಿ ಎಂದು ರೆಡ್ಡಿಯವರು ಬಂದೂಕನ್ನು ಸಿದ್ಧ ಮಾಡಿಕೊಂಡರು. ಹತ್ತಿರ ಹುಲಿ ಕಾಣಿಸಿಕೊಂಡ ತಕ್ಷಣ ಗುಡಿಬಾಗಿಲು ಹಾಕಿ ಒಳಗೆ ಸೇರವುದೆಂದೂ, ಬೆಂಕಿಯನ್ನು ಹೆಚ್ಚಿಸಿ ಗುಡಿಸುತ್ತ ಬಳಸಬೇಕೆಂದೂ, ಎತ್ತುಗಳು ಬೆಂಕಿಯ ಒಳ ಆವರಣದಲ್ಲಿರ ಬೇಕೆಂದೂ ನಿಶ್ಚಯಿಸಿದರು. ಆ ಹುಲಿಮರಿಗಳು ಅಲ್ಲೇ ಸುತ್ತು ಹಾಕುತ್ತಿದ್ದುವು. ಬೆಳಗಿನ 5 ಗಂಟೆಯಾದರೂ ತಾಯಿ ಹುಲಿ ಬರಲೇ ಇಲ್ಲ. ಆಗ ಸೋಲಿಗರವನು ದೊಡ್ಡ ಬೆಕ್ಕಿನ ಮರಿಗಳಂತಿದ್ದ ಹುಲಿ ಮರಿಗಳೆರಡನ್ನೂ ಹಿಡಿದು ಬುಟ್ಟಿಗೆ ಹಾಕಿ ಗಂಗಾಧರೇಶ್ವರನ ಪಕ್ಕದಲ್ಲಿಟ್ಟ, ರೋಷದಿಂದ ತಾಯಿ ಹುಲಿ ಎತ್ತ ಹೋಯಿತೋ ಆ ಗಂಗಾಧರನಿಗೇ

ಗೊತ್ತು! ಆದರೆ ಅಲ್ಲಿದ್ದವರಿಗೆಲ್ಲಾ ಭಯವಿದ್ದೇ ಇತ್ತು. ಬೆಳಗಿನ ಪೂಜೆ ಮುಗಿಸಿ ಅನ್ನಸಂತರ್ಪಣೆ ನಡೆಸಿ, ಆ ಸೋಲಿಗರವನನ್ನು ಹುಲಿ ಮರಿಗಳನ್ನು ತೆಗೆದುಕೊಂಡು ಯಳಂದೂರಿಗೆ ಮುಂದೆ ಹೋಗೆಂದು ಗೌಡರು ಕಳಿಸಿಕೊಟ್ಟರು. ಬೆಳಗಿನ 9 ಗಂಟೆಗೆ ಸಿದ್ದೇಗೌಡರು, ರೆಡ್ಡಿಯವರು ಹಾಗೂ ಮತ್ತಿಬ್ಬರು ಜವಾನರು ಎತ್ತಿನ ಗಾಡಿಯಲ್ಲಿ ಯಳಂದೂರಿನತ್ತ ಹೊರಟರು. ನಾಲ್ಕು ಜನರೂ ನಾಲ್ಕೂ ದಿಕ್ಕುಗಳಿಗೆ ನೆಟ್ಟಕಣ್ಣಿನಿಂದ ನೋಡುತ್ತಿದ್ದರು. ಪಾರಾಗಿ ಎಳಂದೂರಿಗೆ ಸೇರಿದರು.

ಸಿದ್ದೇಗೌಡರು ಒಂದು ದಿನ ಆ ಹುಲಿಮರಿಗಳನ್ನು ತಮ್ಮ ಮನೆಯ ಜಗತಿಯ ಮೇಲಿಟ್ಟು ಜನಗಳಿಗೆ ಪ್ರದರ್ಶಿಸಿ ತೀರ್ಥಪ್ರಸಾದದ ಸಮೇತ ಅರಮನೆಗೆ ಕಳಿಸಿಕೊಟ್ಟರು. ಮಹಾರಾಜರ ಭಾವ ಮೈದುನ ಆ ಸಮಯದಲ್ಲಿ ಮೈಸೂರಲ್ಲಿದ್ದರಂತೆ. ಆ ವರ್ಷದ ಅಪರೂಪದ ಗಂಗಾಧರೇಶ್ವರನ ತೀರ್ಥ ಪ್ರಸಾದವನ್ನು ಅರಮನೆಯವರೆಲ್ಲಾ ಪ್ರಶಂಸಿಸಿ ಸೋಲಿಗರವನಿಗೆ ಭಕ್ಷೀಸ್ ಕೊಟ್ಟು ಕಳಿಸಿದರು.

ಶ್ರೀ ಬಿಳಿಗಿರಿ ರಂಗನಾಥ ಸ್ವಾಮಿಗೆ ಅನೇಕ ವಜ್ರಾಭರಣಗಳಿದ್ದವು. ಹಿಂದಿದ್ದ ಅಮಲ್ದಾರರು ಧರ್ಮದರ್ಶಿಗಳ ಸಮ್ಮುಖದಲ್ಲಿ ಅವುಗಳನ್ನು ಪರಿಶೀಲಿಸಿದ್ದೆ ಅಪರೂಪವೆನ್ನುತ್ತಿದ್ದರು ಭಕ್ತಾದಿಗಳು. ಆಗಿನ ಪೇಷ್ಕಾರರ ಮೇಲೂ ದೂರು ಬರುತ್ತಿತ್ತು. ದೇವಸ್ಥಾನದ ನೌಕರನೊಬ್ಬನ ಹೆಂಡ್ತಿ ರೂಪಸ್ಥೆ. ಹಿಂದಿನ ಕೆಲವು ಅಮಲ್ದಾರರಿಗೆ ಅವಳ ಸೇವೆ ಮಾಡಿಸಿ ಆಭರಣ ಪರೀಕ್ಷೆಯನ್ನು ತಪ್ಪಿಸಿಕೊಳ್ಳುವ ಪರಿಪಾಠವಿತ್ತಂತೆ! ರೆಡ್ಡಿಯವರು ವಿಧುರರು. ಅವರೂ ಅಂಥ ವ್ಯವಹಾರಕ್ಕೆ ಮನಸೋತಿದ್ದಾರೆಂದು ಸಿದ್ದೇಗೌಡರು ಅನುಮಾನ ಪಟ್ಟಿದ್ದುಂಟು. ರೆಡ್ಡಿಯವರೇ ದೇವಾಲಯದ ಪ್ರಧಾನ ಧರ್ಮದರ್ಶಿಗಳಾಗಿದ್ದುದರಿಂದ ಅವರ ಸಮೇತ ಇನ್ನು ಕೆಲವು ಧರ್ಮದರ್ಶಿಗಳನ್ನು ಕರೆದುಕೊಂಡು ಹೋಗಿ ಗೌಡರು ಒಂದು ದಿನವೆಲ್ಲಾ ಪರೀಕ್ಷೆ ನಡೆಸಿದರು. ಕಂಡು ಬಂದ ಲೋಪದೋಷಗಳಿಗೆಲ್ಲಾ ಪೇಷ್ಕಾರರ



ಸಮಜಾಯಿಷಿಯನ್ನು ಕೇಳಿ, ಬಿಡದೆ ಬರೆಸಿಕೊಂಡು ತಪ್ಪಿತಸ್ಥರ ಮೇಲೆ ಸೂಕ್ತಕ್ರಮ ಕೈಗೊಳ್ಳುವಂತೆ ಮೇಲಧಿಕಾರಿಗಳಿಗೆ ಶಿಫಾರಸ್ಸು ಮಾಡಿದರು.

ಒಂದು ದಿನ ಸಿದ್ದೇಗೌಡರು ಬಿಳಿಗಿರಿರಂಗನಾಥಸ್ವಾಮಿಯ ಬೆಟ್ಟಕ್ಕೆ ಹೋಗಿ ಶ್ರೀರಂಗನಾಯಕಿ ಅಮ್ಮನವರ ದರ್ಶನಮಾಡಿ ವಾಪಸ್ಸು ಬರುವಾಗ ದಾರಿಯಲ್ಲಿದ್ದ ಕೆರೆಯಲ್ಲಿ ಒಂಟಿಸಲಗವೊಂದು ನೀರು ಕುಡಿಯುತ್ತಿತ್ತು. ಮನೆಗೆ ಬಂದು ಟಪಾಲು ನೋಡಿದರು. ಸಿದ್ದೇಗೌಡರು ಮಳವಳ್ಳಿ ತಹಶೀಲ್ದಾರ್ ಆಗಿ ವರ್ಗಾವಣೆಗೊಂಡಿದ್ದರು. ಈ ಸಂದರ್ಭದಲ್ಲಿ ಯಳಂದೂರು ತಾಲ್ಲೂಕಿನ ಹಳ್ಳಿ ಹಳ್ಳಿಯಲ್ಲೆಲ್ಲಾ 8-10 ದಿನಗಳ ಕಾಲ ಗೌಡರಿಗೆ ಬೀಳ್ಕೊಡು ಸಮಾರಂಭಗಳು ನಡೆದುವು. ಆ ಸಮಯದಲ್ಲಿ ಸಿದ್ದೇಗೌಡರು ಯಳಂದೂರಿನಲ್ಲಿ ಪಶುವೈದ್ಯಶಾಲೆಯ ಕಟ್ಟಡಕ್ಕೆ ದಾನಕೊಡಿ, ತಿಂಡಿತಿನ್ನುತ್ತೇನೆ. ಕಾಫಿ ಕುಡಿಯುತ್ತೇನೆಂದು ಪಟ್ಟುಹಿಡಿದರು. ನಿರೀಕ್ಷೆಯಂತೆ 5 ಸಾವಿರ ರೂ ಸಂಗ್ರಹವಾಯಿತು. ಅದನ್ನು ಎಸ್.ಬಿ.ಯಲ್ಲಿ ಖಜಾನೆಯಲ್ಲಿಟ್ಟು ಗೌಡರ ವಿಶ್ವಾಸಕ್ಕೆ ಪಾತ್ರರಾಗಿದ್ದ ದುಗ್ಗಟ್ಟಿ ಪುಟ್ಟಲಿಂಗಪ್ಪನವರಿಗೆ ಉಳಿಕೆ 2 ಸಾವಿರ ರೂಗಳನ್ನು ವಸೂಲ್ಮಾಡಿ ತಾಲ್ಲೂಕಿನ ಜನತೆಯ ಅವಶ್ಯಕತೆಯನ್ನು ನೆರವೇರಿಸಿರೆಂದು ವಿನಂತಿಸಿಕೊಂಡರು. ನಂತರದ ದಿನಗಳಲ್ಲಿ ಯಳಂದೂರಿನಲ್ಲಿ ಪಶುವೈದ್ಯ ಶಾಲಾ ಕಟ್ಟಡ ನಿರ್ಮಾಣವಾಯಿತು.

ಸಿದ್ದೇಗೌಡರು 1949ನೆ ಫೆಬ್ರವರಿ ತಿಂಗಳಿನಲ್ಲಿ ಮಳವಳ್ಳಿ ತಾಲ್ಲೂಕು ತಹಶೀಲ್ದಾರ್ ಆಗಿ ಅಧಿಕಾರ ಸ್ವೀಕಾರ ಮಾಡಿದರು. ಆಗ ರಾಮನಾಥಯ್ಯನವರು ಮಂಡ್ಯ ಜಿಲ್ಲಾಧಿಕಾರಿಗಳಾಗಿದ್ದರು. ಅವರು ನಿಷ್ಠಾವಂತ ದಕ್ಷ ಆಡಳಿತಗಾರರು. ಅಷ್ಟೇ ಅಲ್ಲ ಅವರು ದೊಡ್ಡ ವಿದ್ವಾಂಸರೂ ಸಹ ಆಗಿದ್ದರು. ಕಛೇರಿಯ ಆಯಾ ದಿವಸದ ಕೆಲಸವನ್ನು ಆಯಾ ದಿನವೇ ಕ್ಲುಪ್ತ ಕಾಲದಲ್ಲಿ ಮುಗಿಸಿ ಬಿಡುತ್ತಿದ್ದರು. ದುಷ್ಟರಿಗೆ ಶಿಕ್ಷೆ ವಿಧಿಸುವುದರಲ್ಲಿಯೂ ಗಟ್ಟಿಗರು. ಆಗಿನ ಸರ್ಕಾರದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ 8-10 ಪರಸ್ಪರ ಸಹಕಾರ ಸಂಘಗಳನ್ನು ಸ್ಥಾಪಿಸಿ ಸದಸ್ಯರನ್ನೂ ಪ್ರತಿಯೊಂದು ಸಂಘಕ್ಕೂ 2-3

ಸಾವಿರ ರೂಗಳ ಬಂಡವಾಳದ ಮೊಬಲಗನ್ನೂ ಕೂಡಿಸಬೇಕೆಂದು ಬೆರಳಚ್ಚಿನ 6-8 ಪುಟಗಳ ಸುತ್ತೋಲೆ ಬಂದಿತ್ತು. ಸಿದ್ದೇಗೌಡರು ಮೊದಲು ಮಳವಳ್ಳಿಯಲ್ಲಿ ಶಿರಸ್ತೆದಾರ ರಾಗಿದ್ದಾಗ ಇದ್ದ ಕೆಲವು ಶೇಕದಾರರೂ ಗುಮಾಸ್ತರೂ ತಾಲ್ಲೂಕು ಕಛೇರಿಯಲ್ಲಿ ಇದ್ದರು. ಮೇಲಾಗಿ ತಾಲ್ಲೂಕಿನ ಎಲ್ಲಾ ಗ್ರಾಮಗಳ ಪರಿಚಯಸ್ಥ ಗ್ರಾಮಾಧಿಕಾರಿಗಳೂ ಇದ್ದರು. ಗೌಡರು ಕೇವಲ 20 ದಿನಗಳೊಳಗಾಗಿ ಹತ್ತು ಸಹಕಾರ ಸಂಘಗಳಿಗೂ 3-4 ಸಾವಿರ ಷೇರು ಮೊಬಲಗನ್ನು ವಸೂಲ್ಮಾಡಿ ಜಿಲ್ಲಾಧಿಕಾರಿಗಳಿಗೆ ವರದಿ ತಲುಪಿಸಿದರು. ಹಾಗೆಯೇ ತಾಲ್ಲೂಕಿನಲ್ಲಿ ನೂರಕ್ಕೆ ನೂರರಷ್ಟು ಕಂದಾಯ ವಸೂಲು ಮಾಡಿ ದಾಖಲೆಯನ್ನೇ ಸ್ಥಾಪಿಸಿ ಜಿಲ್ಲಾಧಿಕಾರಿಗಳ ವಿಶ್ವಾಸಕ್ಕೆ ಪಾತ್ರರಾದರು.

ಮಳವಳ್ಳಿಯಲ್ಲಿ ಪಟ್ಟಲದಮ್ಮನ ದೇವಸ್ಥಾನವಿದೆ. ವರ್ಷಕ್ಕೊಮ್ಮೆ ಆ ದೇವತೆಯ ಜಾತ್ರೆ ಉತ್ಸವಗಳು ಜರುಗಬೇಕಿತ್ತು. ಗಂಗಾಮತಸ್ಥರು ಹಾಗೂ ಒಕ್ಕಲಿಗರ ವೈಮನಸ್ಸಿನಿಂದ ಆ ಜಾತ್ರೆ ನಿಂತು ಹೋಗಿ 10-12 ವರ್ಷಗಳಾಗಿತ್ತು. ಅದನ್ನು ನಡೆಸಬೇಕೆಂದು ಪೌರರು ಬೇಡಿದರು. ಸಿದ್ದೇಗೌಡರು ಆಗಬಹುದೆಂದು ಲೈಸೆನ್ಸ್ ಕೊಟ್ಟರು ವಿಶೇಷವಾದ ಪೊಲೀಸು ಸಿಬ್ಬಂದಿ ಬರಬೇಕೆಂದು ಪೊಲೀಸಿನವರಿಂದಲೂ ಕೆಲವು ಮುಖಂಡರಿಂದಲೂ ಸಲಹೆ ಬಂತು. ಸಿದ್ದೇಗೌಡರು ನೋಡೋಣವೆಂದು ಹೇಳಿ ಒಬ್ಬನೇ ಒಬ್ಬ ಪೊಲೀಸು ಪೇದೆಯನ್ನು ಕರೆದುಕೊಂಡು ದೇವರ ಉತ್ಸವವನ್ನು ಸಾಯಂಕಾಲ 6 ಗಂಟೆಗೆ ಪ್ರಾರಂಭಿಸಿ ಪಟ್ಟಣದ ಬೀದಿಗಳಲ್ಲೆಲ್ಲಾ ಮೆರವಣಿಗೆ ಮಾಡಿಸಿ ಬೆಳಗಿನ 6 ಗಂಟೆಗೆ ಮುಗಿಸಿದರು. ಜನರು ಬಹಳವಾಗಿ ಸಂತೋಷಪಟ್ಟರು. ಇದರ ಅರ್ಥ ಇಷ್ಟೇ. ಸರ್ಕಾರದ ಆಡಳಿತಾಧಿಕಾರಿ ಗಳು ಪಕ್ಷಪರಪಕ್ಷಗಳನ್ನು ವಹಿಸಿ ಕೊಳ್ಳದೆ ಲಂಚಕ್ಕೆ ಆಸೆ ಪಡದೆ ಕೋಮುವಾರು ಭಾವನೆಯನ್ನು ತೋರಿಸದೆ ನಡೆದು ಕೊಂಡರೆ ಜನಾನುರಾಗವನ್ನು ಸಂಪಾದಿಸುವುದು ಕಷ್ಟಕರವಲ್ಲ ಮತ್ತು ಮನಸ್ಸಿಗೂ ನೆಮ್ಮದಿ ದೊರೆಯುತ್ತದೆ. ಕೀರ್ತಿ ತನ್ನಷ್ಟಕ್ಕೆ ತಾನೇ ಹಿಂಬಾಲಿಸುತ್ತದೆ ಎನ್ನುವುದಕ್ಕೆ ಗೌಡರ ಈ ಮುತ್ಸದ್ದಿತನವೇ ಸಾಕ್ಷಿ.



ಮಳವಳ್ಳಿಯಲ್ಲಿ ಒಂದು ಕ್ಲಬ್ ಅನ್ನು ನಡೆಸಬೇಕೆಂದು ಕೆಲವರು ಸಿದ್ದೇಗೌಡರಿಗೆ ಒತ್ತಾಯ ಮಾಡಿದರು. ಗೌಡರು ಮಾಡಿಕೊಳ್ಳಿ ಎಂದರು. ನಂತರ ನೀವೇ ಅಧ್ಯಕ್ಷರಾದರೆ ಮಾಡುತ್ತೇವೆ ಎಂದರು. ಗೌಡರು ಒಪ್ಪಿದರು. ಆಗಿನ ಪುರಸಭಾಧ್ಯಕ್ಷರ ಕೈವಾಡ ಇದು! ಗೌಡರು ಏಳೆಂಟು ದಿವಸ ಕ್ಲಬ್‌ಗೆ ಹೋದರು. ಇಸ್ಪೀಟು ಆಟ ಸ್ವಲ್ಪ ಗೊತ್ತಿತ್ತು. ಗೌಡರು ಕಾಸಿಟ್ಟು ಆಡಬಾರದೆಂದು ಬೋಧಿಸಿದರೂ ಸದಸ್ಯರು ಕೇಳಲಿಲ್ಲ. ಆಟಕ್ಕೆ ಕಳೆಯೇ ಇಲ್ಲವೆಂದರು! ಗೌಡರು ನಿತ್ಯ 3-4 ರೂಗಳನ್ನು ಕಳೆದುಕೊಳ್ಳುವುದರ ಜೊತೆಗೆ ರಾತ್ರಿ 1-2 ಗಂಟೆಗೆ ಮನೆಗೆ ಬರುವಂತಾಯಿತು. ಮನೆಯ ವಾತಾವರಣ ಬಹು ಕಹಿಯಾಗಿತ್ತು. ಹತ್ತಾರು ದಿನ ಕಳೆಯುತ್ತಿದ್ದಂತೆಯೇ ಗೌಡರು ಒಂದು ದಿನ ರಾಜ, ರಾಣಿ, ಜೋಕರ್ ಹಾಗೂ ಕ್ಲಬ್‌ಗೆ ದೊಡ್ಡ ನಮಸ್ಕಾರ ಹಾಕಿ ಹೊತ್ತಿಗೆ ಮುಂಚೆ ಮನೆ ಸೇರಿಕೊಂಡರು! 1951ರ ಡಿಸೆಂಬರ್ ತಿಂಗಳಿನಲ್ಲಿ ಸರ್ಕಾರ ಸಿದ್ದೇಗೌಡರನ್ನು ಮಳವಳ್ಳಿಯಿಂದ ಟಿ.ನರಸೀಪುರಕ್ಕೆ ವಿಶೇಷ ಅಮಲ್ದಾರಿ ಅಧಿಕಾರಿಯಾಗಿ ವರ್ಗಾವಣೆ ಮಾಡಿತು.

ಸಿದ್ದೇಗೌಡರು ಟಿ. ನರಸೀಪುರ ತಾಲ್ಲೂಕಿನ ಕೊಡಗಹಳ್ಳಿಯಲ್ಲಿ ಗ್ರಾಮಸ್ಥರಿಂದ ಚಂದಾವಸೂಲು ಮಾಡಿ ಶಾಲಾ ಕಟ್ಟಡ ನಿರ್ಮಾಣವಾಗಲು ಸಹಕರಿಸಿದರು. ಗೌಡರ ಆಪ್ತಮಿತ್ರ ಬಿ.ಲಿಂಗೇಗೌಡ ಇದೇ ಊರಿನವರು. ಹಿಂದೆ ಸಿದ್ದೇಗೌಡರು ಇಂಟರ್‌ಮೀಡಿಯೆಟ್ ಪರೀಕ್ಷೆಗೆ ಫೀಜು ಕಟ್ಟಲು ಹಣವಿಲ್ಲದೆ ಆತ್ಮ ಹತ್ಯೆಗೆ ಪ್ರಯತ್ನಿಸಿದ್ದಾಗ ಬಿ. ಲಿಂಗೇಗೌಡರು ಅದನ್ನು ತಪ್ಪಿಸಿದ್ದರು. ಜೊತೆಗೆ ಗೆಳೆಯನ ಪರೀಕ್ಷಾ ಶುಲ್ಕವನ್ನು ಕಟ್ಟಿ ಸಹಾಯ ಮಾಡಿದ್ದರು. ಗೌಡರು ಉಪ್ಪಿನ ಋಣವನ್ನು ಮುಪ್ಪಿನ ತನಕವೂ ಮರೆತವರಲ್ಲ.

ಟಿ.ನರಸೀಪುರ ತಾಲ್ಲೂಕಿನಲ್ಲಿ ಬಹುದೊಡ್ಡ ಪುರಾತನ ದೇವಸ್ಥಾನಗಳಿವೆ. ಗುಂಜಾನರಸಿಂಹಸ್ವಾಮಿ, ತ್ರಿಣೇಶ್ವರ, ಅಗಸ್ತ್ಯೇಶ್ವರ, ಸೋಸಲೆ ಹೊನ್ನಾದೇವಿ, ಬನ್ನೂರು ಶ್ರೀರಾಮದೇವರು, ಮೂಗೂರು ತಿಬ್ಬಾದೇವಿ, ತಲಕಾಡು ವೈದ್ಯನಾಥೇಶ್ವರ, ಲಕ್ಷ್ಮೀನಾರಾಯಣ, ಮುಡುಕುತೊರೆ ಮಲ್ಲಿಕಾರ್ಜುನ ಇತ್ಯಾದಿ ದೇವಸ್ಥಾನಗಳಿವೆ, ಇವುಗಳಿಗೆಲ್ಲಾ

ವಾರ್ಷಿಕೋತ್ಸವ ಜಾತ್ರೆಗಳುಂಟು. ಈ ಎಲ್ಲಾ ದೇವರ ಜಾತ್ರೆ ಉತ್ಸವಗಳು ಸುಗಮವಾಗಿ ನಡೆದುಕೊಂಡು ಹೋಗುವಂತೆ ಸಿದ್ದೇಗೌಡರು ಏರ್ಪಾಡು ಮಾಡಿ ಭಕ್ತಾದಿಗಳ ಪ್ರಶಂಸೆಗೆ ಪಾತ್ರರಾಗಿದ್ದರು.

ಸಿದ್ದೇಗೌಡರು 1954ರಲ್ಲಿ ಹಾಸನಜಿಲ್ಲೆಯ ಗ್ರಾಮಾಂತರ ಕೈಗಾರಿಕಾ ಮೇಲ್ವಿಚಾರಣಾಧಿಕಾರಿಯಾಗಿ ನೇಮಕಗೊಂಡರು.

ಹಾಸನವನ್ನು ಬಡವರ ಊಟಿ ಎಂದು ಕರೆಯುತ್ತಾರೆ. ಮಹಾರಾಜರೂ ಕೂಡ ಬೇಸಿಗೆಯಲ್ಲಿ ಬಿಡಾರ ಮಾಡಲು ಅಲ್ಲಿ ಒಂದು ದೊಡ್ಡ ಮಹಲನ್ನೇ ಕಟ್ಟಿಸಿದ್ದರು. ಗ್ರಾಮಾಂತರ ಕೈಗಾರಿಕಾ ಪ್ರಧಾನ ನಿರ್ದೇಶಕರಾದ ಬೀರಪ್ಪನವರನ್ನು ಬೆಂಗಳೂರಲ್ಲಿ ಭೇಟಿ ಮಾಡಿ, ಅವರ ಸಲಹೆ, ಆದೇಶಗಳನ್ನು ಹೊತ್ತು ಸಿದ್ದೇಗೌಡರು ಹಾಸನ ಸೇರಿದರು. ಜಿಲ್ಲಾ ಗ್ರಾಮ ಕೈಗಾರಿಕಾ ಯೋಜನೆಯು ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಅವರ ಯೋಜನೆ. ನೂತನ ಇಲಾಖೆ ಗ್ರಾಮ ವಾಸಿಗಳ ಜೀವನ ಮಟ್ಟವನ್ನು ಎತ್ತರಿಸಲು ಸಣ್ಣ ಸಣ್ಣ ಕೈಗಾರಿಕೆಗಳಿಗೆ ಸಾಲ ಕೊಡುವುದು, ಅಸ್ತಿತ್ವದಲ್ಲಿರುವ ಗೃಹಕೈಗಾರಿಕೆಗಳನ್ನು ಧನಸಹಾಯದಿಂದ ಅಭಿವೃದ್ಧಿಗೊಳಿಸುವುದು ಯೋಜನೆಯ ಮುಖ್ಯಗುರಿಯಾಗಿತ್ತು. ಮಹಾತ್ಮ ಗಾಂಧೀಜಿ ಅವರೂ ಗ್ರಾಮ ಕೈಗಾರಿಕೆಗಳಿಗೆ ಅದರಲ್ಲೂ ಚರಕಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿದ್ದುದು ತಿಳಿದಿರುವ ವಿಷಯ. ಗೌಡರಿಗೂ ಆ ಸೇವೆ ಮಾಡುವ ಉತ್ಸಾಹವಿತ್ತು. ಆದರೆ ಇದರಲ್ಲಿ ಅಮಲ್ದಾರಿಯಲ್ಲಿರುವ ಅಧಿಕಾರ, ಸ್ವಾರಸ್ಯ, ಅನುಭವ, ವಿಶಾಲವಾದ ಜನಸಂಪರ್ಕವಿರಲಿಲ್ಲ.

ಪ್ರತಿ ತಿಂಗಳಲ್ಲಿ ಬೆಂಗಳೂರಲ್ಲಿ ಎಲ್ಲಾ ಜಿಲ್ಲಾ ಮೇಲ್ವಿಚಾರಣಾಧಿಕಾರಿಗಳ ಕೂಟ ನಡೆಯುತ್ತಿತ್ತು. ಗ್ರಾಮ ಕೈಗಾರಿಕೆಗಳಿಗೆ ಸರ್ಕಾರವಿತ್ತ ಧನಸಹಾಯ, ಪ್ರೋತ್ಸಾಹದಿಂದ ಪ್ರತಿತಿಂಗಳಲ್ಲೂ ಎಷ್ಟೆಷ್ಟು ಆದಾಯ ಈ ಸಣ್ಣ ಕೈಗಾರಿಕೆಗಳಿಂದ ಹೆಚ್ಚಿತು ಎಂಬ ಮಾಸಿಕ ವರದಿ ಮುಖ್ಯಾಂಶ. ಸಿದ್ದೇಗೌಡರು ಸೇವೆಯಿಂದ ನಿವೃತ್ತರಾಗಲು ಇನ್ನು 57 ದಿನಗಳು ಬಾಕಿ ಇದ್ದಾಗ ಅವರನ್ನು ಸರ್ಕಾರ ಹಾಸನದಿಂದ ಕೋಲಾರಕ್ಕೆ ವರ್ಗ ಮಾಡಿತು.



ಗ್ರಾಮಾಂತರ ಕೈಗಾರಿಕಾ ಮೇಲ್ವಿಚಾರಣಾಧಿಕಾರಿಯಾಗಿ ಗೌಡರು 6-7-1958 ರಂದು ನಿವೃತ್ತರಾದರು.

ಕೋಲಾರ ಗ್ರಾಮಾಂತರ ಕೈಗಾರಿಕಾ ನೌಕರ ವರ್ಗದವರು ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಹಾತ್ಮ ಗಾಂಧೀಜಿ ಅವರ Last phase ಎಂಬ ಗ್ರಂಥವನ್ನು ಗೌಡರಿಗೆ ಕಾಣಿಕೆಯಾಗಿ ನೀಡಲಾಯಿತು. ಮಹಾತ್ಮಗಾಂಧೀಜಿ ಅವರ ತತ್ವಾದರ್ಶಗಳಿಂದ ಪ್ರೇರಿತರಾಗಿದ್ದ ಗೌಡರು ತಮ್ಮ ಸೇವಾವಧಿಯುದ್ದಕ್ಕೂ ಶುದ್ಧಹಸ್ತದಿಂದ ನಿಷ್ಠೆ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದರು. ಸಿದ್ದೇಗೌಡರು ಸೇವೆಯಿಂದ ನಿವೃತ್ತಿಯಾದ ನಂತರ ತಮ್ಮ ಮಂಡ್ಯದ ಮನೆಯಲ್ಲಿ ನೆಲೆಸಿದರು. ಅವರ ಮುಂದಿನ ಜೀವನ ವಿಶ್ರಾಂತ ಜೀವನವಾಗಲಿಲ್ಲ! ದಾಯಾದಿ ಮಾತ್ಸರ್ಯದ ಕುರುಕ್ಷೇತ್ರವಾಯಿತು.

## ದಾಯಾದಿ ಕಾಳಗ

ಸಿದ್ದೇಗೌಡರ ಜೀವನದಲ್ಲಿ ಮುಂದಿನದು ಒಂದು ಪರ್ವಕಾಲ. ವಯೋಗಣನೆಯಿಂದ, ಧ್ಯೇಯ ಸಾಕ್ಷಾತ್ಕಾರದ ದೃಷ್ಟಿಯಿಂದ ವಂಶದ ಕೀರ್ತಿಯನ್ನು ಕಾಪಾಡಿಕೊಂಡು ಅದನ್ನು ವೃದ್ಧಿ ಮಾಡುವ ದೃಷ್ಟಿಯಿಂದ ಈವರೆವಿಗೆ ಅಧಿಕಾರದ ಬಲದಿಂದ ಜನಸಾಮಾನ್ಯರಲ್ಲಿ ವರ್ತಿಸುವುದು ಒಂದು ಬಗೆಯಾಗಿತ್ತು. ಈಗ ಅವರು ಜನ ಸಾಮಾನ್ಯರಲ್ಲಿ ಸೇರಿಕೊಂಡು ಬಿಟ್ಟರು. ನಿರ್ಧಿಷ್ಟ ಮಾಸಿಕ ಆದಾಯವಿದ್ದಿದ್ದರಿಂದ ಆಯಾದಿನ ವಾರಗಳನ್ನು ಕಳೆಯಲು ಸರಳ ಜೀವಿಯಾದ ಅವರಿಗೆ ಜೀವನ ಅಷ್ಟು ಕಷ್ಟಕರವಾಗಿ ಕಾಣಲಿಲ್ಲ. ಆದರೂ ಆರ್ಥಿಕ ಸುಭದ್ರತೆ ಇರಲಿಲ್ಲ. ಮಕ್ಕಳು ವಿದ್ಯಾಭ್ಯಾಸದ ಅನೇಕ ಹಂತಗಳಲ್ಲಿದ್ದುದರಿಂದ ಅವರನ್ನು ವಿದ್ಯಾವಂತರನ್ನಾಗಿ ಮಾಡುವುದು ಅಷ್ಟೇನು ಸುಲಭವಾಗಿರಲಿಲ್ಲ. ನಿವೃತ್ತಿ ವೇತನ ಅವರು ನಿರೀಕ್ಷಿಸಿದಷ್ಟು ಬಾರದೆ ಅದಕ್ಕೆ ಮೂರು ವರ್ಷಗಳ ಕಾಲ ಹೆಣಗಬೇಕಾಯಿತು.

ಸಿದ್ದೇಗೌಡರು ತಮ್ಮ ಕರೀಗೌಡನನ್ನು ಕೆಲಸ ಬಿಡಿಸಿ ಆತನಿಗೆ ಮನೆಯ ಯಜಮಾನಿಕೆ ಕೊಟ್ಟಿದ್ದರು. ಆತ ತನ್ನ ದ್ರೋಹವನ್ನು ರಹಸ್ಯವಾಗೇ

ಇಟ್ಟಿದ್ದ. ಗೌಡರ ಜಮೀನಿನಲ್ಲಿ ಆತ ಆದಷ್ಟು ಬೆಳೆದು ಕೊಂಡು ಕಂದಾಯವನ್ನು ಕೂಡಾ ಕಟ್ಟಿರಲಿಲ್ಲ. ಜಮೀನುಗಳೆಲ್ಲಾ ಆಬಾದಿನಲ್ಲಿರಲಿಲ್ಲ. ಅವುಗಳನ್ನೆಲ್ಲಾ ವ್ಯವಸಾಯಕ್ಕೆ ಯೋಗ್ಯ ಮಾಡಲು ಕನಿಷ್ಠ ಪಕ್ಷ 2-3 ಸಾವಿರ ರೂಗಳನ್ನು ಖರ್ಚು ಮಾಡಬೇಕಿತ್ತು. ಮಾವನ ಕಡೆಯವರಿಂದ ವ್ಯವಸಾಯಕ್ಕೆ ಸಹಾಯ ಪಡೆಯುವುದೂ ಶೂನ್ಯವಾಗಿತ್ತು.

ಇನ್ನು ಉಳಿದವರು ನಿಂಗಯ್ಯ, ನಾತ, ತಮ್ಮಯ್ಯ ಅಸಹಾಯಕರಾಗಿದ್ದರು. ಕೃಷಿಕೂಲಿಕಾರರನ್ನೇ ನಂಬಿ ವ್ಯವಸಾಯ ಮಾಡಬೇಕಿತ್ತು. ಗೌಡರಿಗೆ ನಿತ್ಯ ಮಂಡ್ಯದಿಂದ ಊರಿಗೆ ಹೋಗಿ ಬರುವುದು ಕರ್ತವ್ಯವಾಯಿತು.

ಸರ್ಕಾರದಿಂದ ಸಿದ್ದೇಗೌಡರಿಗೆ 5-6 ಸಾವಿರ ರೂ.ಗಳು ಬರಬೇಕಿತ್ತು. ಅವುಗಳಿಗೂ ತಕರಾರು ಬಿತ್ತು. ಇಂಥಪರಿಸ್ಥಿತಿಯಲ್ಲಿ ಅವರು ತನ್ನನ್ನು ಕಾಪಾಡುವವನು ಶ್ರೀರಾಮಕೃಷ್ಣನೊಬ್ಬನೇ ಎಂದು ದೃಢವಿಶ್ವಾಸವನ್ನು ಬೆಳೆಸಿಕೊಂಡರು. ತಮ್ಮ ಕರೀಗೌಡ ನೇರವಾಗಿ ಕಣಕ್ಕಿಳಿದ. ಖಡಾಖಾಡಿ ಹೋರಾಟವನ್ನೇ ಮಾಡಬೇಕಾಯಿತು. ಪಂಚಾಯಿತಿ, ಕೋರ್ಟು, ಕಛೇರಿಗಳ ಮೆಟ್ಟಿಲು ಹತ್ತಬೇಕಾಯಿತು. ಗೌಡರು, ನಾತ, ತಮ್ಮಯ್ಯ ಒಂದಾಗಬೇಕಾದ ಸಂದರ್ಭ ಬಂತು. ಅವರು ಗೌಡರ ವ್ಯವಸಾಯಕ್ಕೆ ಸಹಾಯ ಮಾಡುವಂತಾಯಿತು.

ಸಿದ್ದೇಗೌಡರ ತಾತನಿಗೆ ಅಜ್ಜಿಕಡೆಯಿಂದ 4 ಎಕರೆ ಖುಷ್ಕಿ ಜಮೀನು ಬಂದಿತ್ತು. ಗೌಡರ ತಂದೆ, ಜವರಾಯಿ ಚಿಕ್ಕಪ್ಪ ಸುಮಾರು 10 ಎಕರೆ ಜಮೀನನ್ನು ಸಂಪಾದಿಸಿ ಬಿಟ್ಟುಹೋದರು. ಈ ಆಸ್ತಿ ಅಣ್ಣ ತಮ್ಮಂದಿರಿಗೆ ಪಾಲಾಗಬೇಕಿತ್ತು. ಗೌಡರ ಪಾಲಿಗೆ ಐದು ಎಕರೆಬಂತು. ಐವರು ಅಣ್ಣ ತಮ್ಮಂದಿರಿಗೆ ಮತ್ತಷ್ಟು ಜಮೀನು ಸಂಪಾದಿಸಬೇಕಾದ ಅವಶ್ಯಕತೆ ಇತ್ತು. ಕಚ್ಚಿಗೆರೆ ಮೊದಲು ಬ್ರಾಹ್ಮಣರೋರ್ವರಿಗೆ ಇನಾಂಗ್ರಾಮವಾಗಿತ್ತು. ಸುಮಾರು 400 ಎಕರೆ ಭೂಮಿಯ ಒಡೆತನ ಅವರಿಗೆ ಸೇರಿತ್ತು. ಸಿದ್ದೇಗೌಡರು ಅವರಿಂದಲೂ ರೈತರಿಂದಲೂ 12 ಎಕರೆ ಜಮೀನು ಖರೀದಿಸಿದರು.



ಸಿದ್ದೇಗೌಡರು ಮಂಡ್ಯಕ್ಕೆ ಬರುವ 2-3 ವರ್ಷ ಮುನ್ನವೇ ತಮ್ಮ ಕರೀಗೌಡ ಅಣ್ಣನನ್ನು ವಿನಾಕಾರಣ ದ್ವೇಷಿಸುತ್ತಿದ್ದ. ಗೌಡರು ಮಂಡ್ಯಕ್ಕೆ ಬಂದು ನೆಲೆಸಿದ ನಾಲ್ಕಾರು ತಿಂಗಳಲ್ಲೆ ದಾಯಾದಿ ಕಲಹದ ಸಿಡಿ ಮದ್ದು ಹಾರತೊಡಗಿತು. ಸಿದ್ದೇಗೌಡರು ಮಂಡ್ಯಕ್ಕೆ ಬಂದಿದ್ದು ತಮ್ಮ ಕರೀಗೌಡನಿಗೆ ನುಂಗಲಾರದ ತುತ್ತಾಗಿತ್ತು. ಅಣ್ಣ ಇಲ್ಲದಿದ್ದರೆ ತಮ್ಮಂದಿರಾದ ನಾತ, ನಿಂಗಯ್ಯ, ತಮ್ಮಯ್ಯ ಎಲ್ಲರೂ ತನ್ನ ಕೈ ಕೆಳಗಿದ್ದು ಗೇಯುತ್ತಿದ್ದರು. ಅದು ತಪ್ಪಿಹೋಯಿತು. ಗೌಡರನ್ನು ಮೊದಲನೆ ಅಪರಾಧಿಯಾಗಿ ಮಾಡಿ ನ್ಯಾಯಾಲಯದಲ್ಲಿ ಶಿಕ್ಷೆ ಕೊಡಿಸಬೇಕೆಂಬುದೇ ಆತನ ಉದ್ದಿಶ್ಯ. ಆತ ಪರಿವಾರ ಕಟ್ಟಿಕೊಂಡು ಸಿದ್ದೇಗೌಡರ ಮೇಲೆ ಜಮೀನು ಅಕ್ರಮ ಪ್ರವೇಶಕ್ಕೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕೇಸು ದಾಖಲಿಸಿದ. ಆದರೆ ಕೇಸು ಬಿದ್ದು ಹೋಗಿ ಕರೀಗೌಡನಿಗೆ ಮುಖಭಂಗವಾಯಿತು. ಹಾಗೆಯೇ ಅಪಾರ ದುಡ್ಡು ವ್ಯಯವಾಯಿತು. ಇದರಿಂದ ಆತನಿಗೆ ಸಮಾಧಾನವಾಗಲಿಲ್ಲ. ಬುದ್ಧಿ ಬರಲಿಲ್ಲ. ನಾತನ (ತಮ್ಮ) ಜಮೀನಿಗೆ ಸಂಬಂಧಪಟ್ಟಂತೆ ರೆವಿನ್ಯೂ ಕೋರ್ಟಿನಲ್ಲಿ ಕೇಸು ದಾಖಲ್ಮಾಡಿದ, ಎಂದಿನಂತೆ ಸಿದ್ದೇಗೌಡರೆ ಇದಕ್ಕೆಲ್ಲಾ ಓಡಾಡಬೇಕಿತ್ತು. ಬೇಕಾದಾಗ ನಾತನನ್ನೂ ಕರೆದುಕೊಂಡು ಹೋಗುತ್ತಿದ್ದರು. ಈ ಕೇಸು ಮೈಸೂರಿನಲ್ಲಿ 3-4 ವರ್ಷನಡೆದು ನಾತನ ಪರವಾಗಿ ತೀರ್ಪು ಬಂತು. ಕರೀಗೌಡ ಬೆಂಗಳೂರಿನ ರೆವಿನ್ಯೂ ಪಂಚಾಯಿತಿ ಕೋರ್ಟಿಗೆ ಮೇಲ್ಮನವಿ ಮಾಡಿಕೊಂಡ. ಈ ಕೇಸಿಗೆ ಸಂಬಂಧ ಪಟ್ಟಂತೆ ಸರ್ವೆ ಆಫೀಸಿನಲ್ಲಿ ಕಾಗದ ತಿದ್ದುಪಡಿ ಮಾಡಿ ಸಿಕ್ಕಿ ಹಾಕಿಕೊಂಡ. ಅಲ್ಲಿಯೂ ನಾತನ ಪರವಾಗಿಯೇ ತೀರ್ಪುಬಂತು.

ಹೀಗೆ ಸಿದ್ದೇಗೌಡರು ತಮ್ಮನ ಸ್ವಾರ್ಥಲಾಲಸೆಯ ದೆಶೆಯಿಂದ ನಾನಾ ಕಷ್ಟ ಪರಂಪರೆಗೆ ಗುರಿಯಾಗಬೇಕಾಯಿತು. ಆದರೂ ಸತ್ಯದ ಮುಂದೆ ಸುಳ್ಳು ತಟವಟದ ಆಟ ಹೆಚ್ಚುಕಾಲ ನಡೆಯಲಿಲ್ಲ. ತಮ್ಮ ಮತ್ತು ಆತನ ಪಕ್ಷಪಾತಿಗಳು ಅಪಜಯ ಅನುಭವಿಸಿದರು. ಈ ಅವಧಿಯಲ್ಲೇ ಗೌಡರಿಗೆ ಆಧ್ಯಾತ್ಮಿಕ ಚಿಂತನೆಯ ಮೊಳಕೆಯೊಡೆಯಿತು. ದಿವ್ಯಸ್ವಪ್ನದರ್ಶನಗಳಾದವು.

ಮನದಂಗಳದಲ್ಲಿ ಸುಪ್ತವಾಗಿದ್ದ ಸಾಹಿತ್ಯೋಪಾಸನೆಯ ಅಂಕುರಾರ್ಪಣೆಯಾಯಿತು. ಗೌಡರು ಅಧಿಕಾರದಲ್ಲಿದ್ದಾಗ ಸಾಹಿತಿಯಾಗುವ ಸಂಕಲ್ಪ ಮಾಡಿದ್ದನ್ನು ಅವರ ಮಾತಿನಲ್ಲೇ ಕೇಳೋಣ;

''ನಾನು ಅಧಿಕಾರದ ಕರ್ತವ್ಯ ಪರಿಪಾಲನಾ ಸಮಯದಲ್ಲಿ ಆಗಾಗ್ಯೆ ಬೇಲೂರು, ಹಳೇಬೀಡುಗಳಲ್ಲಿ ಬಿಡಾರ ಮಾಡುವುದಿತ್ತು. ಬೇಲೂರಿಗೆ ಒಂದಾವರ್ತಿ ಹೋದಾಗ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ ಚಿತ್ರವಿದ್ದ ಒಂದು ಹರಕಲು ಕಾಗದ ಬಿದ್ದಿತ್ತು. ಅದನ್ನು ಎತ್ತಿಕೊಂಡು ಓದಿದೆ. ಒಬ್ಬ ಬಂಗಾಳಿ ರೈತನ ಬಲಿದಾನ. ಅಲ್ಲಿಗೆ ಕ್ಷಾಮ ಬಂದು ಬಿತ್ತನೆಗೆ ಭತ್ತದ ಬೀಜವನ್ನೂ ಇಟ್ಟುಕೊಳ್ಳದೆ ತಿಂದು ಹಾಕಿದ್ದರು. ಮಳೆ ಬಂದಾಗ ಗದ್ದೆಗಳಿಗೆ ಭತ್ತದ ಬೀಜವೇ ಇಲ್ಲ. ಅದಕ್ಕೋಸ್ಕರ ಆರೈತ ತನ್ನ ಹೆಂಡತಿ ಮಕ್ಕಳಿಗೂ ಇದ್ದ ಒಂದು ಮೂಟೆ ಭತ್ತವನ್ನು ಕೊಡದೆ ತಾನೂ ಉಣ್ಣದೆ ಸಂಸಾರವನ್ನೆಲ್ಲಾ ಬಲಿಗೊಟ್ಟು ಆ ಭತ್ತ ಅವನಹಳ್ಳಿಗೆ ಬೀಜಕ್ಕಾಗಿ ಎಂದು ಕಾದಿರಿಸಿ ತಾನೂ ಸ್ವರ್ಗಸ್ಥನಾಗಿದ್ದ. ಇದು ನನ್ನ ಹೃದಯವನ್ನು ಕಲಕಿತು. ಅಷ್ಟೇ ಅಲ್ಲ ಸ್ವಪ್ನದಲ್ಲೂ ಬರತೊಡಗಿತು.

ಅದೇ ಸಮಯಕ್ಕೆ ಹೆಚ್.ಎಲ್. ನಾಗೇಗೌಡರು ಉನ್ನತ ಅಧಿಕಾರಿಗಳೂ, ದೊಡ್ಡ ಕನ್ನಡ ಸಾಹಿತಿಗಳೂ ಆಗಿದ್ದ ಅವರು ಚನ್ನರಾಯಪಟ್ಟಣದ ಪ್ರವಾಸಿ ಮಂದಿರದಲ್ಲಿ ಸರ್ಕಾರಿ ಕಾರ್ಯಾರ್ಥವಾಗಿ ಬಿಡಾರ ಹೂಡಿದ್ದರು. ನಾನೂ ಅಲ್ಲಿ ತಂಗಿದ್ದೆ. ಅವರು ನನಗೆ ಪರಿಚಯಸ್ಥರು. 'ಮೇಜದ ಮೇಲೆ ಕೈ ಬರವಣಿಗೆ ಪುಸ್ತಕವಿತ್ತು . ಎತ್ತಿಕೊಂಡು ನೋಡಿದೆ. ಅವರನ್ನು ಕೇಳಿದಾಗ 'ಕೆಲವು ಸಮಯಗಳಲ್ಲಿ ನಿರೀಕ್ಷಣೆ ಮಾಡುತ್ತಾ ಕಾಲ ಕಳೆಯ ಬೇಕಾಗುತ್ತದೆ. ಅಂಥ ಸಮಯಗಳನ್ನು ಸದುಪಯೋಗ ಪಡಿಸಿಕೊಳ್ಳುವುದಕ್ಕೋಸ್ಕರ ಹಿತವಾದದ್ದನ್ನು ಮತ್ತು ಉಪಯೋಗವಾದದ್ದನ್ನು ಏಕೆ ಮಾಡಬಾರದು?' ಎಂದು ಮರುಪ್ರಶ್ನೆ ಹಾಕಿದರು. ಅದು ನನ್ನ ತೀವ್ರಾಲೋಚನೆಗೆ ವಸ್ತುವಾಯಿತು. ಸಾಹಿತಿಯಾಗುವ ಅಭಿಲಾಷೆ ಯೌವನಾವಸ್ಥೆಯಲ್ಲಿದ್ದಾಗಲೇ ಸುಪ್ತಾವಸ್ಥೆಯಲ್ಲಿತ್ತು. ಅದು ತನ್ನ ದರ್ಶನ ಕೊಡಲು



ಪ್ರಾರಂಭವಾಯಿತು. ನನ್ನ ರಾಜಕೀಯಾಭಿಲಾಷೆಯನ್ನು ಸಂಪೂರ್ಣವಾಗಿ ಸಮಾಧಿಮಾಡಿಬಿಟ್ಟೆ. ಅಷ್ಟು ಹೊತ್ತಿಗೆ ಎರಡು ಚುನಾವಣೆಗಳು ನಡೆದು ಗೆದ್ದು ಸೋತವರ ಸ್ಥಿತಿಗತಿಗಳ ದರ್ಶನವೂ ಪ್ರಭಾವಯುತವಾಗಿ ಆಗಿತ್ತು. ಗುರುಗಳ ದಾರಿಯೂ ಅದೇ ಆಗಿತ್ತು. ಅವರೂ ರಾಜಕೀಯದಿಂದ ಹೊರಗಿದ್ದರು. ಪ್ರಾಯಶಃ 1956ನೇ ಫೆಬ್ರವರಿಯ ಶಿವರಾತ್ರಿಯ ಜಾಗರಣೆ ಮಾಡುತ್ತಾ ಸಾಹಿತಿಯಾಗುವ ಸಂಕಲ್ಪ ಮಾಡಿದೆ. ಆ ಮೇಲೆ ಹಳೇಬೀಡು ಬೇಲೂರಿಗೆ ಹೋದಾಗಲೆಲ್ಲಾ ಹೊಯ್ಸಳರ ಶಿಲ್ಪ ಕಲಾಭ್ಯಾಸ ಮಾಡುತ್ತಾ ಕಿಸೆಯಲ್ಲಿಟ್ಟುಕೊಳ್ಳುತ್ತಿದ್ದ ಟಿಪ್ಪಣಿ ಪುಸ್ತಕದಲ್ಲಿ ಟಿಪ್ಪಣಿ ಬರೆದುಕೊಳ್ಳಲು ಪ್ರಾರಂಭಿಸಿದೆ. ಆಲೋಚನಾ ಪರಂಪರೆಗಳನ್ನೂ ಬರೆದು ಕೊಳ್ಳಲು ಪ್ರಾರಂಭಿಸಿದೆ. ನಿವೃತ್ತನಾಗುವ ಹೊತ್ತಿಗೆ ಶಾಲಾ ಬಾಲಕರ ಶಿಸ್ತಿನ ಬಗೆಗೆ 'ಓದೋಹುಡುಗ' ಪುಸ್ತಕ ಬರೆದೆ. ನಿವೃತ್ತನಾದ ಮೇಲೆ ಬರೆದ 'ಕಲಾಕಲಿಗಳಕರೆ' ಯೂ ಆಸ್ಥಳಗಳ ಬಿಡಾರದ ಫಲವೇ ಆಗಿರುತ್ತದೆ. ನನ್ನ ಧ್ಯೇಯವನ್ನೂ ನನ್ನ ಬಲಾಬಲಗಳನ್ನೂ ಕಂಡುಕೊಳ್ಳಲು 56 ವರ್ಷಗಳು ಹಿಡಿದುವು. ಧ್ಯೇಯದ ಆವಿಷ್ಕಾರವೇ ಜೀವನದ ಹೋರಾಟವಾಗಿಯೇ ಪರಿಣಮಿಸಿ ಕೃತಾರ್ಥರಾಗದೆ ಸ್ಮಶಾನವನ್ನು ಆಕ್ರಮಿಸುವುದು ಕೋಟ್ಯಾನು ಕೋಟಿ ಜನಗಳ ಪಾಲಾಗಿದೆ ಎಂದು ನನಗನಿಸುತ್ತದೆ. ಬರಗಾಲದ ಬಂಗಾಳಿ ರೈತನು ಬಲಿಯಾದದ್ದು 'ಭ್ರಷ್ಟಾಚಾರಕ್ಕೆ ಬಲಿ' ಎಂಬ ನನ್ನ ಗ್ರಂಥದ ಕಥಾವಸ್ತುವಾಗಿ ಸುಮಾರು ಇಪ್ಪತ್ತು ವರ್ಷಗಳ ಮೇಲೆ ಬೆಳಕುಕಂಡಿತು.''

ಸಿದ್ದೇಗೌಡರಿಗೆ ಜೀವನದ ಬಗ್ಗೆ ಇರುವ ಪ್ರೀತಿ, ಕಕ್ಕುಲತೆ ಅನನ್ಯವಾದುದು. ಮನುಷ್ಯ ಸಂಸ್ಕೃತಿವಂತನಾಗಬೇಕು. ದೈವ ಚಿಂತನೆ ಮಾಡಬೇಕು. ಪ್ರಾಮಾಣಿಕವಾದ ತೃಪ್ತಿ ಜೀವನವನ್ನು ನಡೆಸಬೇಕು. ತಂದೆ ತಾಯಿ ಸಹೋದರ ಸಹೋದರಿಯರ ಮತ್ತು ಬಂಧು ಬಳಗದವರ ಪರಿಸರದಲ್ಲಿ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಈ ಜೀವ ಸಸಿಗೆ ರಸಗೊಬ್ಬರ ಸಿಗುತ್ತದೆ. ಈ ಸೀಮಿತ ಸಮಾಜವಲ್ಲದೆ ಹಿರಿದಾದ ಸಮಾಜವಿದೆ. ಅಲ್ಲಿ ನಮಗೆ ಯಾವ ರೀತಿಯ ದಾಕ್ಷಿಣ್ಯಕ್ಕೊಳಗಾದ ಬಾಂಧವ್ಯವಿಲ್ಲ. ಅಲ್ಲಿ ಮಾನವೀಯತೆಯೇ

ಜೀವಕ್ಕೆ ಸಿಗುವ ಆಹಾರ. ಮೊದಲು ಸಮಾಜದಲ್ಲಿ ಹದಗೊಂಡ ಜೀವಕ್ಕೆ ವಿಶಾಲ ಸಮಾಜಕ್ಷೇತ್ರಸಿಕ್ಕಿ ತನ್ನ ವ್ಯಕ್ತಿತ್ವವನ್ನು ಪ್ರಕಟಿಸಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ ನನಗೆ ಮೊಟ್ಟಮೊದಲು ಸಿಕ್ಕಿದ್ದು ಎರಡನೆಯದಾದ ವಿಶಾಲ ಕ್ಷೇತ್ರ. ಆ ಕ್ಷೇತ್ರದಲ್ಲಿ -ಬಾಲ್ಯಮತ್ತು ವಿದ್ಯಾರ್ಥಿ ದೆಸೆಗಳಲ್ಲಿ -ನಾನು ಧುಮುಕಿದೆ. ಆ ಪರಿಸರ ಮಾನವೀಯತೆಯ ಕೊಡುಗೆಯನ್ನೇ ಕರುಣಿಸಿತು. ಆ ಮೇಲೆ ಹೊಟ್ಟೆಪಾಡಿಗಾಗಿ ಸರ್ಕಾರಿ ನೌಕರಿಯನ್ನು ಸೇರಿದ್ದಾಯಿತು. ಅಲ್ಲಿ ನನ್ನ ಸಾರ್ವಜನಿಕರ ಸಂಬಂಧ ನಿವೃತ್ತನಾಗುವವರೆಗೂ ಹಿಗ್ಗಿ ಹೊಮ್ಮಿತು. ಅತಿಯಾಸೆಪಡದೆ ತೃಪ್ತಿ ಜೀವನವನ್ನು ನಡೆಸುವುದಾದರೆ ಈ ಜಗತ್ತೇ ಸಾಕು. ಸ್ವರ್ಗವನ್ನು ಅಪೇಕ್ಷಿಸಬೇಕಾದ ಅವಶ್ಯಕತೆಯಿಲ್ಲ. ಆ ವಿಶಾಲಕ್ಷೇತ್ರದಿಂದ ಈ ಪ್ರಥಮ ಕ್ಷೇತ್ರವಾಗ ಬೇಕಾಗಿದ್ದ ಸೀಮಿತ ಪರಿಸರಕ್ಕೆ ಹಿಮ್ಮೆಟ್ಟಬೇಕಾಗಿ ಬಂತು. ಭಗವಂತ ತನ್ನ ಲೀಲೆಯ ಅರ್ಥವನ್ನು ತಿಳಿಸಲು ಈ ಕ್ಷೇತ್ರಕ್ಕೆ ದಬ್ಬಿದನೆಂದರಿವಾಗುತ್ತಿದೆ.

ಬಂಧು ಬಳಗದವರಿರಲಿ ಈ ಒಡ ಹುಟ್ಟಿದವರ ನಡಾವಳಿ ಅವರಿಂದ ನನಗೊದಗಿದ ಕಷ್ಟ ಪರಂಪರೆಗಳು -ಅತಿ ಮುಖ್ಯವಾಗಿ ಮಾನಸಿಕ ಅಸ್ವಸ್ಥತೆ ಪೆಡಂಭೂತಾಕಾರದವುಗಳು. ನಾಲ್ಕು ದಿಕ್ಕುಗಳಿಂದಲೂ ಅವು ಒತ್ತರಿಸಿ, ಒತ್ತರಿಸಿ ಅಸಹ್ಯತೆಯನ್ನುಂಟು ಮಾಡಿದುವು. ಇಂಥ ಒಂದು ಅಂತ್ಯಕಾಲದ 20-22 ವರ್ಷದ ಜೀವನಾನುಭವದಿಂದ ಒಂದು ಮಹತ್ವವಾದ ಪಾಠವನ್ನು ಕಲಿತದ್ದಾಯಿತು. ಪುರಂದರ ದಾಸರು ಹೇಳುವಂತೆ 'ತಂದೆ ತಾಯಿಯೂ ನೀನೇ ಬಂಧುಬಳಗವೂ ನೀನೇ', 'ನಿನ್ನ ನಂಬಿ ಕೆಟ್ಟವರಿಲ್ಲ ಹರಿಯೇ' ಎಂಬುದರ ಪೂರ್ಣಾನುಭವವೆನಗಾಯಿತು. ನನ್ನ ಹೃದಯ ವಿಶಾಲವಾಯಿತು. ಸಹನೆ ವೃದ್ಧಿಗೊಂಡಿತು. ಐಹಿಕ ಸುಖಗಳ ಮೋಹ ಕಡಿಮೆಯಾಯಿತು. ನನ್ನ ಪ್ರಾಮಾಣಿಕತೆಗೆ ಧಕ್ಕೆ ಬಾರದಂತೆ ಎಚ್ಚರದಿಂದ ವ್ಯವಹಾರ ನಡೆಸಿದೆ. ತೃಪ್ತಿ ಜೀವನದಲ್ಲಿ ಮತ್ತಷ್ಟು ವಿಶ್ವಾಸಬೆಳೆಯಿತು. ಲೋಕದ, ಅದರೊಳಗೂ ಸಹೋದರ, ಬಂಧುಗಳ ನಡಾವಳಿಯೇ ಈ ಬಗೆಯದು ಎಂದು ಅರ್ಥವಾಯಿತು. ಶ್ರೀರಾಮಕೃಷ್ಣನನ್ನು ಪೂರ್ಣವಾಗಿ ನಂಬಿದೆ.



ಆರ್ಥಿಕವಾಗಿ ಎಲ್ಲವನ್ನೂ ಕರುಣಿಸಿದ ಮಾನಸಿಕವಾಗಿ ಒಂದು ಬಾಳಗುರಿಯನ್ನು - ಸಾಹಿತ್ಯ ಸೇವೆಯನ್ನು - ಅದರೊಳಗೂ ರಾಮಾಯಣದ ಪಾತ್ರಗಳ ರಚನೆ ಮಾಡುವುದನ್ನು -ತೋರಿಸಿದ ಅವನಲ್ಲಿ ಅಚಲ ಭಕ್ತಿಯನ್ನಿಡುವಂತೆ ಪ್ರೇರೇಪಿಸುತ್ತಿದ್ದಾನೆ ಎಂದು ಗೌಡರು ಒಂದು ಕಡೆಬರೆದಿದ್ದಾರೆ.

ಸಿದ್ದೇಗೌಡರಿಗೆ ದೇಶಾಟನೆ ಮಾಡುವುದರಲ್ಲಿ ತುಂಬಾ ಆಸಕ್ತಿ. ಅವರು ಅವಕಾಶ ಸಿಕ್ಕಾಗ ಬಿಜಾಪುರ ಹಾಗೂ ಹಂಪೆಗೆ ಹೋಗಿ ಬಂದಿದ್ದರು. ಈ ಎರಡೂ ಐತಿಹಾಸಿಕ ಸ್ಥಳಗಳನ್ನು ಏಕಕಾಲಕ್ಕೆ ನೋಡಿ ಬಂದ ಗೌಡರು 'ಹಾಳುಹಂಪೆಯನ್ನೂ ಬಿಜಾಪುರವನ್ನೂ ಏಕಕಾಲದಲ್ಲಿ ನೋಡಿದರೆ ಹಿಂದುಗಳ ಹೇಡಿತನ ಮುಸಲ್ಮಾನರ ಧೂರ್ತತನ ದ್ರೋಹ ವ್ಯಕ್ತಗೊಳ್ಳುತ್ತದೆ. ನಿಜವಾದ ಹಿಂದುವಿಗೆ ರಕ್ತ ಕುದಿಯುತ್ತದೆ ಎಂದು ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬಿಜಾಪುರಕ್ಕೆ ಹೋಗಿದ್ದಾಗ ಗೌಡರು ಪಂಡರಾಪುರಕ್ಕೂ ಹೋಗಿ ಪಾಂಡುರಂಗನ ದರ್ಶನ ಮಾಡಿ ಬಂದಿದ್ದರು.

ಸಿದ್ದೇಗೌಡರಿಗೆ ಮನಃಕ್ಲೇಶ ಉಂಟಾದಾಗ ಬಿಡುವು ಸಿಕ್ಕಾಗ ನಂಜನಗೂಡಿಗೆ ಹೋಗುತ್ತಿದ್ದರು. ಕಪಿಲಾ ಸ್ನಾನಮಾಡಿ ಹೊಳೆತಡಿಯಲ್ಲೆ ಮರೆಬಿದ್ದ ಮತ್ತು ಹಿರಿಮಗನ ಹೆಸರನ್ನು ಅರ್ಪಿಸಬೇಕಾದ ಬದನವಾಳು ಸಿದ್ದೇಶ್ವರನಿಗೆ ಕಾಯಿ ಒಡೆದು ಪೂಜೆ ಮಾಡಿ ಆ ಮೇಲೆ ಶ್ರೀಕಂಠೇಶ್ವರನ ದರ್ಶನ ಮಾಡುತ್ತಿದ್ದರು. ಒಮ್ಮೆ ಗೌಡರು ನಂಜುಂಡೇಶ್ವರನ ಪೀಠದಲ್ಲಿ ಸ್ವಾಮಿ ವಿವೇಕಾನಂದರ ಮೂರ್ತಿಯನ್ನು ಕಲ್ಪಿಸಿ ಸ್ವಲ್ಪ ಹೊತ್ತು ಧ್ಯಾನ ಮಾಡಿದರು. ಮರುದಿವಸವೂ ದೇಗುಲಕ್ಕೆ ಹೋಗಿ ಒಂದು ಕಂಬದ ಮರೆಯಲ್ಲಿ ಧ್ಯಾನಮಾಡಲು ಕುಳಿತರು. ಅರ್ಧ ಮುಕ್ಕಾಲು ಗಂಟೆ ಕಾಲ ಅವಿಚ್ಛಿನ್ನವಾಗಿ ಸ್ವಾಮಿವಿವೇಕಾನಂದರ ಭಾವಚಿತ್ರ ಹೊಳೆಯಿತು. ಹರ್ಷಪುಳಕಿತರಾದ ಗೌಡರ ಹೃನ್ಮನಗಳಲ್ಲಿ ಪ್ರಸನ್ನತೆ ಹೊಮ್ಮಿತು. ಸ್ವಲ್ಪ ಆಶ್ಚರ್ಯವೂ ಆಯಿತು. ತಾವೇನೂ ನುರಿತ ಯೋಗಿಯೂ ಅಲ್ಲ; ಧ್ಯಾನಿಯೂ ಅಲ್ಲ. ಹೀಗೇಕೆ ದೈವಾಂಶ ಸಂಭೂತನಾದ ನರೇಂದ್ರ ದರ್ಶನ ನೀಡಿದ? ಎಂದು. ಗೌಡರಿಗೆ ಕನ್ಯಾಕುಮಾರಿಗೆ ಹೋಗಿ ಬರಬೇಕೆಂಬ ಹಂಬಲ ಬಹಳ ದಿನಗಳಿಂದಲೂ ಕಾಡುತ್ತಿತ್ತು.

ಆ ವೇಳೆಗಾಗಲೇ ಸಿದ್ದೇಗೌಡರ ಮಕ್ಕಳಾದ ಶ್ರೀಕಂಠಸ್ವಾಮಿ, ಡಾ॥ ಜಯರಾಂ, ಸೊಸೆ ಡಾ॥ ಸುಶೀಲ ಹಾಗೂ ಮಗಳು ಗಾಯಿತ್ರಿ ಇವರೆಲ್ಲಾ ಕನ್ಯಾಕುಮಾರಿಗೆ ಹೋಗಿ ಬಂದಿದ್ದು, ಆಗಾಗ್ಗೆ ಆ ತಾಣವನ್ನು ಹೊಗಳುತ್ತಿದ್ದರು. ಅದನ್ನು ಕೇಳಿಗೌಡರು ಖಿನ್ನ ಮನಸ್ಕರಾಗುತ್ತಿದ್ದರು. ಇದ್ದಕ್ಕಿದ್ದಂತೆ 21-12-1983ರಲ್ಲಿ ನಂಜನಗೂಡಿನಲ್ಲಿ ಸ್ವಾಮಿವಿವೇಕಾನಂದರ ಭಾವಚಿತ್ರ ದರ್ಶನವಾದ ಸರಿಯಾದ ಒಂದು ವರ್ಷದಲ್ಲಿ ಗೌಡರಿಗೆ ಕನ್ಯಾಕುಮಾರಿಗೆ ಹೋಗುವ ಸುಯೋಗ ಒದಗಿ ಬಂತು.

ಸಿದ್ದೇಗೌಡರು ತಮ್ಮ ಕಾರಿನಲ್ಲಿ ಅವರ ಹಿರಿಯ ಮಗ ದೊರೆಸ್ವಾಮಿ, ಶ್ರೀಕಂಠಸ್ವಾಮಿ (ದಂಪತಿಸಮೇತ) ಜಯರಾಂರವರ ಮಕ್ಕಳಾದ ದಿನೇಶ, ಕೌಶಿಕ, ಮತ್ತು ಶ್ರೀಕಂಠಸ್ವಾಮಿ ಅವರ ಮಗ ರಾಜು ಇಷ್ಟು ಜನ ಕನ್ಯಾಕುಮಾರಿಯತ್ತ ಪ್ರಯಾಣ ಬೆಳೆಸಿದರು. ಜಗದೀಶ ಕಾರು ಚಾಲನೆ ಮಾಡಿದ. 23-12-1983 ರಂದು ಗೌಡರು ಮಧುರೆ ತಲುಪಿ ಮೀನಾಕ್ಷಿ ಅಮ್ಮನವರ ದರ್ಶನ ಮಾಡಿದರು. ಹನ್ನೊಂದು ಗಂಟೆಗೆ ಮಧುರೆಯನ್ನು ಬಿಟ್ಟ ಕಾರು ಸಂಜೆ ನಾಲ್ಕು ಗಂಟೆಗೆ ಕನ್ಯಾಕುಮಾರಿ ತಲುಪಿತು. ಮೂರು ಮುನ್ನೀರು ಮುತ್ತಿಕ್ಕಿ ಆಡುತ್ತಿದ್ದ ನಡುಗಡ್ಡೆಯಲ್ಲಿ ಗೋಚರಿಸಿದ ಗೋಪುರದ ದರ್ಶನವಾಗಿ ಗೌಡರು ಆನಂದ ತುಂದಿಲರಾದರು. ಅವರ ಬಹುದಿನದ ಆಸೆ ಈಡೇರಿತ್ತು.

ಸ್ವಾಮಿ ವಿವೇಕಾನಂದ ಬಂಡೆಗೂ ಭಾರತ ಭೂಶಿರಕ್ಕೂ ಮಧ್ಯೆ ಸುಮಾರು ನೂರು ಗಜದ ಮುನ್ನೀರು. ವಿದ್ಯುತ್ ಚಾಲಿತ ದೋಣಿ ಹತ್ತಿ ಬಂಡೆ ತಲುಪಿದರು. ಬಂಡೆಗೆ ಪ್ರಕೃತಿ ನಿಯಮಿತ ಎರಡು ಭಾಗಗಳಿವೆ. ಮೊದಲನೆ ಹಂತದಲ್ಲಿ ಒಂದಂಕಣದ ಗುಡಿ ಇದೆ. ಅದರಲ್ಲಿ ಕನ್ಯಾಕುಮಾರಿಯ ಪಾದಗಳಿವೆ. ಗುಡಿ ಉತ್ತರ ಮುಖವಾಗಿದ್ದು ಹಿಮಾಲಯದ ಗೌರಿಶಂಕರ ಶಿಖರದಲ್ಲಿರುವ ಶಿವನನ್ನು ಪ್ರಾರ್ಥಿಸುತ್ತಿರುವುದನ್ನು ಸೂಚಿಸುತ್ತವೆ. ಅದರ ಮೇಲಂತಸ್ತಿನಲ್ಲಿ ಸ್ವಾಮಿ ವಿವೇಕಾನಂದರ ದೇಗುಲ ವಿದೆ. ಅದನ್ನು ಆಧುನಿಕ ರೀತಿ, ಆದರೆ ಸನಾತನ ಸಂಸ್ಕೃತಿಯನ್ನು ಅಳವಡಿಸಿಕೊಂಡು ಸರ್ವಧರ್ಮ ಸಮನ್ವಯಾತ್ಮಕವಾದ ಹೊಳಪು ಇರುವಂತೆ ನಿರ್ಮಿಸಿದೆ.



ಸ್ವಾಮೀಜಿಯ ವಿಗ್ರಹ ಸಹಜವಾಗಿ ಮೂಡಿ ಬಂದಿದ್ದು. ಅದಕ್ಕೆ ಅರ್ಚಕರಿಲ್ಲ. ಭಕ್ತಾದಿಗಳು ನೈರ್ಮಲ್ಯಕ್ಕೆ ಗಮನ ಕೊಟ್ಟು ತಾವೇ ಪೂಜಿಸಿ ಪುಣ್ಯ ಪಡೆದುಕೊಳ್ಳಬಹುದು. ಅದರ ಹಿಂದುಗಡೆ ಧ್ಯಾನಮಂದಿರವಿದ್ದು, ಭಕ್ತಾದಿಗಳು ಹತ್ತಾರು ನಿಮಿಷ ಆ ಏಕಾಂತ ಸ್ಥಳದಲ್ಲಿ ಧ್ಯಾನಮಾಡಿ ಹೊರ ಬೀಳಬಹುದು. ಹಾಗೆ ಬಂದಾಗ ಆ ಮಹಾಕೃತಿಯ ನಿರ್ಮಾಣಕ್ಕೆ ಖರ್ಚಾದ ದ್ರವ್ಯದ ಶಿಲಾಶಾಸನವೊಂದಿದೆ. ಭಾರತ ವರ್ಷದ ಎಲ್ಲಾ ಪ್ರಾಂತ್ಯಗಳ ಸರ್ಕಾರಗಳೂ ಲಕ್ಷಗಟ್ಟಲೆ ಕಾಣಿಕೆಯನ್ನರ್ಪಿಸಿವೆ. ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳು ಖರ್ಚಾಗಿವೆ. ಮಹಾರಾಷ್ಟ್ರದ ಮಹಾತ್ಮ ಭಕ್ತವೀರ ತನ್ನ ಜೀವನವನ್ನೇ ಮುಡಿಪಾಗಿಟ್ಟು ಸ್ವಾಮಿಪಾದವನ್ನು ಸೇರಿದ. ಆತನ ಹೆಸರು ಶ್ರೀ ಏಕನಾಥರಾನಡೆ. ಸಿದ್ದೇಗೌಡರು ಭಾವ ಪರವಶರಾಗಿ ಧ್ಯಾನ ಮಂದಿರದಲ್ಲಿ ಸ್ವಲ್ಪ ಹೊತ್ತು ಧ್ಯಾನ ಮಾಡಿ ಹೊರಬಂದರು.

ಸಿದ್ದೇಗೌಡರು ಮಾರನೇ ದಿನ ಕೇರಳದ ತಿರುವನಂತ ಪುರಕ್ಕೆ ತೆರಳಿ ಅಲ್ಲಿ ಅನಂತ ಪದ್ಮನಾಭ ಸ್ವಾಮಿಯ ದರ್ಶನ ಪಡೆದರು. ನಂತರ ಅವರು ಕೇರಳದ ಕಾಲಟಿ ತಲುಪಿದರು. ಕಾಲಟಿ -ಅದ್ವೈತ ತತ್ವ ಸಿದ್ಧಾಂತದ ಪ್ರತಿಪಾದಕರಾದ ಆದಿಗುರು ಶಂಕರಾಚಾರ್ಯರ ಹುಟ್ಟೂರು. ಕಾಲಟಿಯ ನದಿಯಲ್ಲಿ ಸ್ನಾನಮಾಡಿ ಶಂಕರಮಠದಲ್ಲಿ ಪೂಜೆ ಸಲ್ಲಿಸಿದರು. ಮಾರನೇ ದಿನ ತೀರ್ಥಯಾತ್ರೆ ಮುಗಿಸಿ ಮಂಡ್ಯ ತಲುಪಿದರು.

ಮಂಡ್ಯದಿಂದ ಬೆಸಗರಹಳ್ಳಿಗೆ ಹೋಗುವ ಮಾರ್ಗದಲ್ಲಿ ಈಚಗೆರೆ ಗ್ರಾಮವಿದೆ. ಈ ಗ್ರಾಮದ ಹಿರಿಯಮ್ಮ ಸಿದ್ದೇಗೌಡರ ವಂಶೀಕರ ಕುಲದೇವತೆ. ಗೌಡರ ತಾತನ ತಂದೆಯವರಾದ ಮತ್ತು ಆನೆದರೋಗನಾಗಿ ಅರಮನೆಯ ಆನೆಗಳನ್ನು ಕಾಪಾಡಿಕೊಂಡು ಮಂಡ್ಯದ ಕೆರೆಯ ಮೇಲ್ಗಡೆ ಇರುವ ಬೀರಗಾನ ಹೊಸಹಳ್ಳಿಯಲ್ಲಿ ಸಿದ್ದೇಗೌಡ, ಪುಟ್ಟೇಗೌಡ ಎಂಬಿಬ್ಬರಿದ್ದರು. ಅವರುಗಳು ಈಚಗೆರೆ ಹಿರಿಯಮ್ಮನ ಗುಡಿಯನ್ನು ಸುಮಾರು ಇನ್ನೂರುವರ್ಷಗಳ ಹಿಂದೆ ಕಟ್ಟಿಸಿದರೆಂದು ಪ್ರತೀತಿ. ಅದು ಇಟ್ಟಿಗೆ ಕಟ್ಟಡವಾಗಿದ್ದು, ಶಿಥಿಲಾವಸ್ಥೆಯಲ್ಲಿತ್ತು. ಸಿದ್ದೇಗೌಡರ ನೇತೃತ್ವದಲ್ಲಿ ಆ

ದೇವಾಲಯದ ಜೀರ್ಣೋದ್ಧಾರ ಕಾರ್ಯ ನಡೆಯಿತು. 1985ರ ಕಾರ್ತಿಕ ಮಾಸದಲ್ಲಿ ಹಿರಿಯಮ್ಮ ತಾಯಿಯ ಪೂಜಾ ಕಾರ್ಯಗಳು ಯಥಾಪ್ರಕಾರ ಶಾಸ್ತ್ರೋಕ್ತವಾಗಿ ನಡೆಯುವಂತಾಯಿತು.

ಆಧ್ಯಾತ್ಮದ ರಸಗಂಗೆಯಲ್ಲಿ ಮಿಂದು ಪಾವನರಾದ ಸಿದ್ದೇಗೌಡರ ಚಿಂತನೆಗಳು ಸಾರ್ವಕಾಲಿಕ. ಸರ್ವರೂ ಅಳವಡಿಸಿಕೊಂಡು ತಾಪತ್ರಯಗಳಿಂದ ಪಾರಾಗಬಹುದಾದಂತಹುಗಳಾಗಿವೆ. ಕಷ್ಟಗಳಿಂದ ಭಯ. ಭಯದಿಂದ ಭಕ್ತಿ, ಭಕ್ತಿಯಿಂದ ಮುಕ್ತಿ. ಕಷ್ಟಗಳ ಮೂಲ ಆಧ್ಯಾತ್ಮಿಕ, ಆದಿಭೌತಿಕ, ಆದಿದೈವಿಕ, ನಮ್ಮ ವೇದಗಳಲ್ಲಿನ ಅನೇಕ ಶ್ಲೋಕಗಳೆಲ್ಲಾ ಈ ತ್ರಿಬಾಧೆಗಳಿಂದ ಮುಕ್ತಿಗೊಳಿಸಲು ಅವುಗಳ ಅಧಿದೇವತೆಗಳನ್ನೋ, ಮಹಾದೇವನನ್ನೋ ಪ್ರಾರ್ಥಿಸುವ ಶ್ಲೋಕಗಳೇ ಆಗಿವೆ. ಬಾಲ್ಯಾವಸ್ಥೆಯಲ್ಲಿ ನನಗೆ ದೈವಭಕ್ತಿಯೆಂದರೇನೋ ಗೊತ್ತಿರಲಿಲ್ಲ. ಆಗಿನದು ಮೂಢಭಕ್ತಿಯೂ ಅಲ್ಲ, ಜ್ಞಾನಾತ್ಮಕವಾದ ಭಕ್ತಿ ಮೊದಲೇ ಅಲ್ಲ. ಅದೊಂದು ರೂಢಿಯ ನಡಾವಳಿ ಅಥವಾ ಗೊಡ್ಡು ಭಕ್ತಿ ಎನ್ನಬಹುದು. ಅವರಿವರು ಕೈಮುಗಿದಂತೆ ನಾನೂ ಮುಗಿಯುತ್ತಿದ್ದೆ ಅಷ್ಟೆ.

ಮನುಷ್ಯನು ಸದಾ ತಾಪತ್ರಯಗಳಿಗೀಡಾಗಿರುತ್ತಾನೆ. ಆಧ್ಯಾತ್ಮಿಕ, ಆದಿದೈವಿಕ, ಆದಿಭೌತಿಕ ಇವೇ ಮೂರು ಬಗೆಯ ಕಷ್ಟಗಳು. ಆಧ್ಯಾತ್ಮಿಕದಲ್ಲಿ ಬರುವ ಕಷ್ಟಗಳು ಎರಡು ಬಗೆಯವು. ಮೊದಲನೆಯದು ಶರೀರಕ್ಕೆ ಸಂಬಂಧಪಟ್ಟ ರೋಗರುಜಿನಗಳು. ಎರಡನೆಯದು ಆತ್ಮ ಚಿಂತನೆ. ದೈವಭಕ್ತಿ ಮಾನಸಿಕ ಹೋರಾಟ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವುದರಲ್ಲಿ ಬರುವ ಅಡ್ಡಿ ಆತಂಕಗಳು. ಆದಿದೈವಿಕವೆಂದರೆ ರಾಕ್ಷಸರು, ಪೀಡೆ, ಪಿಶಾಚಿ, ಗ್ರಹಗಳಿಂದ ಒದಗುವ ಕೇಡುಗಳು. ಆದಿಭೌತಿಕವೆಂದರೆ ಭೂಮಿ, ನೀರು, ವಾಯು, ಅಗ್ನಿ, ಆಕಾಶ ಇವುಗಳಿಂದುಂಟಾಗುವ ತೊಂದರೆಗಳು, ಮತ್ತು ದುಷ್ಟ ಮೃಗ, ಮನುಷ್ಯರುಗಳಿಂದ ಉಂಟಾಗುವ ಪೀಡೆಗಳು. ಈ ತಾಪ ಯಾವ ಮನುಷ್ಯನಿಗೂ ತಪ್ಪಿದ್ದಲ್ಲ. ಇವುಗಳ ಅನುಭವದಿಂದುಟಾಗುವ ತಾಪ, ಬಿಸಿ, ಕಾವು ಬುದ್ಧಿಯನ್ನು ಪ್ರಚೋದಿಸುತ್ತದೆ. ಆಗ ಆಲೋಚನಾ



ಪರನಾಗಿ ಇವುಗಳ ಮೂಲ ಯಾವುದು, ಇವುಗಳ ನಿವಾರಣೋಪಾಯಗಳೇನೆಂದು ಚಿಂತನ ಮಂಥನ ಮಾಡುವುದು ಮಾನವನ ಹುಟ್ಟುಗುಣ. ಹಾಗೆ ಮಾಡಿದಾಗ ಎಲ್ಲಕ್ಕೂ ಒಂದು ಮೂಲಶಕ್ತಿಯಿದೆ. ಆ ವರಿಷ್ಠ ಶಕ್ತಿಯನ್ನು ಒಲಿಸಿಕೊಂಡರೆ ಈ ತೊಂದರೆಗಳು ನಿವಾರಣೆಯಾಗುತ್ತವೆ ಎಂಬ ಒಂದು ನಂಬಿಗೆ ಮೂಡುತ್ತದೆ. ಆಗ ಅವನು ಸಾಕಾರವೋ ನಿರಾಕಾರವೋ ಆದ ಇಷ್ಟ ದೇವತೆಗೆ ಶರಣಾಗಬಹುದು, ಅದರ ಕೃಪೆಗೆ ಪಾತ್ರನಾಗಬಹುದು ಅಥವಾ ದರ್ಶನ ಪಡೆದು ಆತ್ಮಸಾಕ್ಷಾತ್ಕಾರವಾಯಿತೆಂದು ತಿಳಿದು ಮಾನಸಿಕ ಶಾಂತಿಯನ್ನೋ ಹೃದಯಾನಂದವನ್ನೋ ಹೊಂದಬಹುದು. ಸುಖವೆಂಬುದರ ರೂಪು ಒಂದೇ. ಆದರೆ ಕಷ್ಟವೆಂಬುದರ ರೂಪು ವ್ಯಕ್ತಿ ವ್ಯಕ್ತಿಗೆ ಬೇರೆ ರೂಪಾಗಿ ಕಂಡು ಬರುತ್ತದೆ. ಮನುಷ್ಯನು ಕಷ್ಟಕ್ಕೆ ಸಿಕ್ಕಿಕೊಳ್ಳುವುದರ ಅರ್ಥ ಇದು.

## ಶ್ರೀರಾಮಕೃಷ್ಣರ ಪರಮಭಕ್ತ

1964-65ರ ವೇಳೆಗಾಗಲೇ ಸಿದ್ದೇಗೌಡರು ಶ್ರೀರಾಮಕೃಷ್ಣ ಆಶ್ರಮದ ಪ್ರಕಟಣೆಗಳನ್ನು ಸಾಕಷ್ಟು ಓದಿಕೊಂಡಿದ್ದರು. ಶ್ರೀರಾಮಕೃಷ್ಣ ಪರಮಹಂಸ, ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರ ಸಂದೇಶಾಮೃತ ಅವರ ಮನವನ್ನು ಸೂರೆಗೊಂಡಿತ್ತು. ಗೌಡರು ಶ್ರೀ ರಾಮಕೃಷ್ಣರಿಗೆ ಸರ್ವಸ್ವವನ್ನೂ ಸಮರ್ಪಿಸಿಕೊಂಡು ಚಿತ್ತ ಶುದ್ಧಿಯನ್ನು ಪಡೆದರು. ಸ್ವಾಮಿ ವಿವೇಕಾನಂದರ ಭಾಷಣಗಳಿಂದ ಹೆಕ್ಕಿ ತೆಗೆದ ''ಓಂ ನಮೋ ಭಗವತೇ ಶ್ರೀರಾಮಕೃಷ್ಣಾಯ'' ಎಂಬ ಮಂತ್ರವನ್ನು ಪಠಿಸುತ್ತಿದ್ದರು. ಅದೇ ಅವರಿಗೆ ಉಸಿರಿರುವವರೆಗೂ ರಾಮತಾರಕ ಮಂತ್ರವಾಯಿತು.

ಪ್ರತಿದಿನ ಪ್ರಾತಃಕಾಲ ಸಿದ್ದೇಗೌಡರು ಹಾಸಿಗೆಯಿಂದ ಮೇಲೆದ್ದು ''ಗುರುರ್ ಬ್ರಹ್ಮ........ನಮಃ'' ಎಂಬ ಶ್ಲೋಕವನ್ನು ಎರಡು ಅಂಗೈಗಳನ್ನು ತೆರೆದು ಕೂಡಿಸಿ ಮಧ್ಯದಲ್ಲಿ ಶ್ರೀರಾಮಕೃಷ್ಣರನ್ನೂ ಎಡಭಾಗದಲ್ಲಿ ಶ್ರೀಮಾತೆ ಶಾರದಾದೇವಿಯವರನ್ನೂ ಬಲಭಾಗದಲ್ಲಿ ಸ್ವಾಮಿ ವಿವೇಕಾನಂದರ ರೂಪವನ್ನು ಸ್ಮರಿಸಿ ಮೂರಾವರ್ತಿ ಉಚ್ಚಾರ ಮಾಡಿ, ಸರ್ವರೂ ಸುಖವಾಗಿರಲೆಂದೂ ಸರ್ವಾಂತರ್ಯಾಮಿಗೆ ಸರ್ವಂಸಮರ್ಪಯಾಮಿ ಎಂದು,

ಜಯಗುರು ಭಗವಾನ್ ಎಂದು ಸ್ಮರಣೆ ಮಾಡುತ್ತಿದ್ದರು. ಜೊತೆಗೆ ವಿನಾಯಕನನ್ನೂ, ಹನುಮಂತನನ್ನೂ ತಮ್ಮ ಆಧ್ಯಾತ್ಮಗುರು ಕಾಕಾ ಕಾಲೇಲ್ಕರ್ ಅವರನ್ನು ಮನಸ್ಸಿನಲ್ಲೇ ಸ್ಮರಿಸಿಕೊಂಡು ಅವರ ಪಾದಾರವಿಂದಗಳಿಗೆ ವಂದಿಸುತ್ತಿದ್ದರು.

ಸಿದ್ದೇಗೌಡರು ಪ್ರತಿನಿತ್ಯ ಭಗವದ್ಗೀತೆಯ ಹತ್ತಾರು ಶ್ಲೋಕಗಳನ್ನು ಹೇಳಿ ಆ ಮೇಲೆ ಭದ್ರಕಾಳಿಯ ಅಷ್ಟೋತ್ತರವನ್ನು ಎರಡಾವರ್ತಿ ಜಪಿಸಿ, ಹೇರಾಮಕೃಷ್ಣ ಗೋವಿಂದ ಗೋಪಾಲಾ, ಮುಕುಂದ ಮಾಧವ ಮಧುಸೂಧನ ಎಂದು ಹೇಳಿ ತಾವೇ ರಚಿಸಿದ್ದ ಭಕ್ತಿಗೀತೆಗಳನ್ನು ಮೆಲುದನಿಯಲ್ಲಿ ಹಾಡುತ್ತಿದ್ದರು. ಉದಾಹರಣೆಗೆ ''ಇನ್ನೆಷ್ಟು ಕಾಲ ಕಾಯಲೊ ನನ್ನ ಇಷ್ಟದದೇವ, ಶ್ರೇಷ್ಠಾವತಾರ ಶ್ರೀರಾಮಕೃಷ್ಣ ದೇವಾ'' ''ಎನಗೂ ಆಣೆ ರಾಮಕೃಷ್ಣ ನಿನಗೂ ಆಣೆ ರಾಮಕೃಷ್ಣ ನಮ್ಮಿಬ್ಬರಿಗೂ ಪರಬ್ರಹ್ಮನಾಣೆ'' ಇತ್ಯಾದಿ. ಆ ಮೇಲೆ ''ರಾಮಕೃಷ್ಣ ಜಾನಕಿ ಜಯ ಬೋಲೊ ಹನುಮಾನಕಿ'' ಎಂದು ಹತ್ತಾರು ಸರ್ತಿ ಹೇಳುತ್ತಿದ್ದರು. ಕೊನೆಯ ಘಟ್ಟದಲ್ಲಿ ಗಾಯತ್ರಿ ಮಂತ್ರವನ್ನು 108 ಸರ್ತಿ ಹೇಳಿ ಶರಣು ಶರಣು ಎನ್ನುತ್ತಿದ್ದರು.

ಸಿದ್ದೇಗೌಡರು ಸಾಯಂಕಾಲದ ವೇಳೆ ''ಓಂ ನಮೋ ಭಗವತೇ ಶ್ರೀರಾಮಕೃಷ್ಣಾಯ'' ಎಂಬುದರ ಅಷ್ಟೋತ್ತರ, ಸ್ವಾಮಿ ವಿವೇಕಾನಂದರನ್ನು ಸ್ಮೃತಿಯಲ್ಲಿಟ್ಟುಕೊಂಡು ''ಓಂ ನಮಃ ಶಿವಾಯ'' ಜಪಿಸುತ್ತಿದ್ದರು. ನಂತರ ನವಗ್ರಹಜಪ, ಭದ್ರಕಾಳಿಯ ಅಷ್ಟೋತ್ತರ, ರಾಮಲಕ್ಷ್ಮಣ ಜಾನಕಿ ಜಯ ಬೋಲೊಹನುಮಾನಕಿ ಮತ್ತು ರಘುಪತಿರಾಘವ ರಾಜರಾಂ ಅವಕಾಶವಿದ್ದಷ್ಟು ಜಪಿಸುತ್ತಿದ್ದರು. ಆರುಗಂಟೆಯಮೇಲೆ ತಮ್ಮ ಮನೆ ರಾಮಕೃಷ್ಣನಿಲಯದ ಮುಂದಿನ ಉದ್ಯಾನವನದಲ್ಲಿ ತಿರುಗಾಡುತ್ತಾ ಮತ್ತೆ ಮತ್ತೆ ಅಷ್ಟೋತ್ತರ ಜಪಿಸುತ್ತಿದ್ದರು. ಇದು ಮಾನಸ ಪೂಜೆ. ಇದಕ್ಕೆ ಕಾಲನಿಯಮವಿಲ್ಲ. ನಿಂತಾಗ, ಕುಂತಾಗ, ತಿರುಗಾಡುವಾಗ, ರೈಲು, ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಎಲ್ಲೆಂದರಲ್ಲಿ ನಡೆಯುತ್ತಿತ್ತು. ರಾತ್ರಿ ಗಾಯತ್ರಿ ಜಪ ಮಾಡಿ ''ತುಳಸಿದಾಸ ಪರಕೃಪಾಕರಿಯೆ ಭಕ್ತಿದಾನ ದೇವೊ ಆಜ್''



ಎಂದು ಶರಣೆಂದೂ ತ್ರಿಮೂರ್ತಿಗಳಿಗೆ ಶತಾಯಸ್ಸು ಕೊಡೆಂದು ''ಹಿಂದೂ ಧರ್ಮಂ ಗೆಲ್ಗೆ, ಹಿಂದೂ ದೇಶಂ ಏಳ್ಗೆ'' ಎಂದು ವಂದಿಸಿ ಗೀತಾ ಶ್ಲೋಕಗಳನ್ನು ಹೇಳಿ, ನಂತರ ಸ್ವರಚಿತ ಹಾಡುಗಳನ್ನಾಡಿ ಶರಣು ಶರಣೆಂದು ಸರ್ವಾಂತರ್ಯಾಮಿ ಸರ್ವಂಸಮರ್ಪಯಾಮಿ ಎಂದು ವಂದಿಸಿ ಊಟ ಮಾಡುತ್ತಿದ್ದರು.

ಸಿದ್ದೇಗೌಡರು ಮಲಗುವ ಮುನ್ನ ಓಂ ಮಂತ್ರವನ್ನು ಹೇಳಿ ಶ್ರೀರಾಮಕೃಷ್ಣರನ್ನು ಹನುಮನನ್ನೂ ಹೃದಯಕ್ಕೆ ಆಹ್ವಾನಿಸಿಕೊಂಡು ಮೂಲಾಧಾರದಿಂದ ಬೆನ್ನುಮೂಳೆಯ ನರದ ಮೂಲಕ ಶಿರಕ್ಕೆ ಜ್ಞಾನ ಜ್ಯೋತಿಯನ್ನು ಹರಿಸಿ ಮೆದುಳನ್ನು ಪದ್ಮಕ್ಕೆ ಪರಿವರ್ತಿಸಿ ಅದರ ಮೇಲೆ ಶ್ರೀರಾಮಕೃಷ್ಣರನ್ನು ಕುಳ್ಳಿರಿಸಿ ಅವರನ್ನು ಹೂವುಗಳಿಂದ ಶೃಂಗರಿಸಿ ಧೂಪವನ್ನು, ಗಂಧದ ಕಡ್ಡಿಯನ್ನು ಕರ್ಪೂರವನ್ನು ನಂದಾದೀಪವನ್ನು ಹಚ್ಚುತ್ತಿದ್ದರು. ಮೂಲಮಂತ್ರವನ್ನು ಹೇಳಿಕೊಂಡು ''ಹರಿಹರಿ ತೊಮಾರ ಹರಿಹರ ತೊಮಾರ, ಶಿವಶಿವತೊಮಾರ'' ಎಂದು ಹೇಳುತ್ತ ಆರತಿ ಎತ್ತುತ್ತಿದ್ದರು! ಅದಾದ ಮೇಲೆ ನಿರಾಕಾರ ಜ್ಯೋತಿಯನ್ನು ಸಂಕಲ್ಪಿಸಿ ತಮ್ಮ ಜ್ಯೋತಿಯೂ ಅದರಲ್ಲಿ ಲೀನವಾಗುವಂತೆ ಕಲ್ಪಿಸಿ ಮತ್ತೆ ಸಾಕಾರವಾದ ಶ್ರೀರಾಮಕೃಷ್ಣರ ಪದ್ಮದ ಮೇಲೆ ಕುಳ್ಳಿರಿಸಿ ಸರ್ವೇಜನಾಃ ಸುಖಿನೋಭವಂತು ಸರ್ವಾಂತರ್ಯಾಮಿ ಸರ್ವಂಸಮರ್ಪಯಾಮಿ ಎಂದು ವಂದಿಸಿ ಶಾಂತಿಃ ಶಾಂತಿಃ ಶಾಂತಿಃ ಹೇಳಿ ದಿಂಬಿಗೆ ತಲೆಕೊಟ್ಟು ಶ್ರೀರಾಮಕೃಷ್ಣ ನಿನಗೆ ಅರ್ಪಿತವಾಗಲಿ -ನನ್ನ ನಿದ್ರೆ ಎಂದು ಮಲಗುತ್ತಿದ್ದರು. ಗೌಡರು 9 ಗಂಟೆಗೆ ಮಲಗುತ್ತಿದ್ದರೂ ನಿದ್ರೆ ಬರುತ್ತಿದ್ದುದು ಮಾತ್ರ 12 ಗಂಟೆಯ ಮೇಲೆಯೇ. ಆ ಅವಧಿಯಲ್ಲಿ ರಾಮಾಯಣದ ಚಿಂತನೆ, ಧರ್ಮಖಿಲವಾಗುತ್ತಿರುವುದರ ವ್ಯಾಕುಲತೆ, ದೇಶದ ಅವನತಿಯ ವಿಷಯಗಳೇ ಸುಳಿದಾಡುತ್ತಿದ್ದುವು.

ಗೌಡರ ಈ ಮನೋ ವ್ಯಾಪಾರವೆಲ್ಲಾ ವಿಚಿತ್ರವೆನಿಸಬಹುದು. ಮೂಢಾರಾಧನೆ, ಆಚಾರವೆನ್ನಬಹುದು, ಹುಚ್ಚುಮನಸ್ಸಿನ ಪರದಾಟವೆನ್ನಬಹುದು. ನೆನೆದ ವಿಷಯ, ವ್ಯಕ್ತಿಗಳು ಕನಸಿನಲ್ಲಿ ಬರುವುದುಂಟು. ಆದರೆ

ಅದಕ್ಕೆ ದೈವಾಂಶವನ್ನು ಆರೋಪಿಸುವುದು ಒಂದು ಬಗೆಯ ಭ್ರಮೆ ಎನ್ನಬಹುದು. ಆದರೆ ಒಂದು ವರಿಷ್ಠ ವಸ್ತುವಿನ ಇರುವಿಕೆಯಂತು ಸತ್ಯ. ಅದು ಸ್ವಯಂಭು. ಪರಿಪೂರ್ಣ, ಸಾಕಾರ ನಿರಾಕಾರ ಸಮನ್ವಯವಾಗಿ ಸರ್ವಸ್ವವನ್ನು ನಿಯಂತ್ರಿಸುತ್ತದೆ ಎಂಬುದು ಅನುಭವಸಿದ್ಧವಾದುದು. ವೇದ ಮಂತ್ರ ಹೀಗಿದೆ. ''ಏಕೋ ಸದ್ವಿ ಪ್ರಾಬಹುದಾ ವದಂತಿ '' ಸತ್ಯ ಒಂದೆ. ತಿಳಿದವರು ಬಹು ವಿಧವಾಗಿ ಹೇಳುತ್ತಾರೆ.

## ದಿವ್ಯಸ್ವಪ್ನ ದರ್ಶನಗಳು

ಭಗವತ್ ಸಾಕ್ಷಾತ್ಕಾರವು ನಾನಾ ರೂಪದಲ್ಲಿ ಆಗುತ್ತದೆ ಎಂದು ಅನುಭಾವಿಗಳು ಹೇಳುತ್ತಾರೆ. ತೀರ ಜ್ಞಾನ ಮಾರ್ಗವನ್ನು ಹಿಡಿದವರಿಗೆ ಒಂದು ಬಗೆಯಲ್ಲಿ ಭಕ್ತಿ ಮಾರ್ಗದಲ್ಲೊಂದು ಬಗೆ, ರಾಜಯೋಗ, ಕರ್ಮಯೋಗ ಮಾರ್ಗಗಳಲ್ಲೊಂದು ರೀತಿಯಾಗಿ ಆತ್ಮ ಸಾಕ್ಷಾತ್ಕಾರ ವಾಗುತ್ತದೆಯಂತೆ. ಸ್ವಪ್ನದಲ್ಲಿ ಇಷ್ಟದೇವತೆಯು ದರ್ಶನ ಕೊಡುವುದುಂಟು. ಅವನ ಕೃಪಾದೃಷ್ಟಿ ನಮ್ಮ ಮೇಲೆ ಬಿದ್ದಿದೆ ಎಂದು ತಿಳಿಯ ಬೇಕಾದರೆ ಅವರ ಸಾಕಾರ ರೂಪನ್ನು ಸ್ಮರಿಸಿಕೊಂಡಾಗ ಆಳವಾದ ಆಕಳಿಕೆ ಬರುವುದು ಸಂಕೇತವಂತೆ. ರೂಢಿಯಲ್ಲಿ ಯಾರಾದರೂ ಹೆಚ್ಚಾಗಿ ಆಕಳಿಸುತ್ತಿದ್ದರೆ. ಅಂದರೆ ನಿದ್ರೆ ಬರುವ ಮುನ್ನ ಮತ್ತು ನಿದ್ರೆಯಿಂದ ಎಚ್ಚೆತ್ತಾಗಲೆಲ್ಲ ಯಾರೋ ನಮ್ಮನ್ನು ನೆನೆಸಿಕೊಳ್ಳುತ್ತಿದ್ದಾರೆಂದರ್ಥ ಮಾಡುತ್ತಾರೆ. ಸಿದ್ದೇಗೌಡರು ಇದನ್ನು ಒಬ್ಬ ಸ್ವಾಮಿಗಳಿಂದ ತಿಳಿದರು. ಬೇಲೂರಿನಲ್ಲೆ ಅಲ್ಲಿಗೆ ಭೇಟಿ ಕೊಟ್ಟ ಜ್ಞಾಪಕಾರ್ಥವಾಗಿ ಶ್ರೀರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಯನ್ನು ಆಶ್ರಮದಲ್ಲೆ ಕೊಂಡು ಕೊಂಡು ಬಂದು ಓದಿದ ಮೇಲೆಗೌಡರು ಅವನನ್ನು ತಮ್ಮ ಇಷ್ಟೆದೇವತೆಯಾಗಿ ಸ್ವೀಕಾರ ಮಾಡಿದರು. ಅಲ್ಲಿಂದ ಬಂದ ಕೆಲವು ತಿಂಗಳ ಮೇಲೆ ಅವರಿಗೆ ಕನಸಿನಲ್ಲಿ ಶ್ರೀ ಹನುಮಂತನ ದರ್ಶನವಾಯಿತಂತೆ. ಹನುಮಂತ ವೀರ ಕಾಚವನ್ನು ಧರಿಸಿ ಗದೆಯನ್ನು ಹೊತ್ತು ಹೊಂಬಣ್ಣದ ರೂಪಿನಲ್ಲಿ ಕಿರೀಟಧಾರಿಯಾಗಿ ಗೌಡರ ಹಾಸಿಗೆಯ ಈಶಾನ್ಯದಿಕ್ಕಿನಲ್ಲಿ ಕಾಣಿಸಿಕೊಂಡನಂತೆ. ಕಣ್ಣು ತೆರೆದರೆ ಇಲ್ಲ. ಕಣ್ಣು



ಮುಚ್ಚಿದರೆ ಉಂಟು! ಇದು ಶ್ರೀ ರಾಮಕೃಷ್ಣ ತನ್ನ ಭಕ್ತನನ್ನು ರಾಮಧೂತ ನನ್ನು ಕಳಿಸಿ ಭಕ್ತಿಪಥವ ಹಿಡಿಯೆಂದು ಸೂಚಿಸಿದುದರ ಸಂಕೇತಾರ್ಥ ಎಂದು ಗೌಡರು ನಂಬಿದರು.

ಸ್ವಪ್ನಗಳು ಸಾಮಾನ್ಯವಾಗಿ ಬಹಳಕಾಲ ಮನಸ್ಸಿನ ಹಲಗೆಯ ಮೇಲೆ ನಿಲ್ಲುವುದಿಲ್ಲ. ಒಂದೆರಡು ದಿನಗಳಿದ್ದರೆ ಹೆಚ್ಚು. ಅವು ನೆನಪಿಗೇ ಬರುವುದಿಲ್ಲ. ಆಧ್ಯಾತ್ಮ ವಿದ್ಯೆಯಲ್ಲಿ ಪರಿಣಿತರಾದವರು ದೈವಿಕಸ್ವಪ್ನಗಳು ಬಹಳ ಕಾಲದವರೆಗೂ ಸ್ಫುಟವಾಗಿ ಸ್ಮೃತಿಗೆ ಬರುತ್ತಲೇ ಇರುತ್ತವೆಯೆಂದು ಹೇಳುತ್ತಾರೆ. ಅವುಗಳನ್ನು ಮರೆಯಲು ಸಾಧ್ಯವೇ ಇಲ್ಲವೆಂದು ಗೌಡರಿಗೆ ಮನದಟ್ಟಾಯಿತು.

ಸನಾತನ ಧರ್ಮದಲ್ಲಿ ನಂಬಿಕೆಯುಳ್ಳವರೂ ಆಧ್ಯಾತ್ಮ ಜೀವಿಗಳೂ ಚಿಂತನಶೀಲರೂ ಧ್ಯಾನ ಮನಸ್ಕರೂ ಆದ ಸಿದ್ದೇಗೌಡರ ಕನಸಿನಲ್ಲಿ ದೇವಾನುದೇವತೆಗಳು, ಪುರಾಣ ಪುರುಷರು, ಋಷಿ ಮುನಿಗಳೂ ಸಾಧುಸಂತರೂ ದಾಸವರೇಣ್ಯರೂ ಆದರ್ಶ ಪುರುಷರೂ ಕಾಣಿಸಿಕೊಂಡು ಅವರ ಮನೋಲ್ಲಾಸ ಹೆಚ್ಚುವಂತೆ ಜ್ಞಾನಜ್ಯೋತಿ ಬೆಳಗುವಂತೆ ಮಾಡಿದ್ದಾರೆಂದು ಅವರು ಕಂಡ ಕನಸುಗಳಿಂದಲೇ ವೇದ್ಯವಾಗುತ್ತದೆ.

ಸಿದ್ದೇಗೌಡರಿಗೆ ಕನಸಿನಲ್ಲಿ ಸೀತಾರಾಮರ ದರ್ಶನ, ಊರ್ಮಿಳಾ ದರ್ಶನ ಶ್ರೀರಾಮಕೃಷ್ಣ ಪರಮಹಂಸ, ಶ್ರೀ ಮಾತೆ ಶಾರದಾ ದೇವಿ, ಸ್ವಾಮಿವಿವೇಕಾನಂದ, ತಿರುಪತಿ ವೆಂಕಟರಮಣಸ್ವಾಮಿ ಮಹಾಕಾಳಿ, ಭವತಾರಿಣಿ, ಭದ್ರಕಾಳಿ, ಆದಿಗುರು ಶ್ರೀ ಶಂಕರಾಚಾರ್ಯ, ಬದನವಾಳು ಸಿದ್ದೇಶ್ವರ, ನಂಜುಂಡೇಶ್ವರ, ಕನಕ- ಪುರಂದರ ದಾಸರು ದರ್ಶನ ಕೊಟ್ಟಿದ್ದಾರೆ. ಕೊನೆಗೆ ಗೌಡರ ಸ್ವಗ್ರಾಮ ಕಚ್ಚಿಗೆರೆ ಮಾರಮ್ಮನೂ ಅವರ ಕನಸಿನಲ್ಲಿ ದರ್ಶನವಿತ್ತು ಹರಿಸಿದ್ದಾಳಂತೆ. ಕುತೂಹಲದ ಸಂಗತಿಯೆಂದರೆ ಅವರ ವಿದ್ಯಾ ಗುರುಗಳಾದ ಆಚಾರ್ಯ ಬಿ.ಎಂ.ಶ್ರೀ, ತೀ.ನಂ.ಶ್ರೀ ಕಂಠಯ್ಯನವರು ಮತ್ತು ಸಮಕಾಲೀನರಾಗಿದ್ದ ಕುವೆಂಪು ಅವರು ಆಗಾಗ್ಗೆ ಸಾಹಿತ್ಯದಲ್ಲಿ ತೊಡಕಿನ ಸಮಸ್ಯೆಗಳು ಉದ್ಭವಿಸಿದಾಗ ದರ್ಶನ ಕೊಟ್ಟಿದ್ದರಂತೆ. ರಾಮಾಯಣದ ಪಾತ್ರಗಳ ನಿರೂಪಣೆಯನ್ನು ಪ್ರಾರಂಭಿಸಿದ

ಮೇಲೆ ಗೌಡರ ಸಾಹಿತ್ಯದ ಗುರುಗಳು ಇರುವವರು, ಇಲ್ಲದವರು ಕನಸಿನಲ್ಲಿ ದರ್ಶನ ಕೊಡಲು ಪ್ರಾರಂಭಿಸಿದರು. ಅವರಿಗೆ ಮರಳಿನ ಮೇಲೆ ಅಕ್ಷರಾಭ್ಯಾಸ ಮಾಡಿಸಿದ ಮೂಲಗುರುಗಳಾದ ಮಿಕ್ಕೆರೆ ಪುಟ್ಟಯ್ಯನವರು ಒಂದೆರಡಾವರ್ತಿ ಕನಸಿನಲ್ಲಿ ಕಾಣಿಸಿಕೊಂಡರಂತೆ. ಹಾಗೆಯೇ ಶೃಂಗೇರಿ ಶ್ರೀಗಳು ಆಧ್ಯಾತ್ಮ ಗುರು ಕಾಕಾ ಸಾಹೇಬ್ ಕಾಲೇಲ್ಕರ್ ಅವರು ಸ್ವಪ್ನ ದರ್ಶನ ನೀಡಿದರಂತೆ.

## ಸಾಹಿತ್ಯೋಪಾಸನೆ; ರಾಮಾಯಣ ಪಾರಾಯಣ

ಜೀವನ ಸಂಗ್ರಾಮದಲ್ಲಿ ಬದುಕನ್ನೇ ಬದಲಿಸುವ ನಿರ್ಣಾಯಕ ಸಂದರ್ಭಗಳು ಸಂಭವಿಸುವುದುಂಟು. ಆಗ ಮಾಡಿದ ನಿರ್ಧಾರದಿಂದ ನವಜೀವನ ಜನ್ಮ ತಾಳುತ್ತದೆ. ಸಿದ್ದೇಗೌಡರಿಗೆ ಜ್ಞಾನಾರ್ಜನೆಯ ಹುಚ್ಚು ಕಣ್ಣು ಮುಚ್ಚಾಲೆಯಾಡಿಕೊಂಡೇ ಬಂದು ಸರ್ಕಾರದ ಅಧಿಕಾರದಿಂದ ನಿವೃತ್ತರಾಗುವುದಕ್ಕೆ ಎರಡು ವರ್ಷ ಮುನ್ನ ಅಧಿಕಾರ ಮಾಡಲು ಪ್ರಾರಂಭ ಮಾಡಿತು. ವಿಶ್ರಾಂತಿ ಕಾಲದಲ್ಲಿ ಜೀವನೋಪಾಯಕ್ಕೆ ವ್ಯವಸಾಯವನ್ನ ವಲಂಬಿಸಿ ನಿರ್ಮಿಸಿಕೊಂಡಿದ್ದ ಪುಟ್ಟ ಪುಸ್ತಕ ಭಂಡಾರದಲ್ಲಿ ಕಾಲಕ್ಷೇಪ ಮಾಡಬೇಕೆಂದು ಅವರು ನಿಶ್ಚಯಿಸಿದ್ದರು. ಅದರಂತೆ 1958 ನೇ ಜುಲೈನಲ್ಲಿ ವಿಶ್ರಾಂತಿ ಹೊಂದಿ ಮಂಡ್ಯದ ತಮ್ಮ ಸ್ವಗೃಹದಲ್ಲಿ ನೆಲೆಸಿದರು. ನಿರ್ಧರಿಸಿದ್ದಂತೆ ವ್ಯವಸಾಯಕ್ಕೆ ಪಾದಾರ್ಪಣೆ ಮಾಡಿದರು. ದಾಯಾದಿ ಮಾತ್ಸರ್ಯದ ಕುರುಕ್ಷೇತ್ರ ಸಿದ್ಧವಾಗಿತ್ತು. 12-14 ವರ್ಷಗಳ ಕಾಲ ಅಹರ್ನಿಶಿ ಹೋರಾಟ, ಜ್ಞಾನಾರ್ಜನೆಯ ದಂಡಪ್ರಯೋಗ : ಚಿಂತನ ಮಂಥನದ ಆನಂದ, ಸ್ವಾಭಾವಿಕವಾದ ವೃದ್ಧಾಪ್ಯವು ವೃದ್ಧಿಗೊಳ್ಳುತ್ತಿದ್ದಂತೆಯೇ ಶಸ್ತ್ರ ಚಿಕಿತ್ಸೆಯಿಂದ ಬಲಗಣ್ಣು ಪೂರ್ಣವಾಗಿ ಹೋಯಿತು. ಎಡಗಣ್ಣನ್ನು ತದನಂತರ ರಿಪೇರಿ ಮಾಡಿಸಿದರು. 1964 ರಲ್ಲಿ ಸಂಸ್ಕೃತ ವಿದ್ವಾನ್ ಶ್ರೀ ರಂಗನಾಥ ಶರ್ಮರವರು ಕನ್ನಡಕ್ಕೆ ಭಾಷಾಂತರ ಮಾಡಿರುವ 'ಸುಂದರ ಕಾಂಡ' ಲಭ್ಯವಾಯಿತು.

ಕನ್ನಡದ ಸಾಹಿತ್ಯ ಲೋಕಕ್ಕೆ, ಅದರೊಳಗೂ ಪಾರಮಾರ್ಥಿಕ ವಿದ್ಯೆಯನ್ನು ಅಭ್ಯಸಿಸುವುದಕ್ಕೆ ಸಂಸ್ಕೃತ ವಿದ್ವಾನ್ ಶ್ರೀ ಎನ್. ರಂಗನಾಥ



ಶರ್ಮರವರು ಅಪಾರವಾದ ನಿಷ್ಕಾಮ ಕರ್ಮಸೇವೆಯನ್ನು ಸಲ್ಲಿಸಿದ್ದಾರೆ. ಸಂಸ್ಕೃತದ ವಾಲ್ಮೀಕಿ ರಾಮಾಯಣದ ಎಲ್ಲಾ ಕಾಂಡಗಳನ್ನೂ ಕನ್ನಡದಲ್ಲಿ ಸಂಸ್ಕೃತ ಶ್ಲೋಕಗಳ ಸಮೇತ ಭಾಷಾಂತರ ಮಾಡಿ ಕೃತಕೃತ್ಯರಾಗಿದ್ದಾರೆ. ಕನ್ನಡ ಭಾಷಾಂತರದ ಮಹಿಮೆ ಮತ್ತಷ್ಟು ಹಿಗ್ಗಲು ಪೂಜ್ಯ ಡಿ.ವಿ.ಜಿ. ಅವರು ತಮ್ಮ ಮುನ್ನುಡಿಯನ್ನು ಎಲ್ಲಾ ಕಾಂಡಗಳಿಗೆ ಕರುಣಿಸಿದ್ದಾರೆ. ಈ ಕೃತಿಗಳನ್ನು ಬೆಂಗಳೂರು ನರಸಿಂಹರಾಜ ಕಾಲೋನಿಯ ಶ್ರೀರಾಮ ಮಂದಿರವು 'ರಾಮಾಯಣ ಪ್ರಕಾಶನ ಸಮಿತಿ' ಯನ್ನು ಸ್ಥಾಪಿಸಿಕೊಂಡು ಪ್ರಕಟಿಸಿ ಆಸ್ತಿಕ ಲೋಕಕ್ಕೆ ಮಹದುಪಕಾರ ಮಾಡಿದ್ದಾರೆ. ಈ ಗ್ರಂಥಗಳ ಬೇಡಿಕೆ ದಿನೇ ದಿನೇ ಏರುತ್ತಿದೆ.

ಸಿದ್ದೇಗೌಡರಿಗೆ ತಮ್ಮ ರಾಮಾಯಣದ ಗುರುಗಳಾದ ವಿದ್ವಾನ್ ಶ್ರೀ ರಂಗನಾಥ ಶರ್ಮರವರ ಪರಿಚಯಕ್ಕೆ ಮುನ್ನ ಮಂಡ್ಯಕ್ಕೆ ರಾಮಾಯಣ ಪ್ರವಚನಕ್ಕೆ ಆಗಮಿಸುತ್ತಿದ್ದ ಅನೇಕ ಪ್ರಶಸ್ತಿಗಳನ್ನು ಗಳಿಸಿದ್ದ ಪಂಡಿತ ಶ್ರೀ ಎನ್.ಟಿ. ಶ್ರೀನಿವಾಸ ಐಯಂಗಾರ್ ಅವರ ಪರಿಚಯವಾಯಿತು. ಗೌಡರ ಹೃನ್ಮನಗಳಲ್ಲಿ ಕಾವ್ಯದ ಸ್ವಾರಸ್ಯ ಹಿಗ್ಗುತ್ತಾ ಹೋಯಿತು. ಗೌಡರಿಗೆ ಒಂದು ದಿನ ಶ್ರೀ ರಂಗನಾಥ ಶರ್ಮರವರ ದರ್ಶನಭಾಗ್ಯ ಲಭಿಸಿತು. ಸ್ನೇಹ ಕುದುರಿತು. ಗೌಡರು ಶರ್ಮರವರ ಶಿಷ್ಯವೃತ್ತಿಗಿಳಿದರು. ಕೊನೆಗೆ ಅವರ ಪಟ್ಟ ಶಿಷ್ಯರಾದರು. ವಿದ್ವಾನ್ ಶ್ರೀರಂಗನಾಥ ಶರ್ಮರವರು ಸಿದ್ದೇಗೌಡರು ರಚಿಸಿದ ರಾಮಾಯಣದ ಸ್ತ್ರೀ. ಪುರುಷ ಪಾತ್ರಗಳ ಹಸ್ತಪ್ರತಿಗಳನ್ನೆಲ್ಲಾ ಓದಿ ಸೂಕ್ತ ಸಲಹೆಗಳನ್ನು ಇತ್ತು ವಿದ್ವತ್ಪೂರ್ಣ ಮುನ್ನುಡಿಯನ್ನು ಕರುಣಿಸಿದ್ದಾರೆ. ಅವರ ಆಶೀರ್ವಾದ ಪ್ರೋತ್ಸಾಹದ ಬಲದಿಂದ ಈ ಕೃತಿಗಳು ಬೆಳಕು ಕಂಡಿವೆ ಎಂದು ಗೌಡರು ಅವರಿಗೆ ಕೃತಜ್ಞತೆಯ ಮಹಾಪೂರವನ್ನೇ ಹರಿಸಿದ್ದಾರೆ.

ಪ್ರತಿನಿತ್ಯ ಸಿದ್ದೇಗೌಡರು ರಾಮಾಯಣ ಪಾರಾಯಣ ಮಾಡ ತೊಡಗಿದರು. ರಾಮಾಯಣ ಪಾರಾಯಣದವನ್ನು ಅವರು ವ್ರತದಂತೆ ಆಚರಿಸಿದರು. ಆದಿಕವಿ ಮಹರ್ಷಿ ವಾಲ್ಮೀಕಿ ರಾಮಾಯಣದ ಸೊಗಸಿನ ಜೊತೆಗೆ ವ್ಯಕ್ತಿ ಚಾರಿತ್ರ್ಯ ದೃಷ್ಟಿಯಿಂದ ಅದರ ಪಾತ್ರಗಳನ್ನು

ಅವಲೋಕಿಸಿದಾಗ ಶ್ರೀರಾಮನ ಚಾರಿತ್ರ್ಯವು- ಕೇವಲ ಮನುಷ್ಯನಾಗೇ, ಅವತಾರ ಪುರುಷನಂತಲ್ಲ - ಅದ್ಭುತವೂ, ಆಕರ್ಷಣೀಯವೂ, ಅನುಕರಣೀಯವೂ ಆಗಿ ಆದರ್ಶಪುರುಷನಾಗಿ ಗೌಡರ ಕಣ್ಣು ಮುಂದೆ ಸ್ಥಿರವಾಗಿ ನಿಂತು ಬಿಟ್ಟನು. ಸಾಹಿತ್ಯದ ದೃಷ್ಟಿಯಿಂದಲೂ ರಾಮಾಯಣವು ಗೌಡರ ಮನಸ್ಸನ್ನು ಸೆರೆ ಹಿಡಿಯಲಾರಂಭಿಸಿತು. ಗೌಡರಿಗೆ ಸಾಹಿತ್ಯೋಪಾಸಕನಾಗಬೇಕೆಂಬ ಹಂಬಲ ಬಹಳ ಕಾಲದಿಂದಲೂ ಗುಂಯ್‌ಗುಟ್ಟುತ್ತಿದ್ದ ಹೆಬ್ಬಯಕೆಗೆ ರಾಮಾಯಣ ಅವಕಾಶ ಕಲ್ಪಿಸಿ ಕೊಟ್ಟಿದ್ದೇ ಅಲ್ಲ; ಸಾಹಿತ್ಯ ಕ್ಷೇತ್ರವನ್ನೂ ಪ್ರವೇಶಿಸುವಂತೆ ಮಾಡಿತು. ರಾಮಾಯಣದ ದೊಡ್ಡ ದೊಡ್ಡ ಪಾತ್ರಗಳ ವಿಶ್ಲೇಷಣೆ ವಿಮರ್ಶೆಯನ್ನು ನಮ್ಮ ಕನ್ನಡ ವಿದ್ವಾಂಸರು ಮಾಡಿದ್ದಾರೆ. ಆದರೆ ಸಣ್ಣಪುಟ್ಟ ಪಾತ್ರಗಳ ವಿಮರ್ಶೆ ಮಾಡಿಲ್ಲ. ರಾಮಾಯಣವನ್ನು ಸಮಗ್ರ ದೃಷ್ಟಿಯಿಂದ ಅವಲೋಕಿಸಿದಾಗ ಶ್ರೀರಾಮ ಸೀತೆಯರ. ಧ್ಯೇಯ ಸಾಕ್ಷಾತ್ಕಾರಕ್ಕೆ -ರಾವಣಾದಿರಾಕ್ಷಸರ ವಧೆ ಮಾಡಿ ಲೋಕ ಕಲ್ಯಾಣ ಮಾಡುವುದಕ್ಕೆ ಪ್ರತಿಯೊಂದು ಪಾತ್ರವೂ ತನ್ನ ತನ್ನ ಕಾಣಿಕೆಯನ್ನು ಅರ್ಪಿಸಿದೆ ಎಂಬುದು ವ್ಯಕ್ತವಾಗುತ್ತದೆ. ಆದ್ದರಿಂದ ಕಿರಿಯ ಪಾತ್ರಗಳ ಹಿರಿಮೆಯನ್ನು ಏಕೆ ನಿರೂಪಿಸಬಾರದೆಂಬ ಬಯಕೆ ಗೌಡರಿಗೆ ಹಿರಿದಾಗುತ್ತಾ ಬಂತು.

## ಅಪ್ರತಿಮ ಸಾಹಿತ್ಯಕ ದುಡಿಮೆಗಾರ

ಸಿದ್ದೇಗೌಡರು ರಾಮಾಯಣ ಪಾರಾಯಣ ಮಾಡಿದಂತೆಲ್ಲಾ ಕಾವ್ಯಾರ್ಥವು ಹಿಗ್ಗುತ್ತಾ ಹೋಗಿ ಪ್ರಧಾನ ಗುರಿಯನ್ನು ಆವಿಷ್ಕಾರ ಮಾಡಲು ತೊಳಲಾಡುತ್ತಿದ್ದರು. ಈ ತೊಳಲಾಟ, ಆಂತರಿಕ ತುಡಿತ, ಚಿಂತನ ಮಂಥನ ಕೊನೆಗೆ ಫಲಕೊಟ್ಟವು. ಸೀತಾಸುತ – ಸಿದ್ದೇಗೌಡರ ಕಾವ್ಯನಾಮ: ಸೀತಾಸುತ ಎಂಬ ಕಾವ್ಯನಾಮದಿಂದಲೇ ಅವರು ಸಾಹಿತ್ಯಕ್ಷೇತ್ರದಲ್ಲಿ ಪ್ರಸಿದ್ಧರಾದರು. ಸಾಹಿತ್ಯ ಕ್ಷೇತ್ರಕ್ಕೆ ನೆನಪಿನಲ್ಲಿ ಉಳಿಯುವಂತಹ ಕೃತಿರತ್ನಗಳನ್ನು ನೀಡಿದರು.

ಜನಕ ಮಹಾರಾಜ ಒಂದಾನೊಂದು ದಿವಸ ಯಜ್ಞವನ್ನು ಮಾಡಬೇಕೆಂದು ನೇಗಿಲು ಹಿಡಿದು ಭೂಮಿಯನ್ನು ಉಳುವಾಗ ಒಂದು



ಹೆಣ್ಣು ಶಿಶು ಸಿಕ್ಕಿತು. ನೇಗಿಲಿಗೆ ಸಿಕ್ಕಿದ್ದರಿಂದ ಜನಕ ಮಹಾರಾಜ ಆ ಶಿಶುವಿಗೆ ''ಸೀತೆ'' ಯೆಂದು ಹೆಸರಿಟ್ಟನು. ಸೀತೆ ಅಯೋನಿಜೆ. ಭೂಮಿ ಪುತ್ರಿ. ಅಂತಹ ಜಗನ್ಮಾತೆಯ ಸುತತಾನೆಂದು ಸಿದ್ದೇಗೌಡರು ಹೆಮ್ಮೆಯಿಂದ 'ಸೀತಾಸುತ' ಎಂಬ ಕಾವ್ಯನಾಮವನ್ನಿಟ್ಟುಕೊಂಡಿದ್ದಾರೆ. ಸೀತಾ ಎಂದರೆ ನೇಗಿಲು, ನೇಗಿಲ ಸಾಲು, ಉತ್ತಗೆರೆ, ಉತ್ತಭೂಮಿ ಎಂಬ ಅರ್ಥಗಳೂ ಇವೆ.

## ಊರ್ಮಿಳಾ ದರ್ಶನ:

ಪ್ರಸಿದ್ಧ ಲೇಖಕರಾದ ಡಾ|| ಹಾ. ಮಾ. ನಾಯಕರ ಶಿಫಾರಸ್ಸಿನ ಮೇರೆಗೆ 'ಊರ್ಮಿಳಾದರ್ಶನ' ಕೃತಿ 1977ರಲ್ಲಿ ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರದಿಂದ ಪ್ರಕಟವಾಯಿತು. ಈ ಕೃತಿಯ ಪ್ರತಿಗಳೆಲ್ಲಾ ಮಾರಾಟವಾಗಿ 1989ರಲ್ಲಿ ಮಂಡ್ಯದ ಸೀತಾಸುತ ಪ್ರಕಾಶನದಿಂದ ಎರಡನೇ ಮುದ್ರಣ ಹೊರ ಬಂದಿದೆ. ಊರ್ಮಿಳೆಯ ಪಾತ್ರ ರಚನೆಯನ್ನು ಕುರಿತು ಮೊದಲ ಮಾತಿನಲ್ಲಿ ಸೀತಾಸುತರವರು ಹೀಗೆ ಹೇಳಿದ್ದಾರೆ.

ಊರ್ಮಿಳೆ ಎಂಥವಳೆಂಬುದನ್ನು ನಿರೂಪಿಸಲು ಅವಳ ಪಾತ್ರಾಭಿನಯಕ್ಕೆ ಅಯೋಧ್ಯಾ ಅರಮನೆಯ ಬೃಹತ್ ಕ್ಷೇತ್ರವನ್ನು ವಾಲ್ಮೀಕಿ ಸೃಷ್ಟಿಸಿದ್ದಾನೆ. ಸನಾತನ ಸಂಸ್ಕೃತಿಯ, ಆರ್ಯಧರ್ಮದ ಬುನಾದಿಯಾದ ಗೃಹಸ್ಥಾಶ್ರಮ ಜೀವನವನ್ನು ರಾಮರಾಜ್ಯ ಗೃಹಸ್ಥಾಶ್ರಮವನ್ನು ಮಹಾಕಾವ್ಯದ ವಸ್ತುವನ್ನಾಗಿ ಬಳಸಿಕೊಂಡಿರುವ ಇಡೀ ರಾಮಾಯಣವೇ ಊರ್ಮಿಳೆಯ ಪಾತ್ರ ರಚನೆಗೆ ಹಿನ್ನೆಲೆಯಾಗಿದೆ. ಸಾಧ್ವಿಯೂ, ನಿಜ ಸಹಧರ್ಮಿಣಿಯೂ, ಸದ್ಗೃಹಿಣಿಯೂ ಆದ ರಾಮಾನುಜನ ಅರ್ಧಾಂಗಿಯ ಪಾತ್ರವನ್ನು ಆದಿಕವಿ ಮಹಾಮೌನದ ಮಹಾಮುಸುಕಿನಿಂದ ಹೊರಗೆ ಸೆಳೆದು, ವಿಕಸನಗೊಳಿಸುವಾಗ, ಕೈಕೆಯ ಪಾತ್ರವನ್ನು ಪರೋಕ್ಷವಾಗಿ ರೂಪಿಸಲೇಬೇಕಾಗುತ್ತದೆ. ಅಷ್ಟೇ ಅಲ್ಲ: ಸೀತಾರಾಮರ ಮಹೋನ್ನತಿಗೆ ಕೈಕೆಯು ಎಷ್ಟು ಪೋಷಕಳಾಗಿದ್ದಳೋ ಊರ್ಮಿಳೆಯ ಮಹಾತ್ಮ್ಯಕ್ಕೆ ಅಷ್ಟೇ ಪೋಷಕಳಾಗಿದ್ದಾಳೆ. ಶ್ರೀರಾಮನನ್ನು ಪ್ರತ್ಯಕ್ಷವಾಗಿಯೋ

ಪರೋಕ್ಷವಾಗಿಯೋ ಸಂದರ್ಶಿಸಿದವರೆಲ್ಲಾ ಪಾವನರಾಗುವಾಗ ಕೈಕೆ ಮಂಥರೆಯರೂ ಪಾವನರಾಗ ಬೇಕಲ್ಲವೇ? ಕಾವ್ಯದಲ್ಲಿ ಮಿಂಚಿ ಮರೆಯಾಗುವ ಶಬ್ದ, ವಾಕ್ಯ, ಸಂದರ್ಭ ಗಳನ್ನು ಆಧರಿಸಿಯೇ, ಅಲ್ಪಮತಿಗೆ ಹೊಳೆದಂತೆ, ಊರ್ಮಿಳೆಯ ಪಾತ್ರ ನಿರೂಪಣೆಯನ್ನು ಮಾಡಿದ್ದೇನೆ. ಮೌನದಲ್ಲೂ ಮಹತ್ತಾಗಿ ಪಾತ್ರರಚಿಸುವ ಕಾವ್ಯಕೌಶಲ ಆದಿಕವಿಗೇ ಮೀಸಲು. ಅನ್ವೇಷಣೆ ಮಾಡಿದಷ್ಟೂ ಆ ಮಹಾಸಾಗರ ಭಂಡಾರದಲ್ಲಿ ಸಂಸ್ಕೃತಿ, ಬುದ್ಧಿ, ವಿದ್ಯೆ, ಸಂಸ್ಕಾರಗಳಿಗೆ ತಕ್ಕಂತೆ ಅನರ್ಘ್ಯ ರತ್ನಗಳು ಸಿಗುತ್ತವೆ.

## ಸೀತಾದರ್ಶನ :

ಊರ್ಮಿಳಾದರ್ಶನ ಕೃತಿಯನಂತರ ಸೀತಾಸುತರವರ 'ಸೀತಾದರ್ಶನ' 1978ರಲ್ಲಿ ಪ್ರಕಟವಾಯಿತು. ಈ ಕೃತಿಯನ್ನು ಓದಿದ ಸೀತಾಸುತರವರ ರಾಮಾಯಣದ ಗುರುಗಳಾದ ವಿದ್ವಾನ್ ಶ್ರೀ ಎನ್.ರಂಗನಾಥಶರ್ಮರವರು ಪತ್ರವೊಂದರಲ್ಲಿ ಹೀಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ; ''ಸಮುದ್ರದ ಆಳವನ್ನು ಹೊಕ್ಕಷ್ಟು ಅನರ್ಘ್ಯರತ್ನಗಳು ದೊರೆಯುತ್ತವೆ. ಒಂದು ದೃಷ್ಟಿಯಲ್ಲಿ ಕೆಲವು ಕಡೆ ನೀವು ತುಂಬ ಆಳಕ್ಕೆ ಇಳಿದು ಮಿನುಗುವ ರತ್ನಗಳನ್ನು ಹೊರಕ್ಕೆ ತಂದಿದ್ದೀರಿ. ನೀವು ಧನ್ಯರು''

## ರಾಮಾಯಣದಲ್ಲಿ ಸ್ತ್ರೀ ಪಾತ್ರಗಳು :

ಸೀತಾಸುತರವರ ರಾಮಾಯಣದಲ್ಲಿ ಸ್ತ್ರೀ ಪಾತ್ರಗಳು ಮಹತ್ ಹಾಗೂ ಬೃಹದ್ಗ್ರಂಥ. 840 ಪುಟಗಳಿರುವ ಈ ಗ್ರಂಥ ಮೈಸೂರಿನ ನಭಶ್ರೀ ಪ್ರಕಾಶನದ ವತಿಯಿಂದ ಪ್ರಕಟವಾಗಿದೆ. ಈ ಗ್ರಂಥದಲ್ಲಿ ಆರ್ಯಸ್ತ್ರೀಯರು, ತಪಸ್ವಿನಿಯರು, ವಾನರಸ್ತ್ರೀಯರು, ರಾಕ್ಷಸ ಸ್ತ್ರೀಯರು ಹೀಗೆ 27 ಸ್ತ್ರೀ ಪಾತ್ರಗಳು ಅರಳಿವೆ. ಈ ಗ್ರಂಥ ರಚನೆಗೆ ಸೀತಾಸುತ ಅವರಿಗೆ 10-15 ವರ್ಷಗಳೇ ಹಿಡಿದಿವೆ. ಸೀತಾಸುತರವರು ಈ ಗ್ರಂಥವನ್ನು ಮೈಸೂರು ಮಹಾರಾಣಿ ಲಕ್ಷ್ಮಮ್ಮಣ್ಣಿಯವರಿಗೆ (1741-1808) ಅರ್ಪಿಸಿದ್ದಾರೆ.



## ರಾಮಾಯಣದಲ್ಲಿ ಪುರುಷ ಪಾತ್ರಗಳು :

ಸೀತಾಸುತ ಅವರ ಮತ್ತೊಂದು ಮಹತ್ವಾಕಾಂಕ್ಷೆಯ ಮಹತ್ ಹಾಗೂ ಬೃಹದ್ಗ್ರಂಥ ರಾಮಾಯಣದಲ್ಲಿ ಪುರುಷ ಪಾತ್ರಗಳು. ಸೀತಾಸುತ ಪ್ರಕಾಶನದಿಂದ ಮೊದಲನೆ ಮುದ್ರಣ ಕಂಡ ಈ ಗ್ರಂಥ 1074 ಪುಟಗಳಿಂದ ಕೂಡಿದೆ. ಈ ಗ್ರಂಥವನ್ನು ಕರ್ಮವೀರ ಸರ್ದಾರ್ ವಲ್ಲಭಬಾಯ್ ಪಟೇಲ್ ಅವರಿಗೆ ಅರ್ಪಿಸಲಾಗಿದ್ದು, ಅವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನೂ ನೀಡಲಾಗಿದೆ. ಈ ಗ್ರಂಥದಲ್ಲಿ ರಾಮಾಯಣದ 56 ಪುರುಷ ಪಾತ್ರಗಳನ್ನು ಚಿತ್ರಿಸಲಾಗಿದೆ.

## ಹಿರೊಷೀಮಾ :

1945ರ ಜುಲೈನಲ್ಲಿ ನಡೆದ ದ್ವಿತೀಯ ಜಾಗತಿಕ ಮಹಾಯುದ್ಧದಲ್ಲಿ ಮಿತ್ರ ಪಕ್ಷದವರು ಶತ್ರುಪಕ್ಷವಾದ ಜಪಾನೀಯರ ಮೇಲೆ ಅಣ್ವಸ್ತ್ರ ಪ್ರಯೋಗಿಸಿ ಹಿರೊಷೀಮಾ, ನಾಗಸಾಕಿ ನಗರಗಳನ್ನು ನಿಶ್ಶೇಷವಾಗಿ ಧ್ವಂಸ ಮಾಡಿದ ಅಮಾನವೀಯ ಕೃತ್ಯವೇ ಹಿರೊಷೀಮಾ ಮಹಾಕಾವ್ಯದ ವಸ್ತು. ಡಾ|| ಸಿ.ಪಿ.ಕೆ. ಅವರು ಹೇಳುವಂತೆ ''ಆಧುನಿಕ ಯುಗದಲ್ಲಿ ಮಹಾಕಾವ್ಯ ಹುಟ್ಟಲಾರದು ಎಂಬುದೊಂದು ಅಭಿಮತವಿರುವಾಗ, ಈ ಯುಗವನ್ನೆ ಬಂಡವಾಳ ಮಾಡಿಕೊಂಡು ರಚಿಸಲಾಗಿರುವ 'ಹಿರೊಷೀಮಾ' ಮಹಾಕಾವ್ಯಪ್ರಕಾರದ ಒಂದು ನೂತನ ವಿನ್ಯಾಸವಾಗಿದೆ. ಇದರ ವಿಧಾನ ಬೇರೆ. ಹಳೆಯ ಕಥೆಯನ್ನೆ ತೆಗೆದುಕೊಂಡು ಅದರಲ್ಲಿ ವರ್ತಮಾನವನ್ನು ಪ್ರತಿಮಿಸುವ ಕೃತಿ ಇದಲ್ಲ. ಇದೊಂದು ಪ್ರತಿಕೃತಿ ಮಹಾಕಾವ್ಯ ಎನ್ನಬಹುದು. ಹಾಗೆ ನೋಡಿದರೆ ಇದರಲ್ಲಿ ಕತೆಯೇ ಇಲ್ಲ (ಆದರೆ ವ್ಯಥೆಯುಂಟು) ಇರುವುದೆಲ್ಲ ಈ ಶತಮಾನದ ಯಥಾರ್ಥ ಲೋಕ ಜೀವನ ದರ್ಶನ. ಯುದ್ಧ ಇದರ ಹಿನ್ನೆಲೆಯಲ್ಲಿದ್ದರೂ, ಇದು ವೀರ ಕಾವ್ಯವಲ್ಲ; ವಾಸ್ತವವಾಗಿ ಯುದ್ಧ ವಿರೋಧವೆ ಅದರ ನೆಲೆ''


ಸೀತಾಸುತರವರ ಮಹಾಕಾವ್ಯ 'ಹಿರೊಷೀಮಾ' 1981ರಲ್ಲಿ ಸೀತಾಸುತ ಪ್ರಕಾಶನದಿಂದ ಪ್ರಕಟವಾಗಿದೆ.

## ಓದೋ ಹುಡುಗ :

ಈ ಕೃತಿ 1987ರಲ್ಲಿ ಸೀತಾಸುತ ಪ್ರಕಾಶನದಿಂದ ಬೆಳಕುಕಂಡಿದೆ. ಈ ಕೃತಿಗೆ ಮುನ್ನುಡಿ ನೀಡಿರುವ ಪ್ರಸಿದ್ಧ ಸಾಹಿತಿ ಎಂ.ವಿ. ಸೀತಾರಾಮಯ್ಯನವರು ಹೇಳುವಂತೆ '' ಇಂದಿನ ವಿದ್ಯಾರ್ಥಿವೃಂದದಲ್ಲಿ ಸದ್ಭಾವನೆಗಳನ್ನು ಬಿತ್ತಿದರೆ ಮುಂದೆ ಅವರು ಸತ್ಪ್ರಜೆಗಳಾಗಿ ದೇಶಕಲ್ಯಾಣವನ್ನು ಸಾಧಿಸಬಹುದು ಎಂಬ ಲೇಖಕರ ಆಶಾಭಾವನೆಯೇ ''ಓದೋ ಹುಡುಗ'' ಎಂಬ ಈ ಗ್ರಂಥ ರಚನೆಗೆ ಪ್ರೇರಣೆಯಾಗಿದೆ. ಭಾರತದ ಇಂದಿನ ವಿಷಮ ಪರಿಸ್ಥಿತಿಯಲ್ಲಿ (ಇದರ ಇಣಕು ನೋಟಗಳು ಪುಸ್ತಕದ ಪುಟಗಳಲ್ಲಿ ಅಲ್ಲಲ್ಲಿ ಹಾಸು ಹೊಕ್ಕಾಗಿ ಬಂದಿವೆ) ಓದುವ ಹುಡುಗ ಮನೆಯ ಮಗನಾಗಿ, ಮನೆಯ ಹೊರಗೆ ಮುಂದಿನ ಪ್ರಜೆಯಾಗುವ ಒಬ್ಬ ಸಮಾಜ ಜೀವಿಯಾಗಿ ಶಾಲಾ ಕಾಲೇಜುಗಳಲ್ಲಿ ಒಬ್ಬ ಆದರ್ಶ ಸ್ನೇಹಿತನೂ ಜ್ಞಾನಪಿಪಾಸುವೂ ಆಗಿ. ಎಲ್ಲ ಸಂದರ್ಭಗಳಲ್ಲೂ ತಾಳ್ಮೆಗೆಡದೆ ಸಮಸ್ಯೆಗಳನ್ನು ಎದುರಿಸುತ್ತ ಜೀವನ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುತ್ತ ಹೇಗೆ ಬಾಳಬೇಕು ಎನ್ನುವುದನ್ನು ಇಬ್ಬರು ಒಡನಾಡಿ ಗೆಳೆಯರನ್ನು ಕೇಂದ್ರ ಬಿಂದುವಾಗಿ ಇಟ್ಟುಕೊಂಡು 41 ಚಿಕ್ಕ ಅಧ್ಯಾಯಗಳಲ್ಲಿ ನಾಟಕೀಯ ಸಂವಾದಗಳಿಂದ ಮನೋಜ್ಞವೆನಿಸುವಂತೆ ಸರಳವಾದ ಗದ್ಯ ಶೈಲಿಯಲ್ಲಿ ಒಂದು ಹೊಸ ಮಾದರಿಯ ಕಥಾನಕವನ್ನು ಸೀತಾಸುತರು ಓದುಗರ ಮುಂದಿಟ್ಟಿದ್ದಾರೆ''

ಇದಲ್ಲದೆ ಸೀತಾಸುತರವರು ''ಮತಿತಾರ್ಥದಲ್ಲಿ ಸಂಕ್ಷಿಪ್ತ ವಾಲ್ಮೀಕಿರಾಮಾಯಣ'', ''ನವೀನ ದೃಷ್ಟಿಯಲ್ಲಿ ಶ್ರೀ ವಾಲ್ಮೀಕಿ ರಾಮಾಯಣ'' ಹಾಗೂ ''ಪಾರಾಯಣದ ರಾಮಾಯಣ'' ಎಂಬ ಮಹತ್ವದ ಕೃತಿಗಳನ್ನು ಪ್ರಕಟಿಸಿದ್ದಾರೆ. ಜೊತೆಗೆ ಸೀತಾಸುತರವರು ''ಕುಣಿಯೋಣ ಬಾ ಚಿನ್ನೆ'' ''ಹಮ್ಮಿನ ಹಾಡು'' ''ಭಗವಂತನ ಭಟ್ಟಂಗಿ'' ಎಂಬ ಮೂರು ಕವನ ಸಂಕಲನಗಳನ್ನು ಪ್ರಕಟಿಸಿದ್ದು ಕಾವ್ಯ ಕ್ಷೇತ್ರದಲ್ಲೂ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ.






## ದೇವಗಂಗೆ ಕಾವೇರಿ ರಾಮಾಯಣ

1993ರಲ್ಲಿ ಭುಗಿಲೆದ್ದ ಕಾವೇರಿ ವಿವಾದದ ಹಿನ್ನೆಲೆಯಲ್ಲಿ ಸೀತಾಸುತರವರು ''ದೇವಗಂಗೆ ಕಾವೇರಿ ರಾಮಾಯಣ'' ಎಂಬ ಕೃತಿಯನ್ನು ರಚಿಸಿದ್ದಾರೆ. ಜೀವನದಿ ಕಾವೇರಿಯ ಬಗ್ಗೆ ಪೌರಾಣಿಕ ಪೀಠಿಕೆಯ ಜೊತೆಗೆ ಅವರು ಕಲೆ ಹಾಕಿರುವ ಅಂಕಿ ಅಂಶಗಳು, ನೀಡಿರುವ ಸಲಹೆ-ಸೂಚನೆಗಳು ಚಿಂತನೆಗೆ ಅರ್ಹವಾಗಿವೆ. ಸರ್ಕಾರದ ಕಣ್ಣು ತೆರೆಸುವಂತಿವೆ. ಕಾವೇರಿ ನದಿ ವಿವಾದದಲ್ಲಿ ಕರ್ನಾಟಕ ರಾಜ್ಯಕ್ಕೆ ಶತಶತಮಾನಗಳಿಂದಲೂ ಅನ್ಯಾಯವಾಗಿದೆ. ಈ ದಿಶೆಯಲ್ಲಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸಬಾರದು. ಕರ್ನಾಟಕಕ್ಕೆ ಅನ್ಯಾಯ ಮಾಡಬಾರದು ಎನ್ನುವ ಕಳಕಳಿಯಿದೆ.

ಈ ಕೃತಿ ಅಂಚೆ ಮೂಲಕ ತಮ್ಮ ಕೈ ಸೇರಿದಾಗ ಸುಪ್ರಸಿದ್ಧ ಅಂಕಣಕಾರ ಡಾ. ಹಾ.ಮಾ.ನಾಯಕರು ಸೀತಾಸುತ ಅವರಿಗೆ ಬರೆದ ಪತ್ರ ಹೀಗಿದೆ:

**ಪ್ರಿಯ ಮಾನ್ಯ ಶ್ರೀ ಸಿದ್ದೇಗೌಡರಲ್ಲಿ ವಿಜ್ಞಾಪನೆಗಳು**

ನೀವು ವಿಶ್ವಾಸದಿಂದ ಕಳುಹಿಸಿದ ನಿಮ್ಮ ಈಚಿನ ಪುಸ್ತಿಕೆ 'ದೇವಗಂಗೆ ಕಾವೇರಿ ರಾಮಾಯಣ' ಬಂದಿದೆ. ಈ ಸೌಜನ್ಯಕ್ಕಾಗಿ ತುಂಬ ಕೃತಜ್ಞನಾಗಿದ್ದೇನೆ. ನಿಮ್ಮನ್ನು ಕಾಣದೆ ಯುಗಗಳೇ ಕಳೆದಂತೆ ಅನ್ನಿಸುತ್ತಿದೆ! ನಿಮ್ಮ ಪುಸ್ತಿಕೆ ಬಂದಾಗ ನಿಮ್ಮನ್ನೇ ಕಂಡ ಸಂತೋಷವಾಯಿತು. ಅದನ್ನು



ಸೀತಾಸುತ (ಕೆ. ಸಿದ್ದೇಗೌಡ) ರವರಿಗೆ ಕರ್ನಾಟಕ ಸರ್ಕಾರ 1997ನೆಯ ಸಾಲಿನಲ್ಲಿ ನೀಡಿ ಗೌರವಿಸಿದ ರಾಜ್ಯೋತ್ಸವ ಪ್ರಶಸ್ತಿ ಫಲಕ.

ಆಸಕ್ತಿಯಿಂದ ಓದುತ್ತೇನೆ ಎಂದು ಡಾ. ಹಾ.ಮಾ.ನಾಯಕರವರು ಸ್ನೇಹಪೂರ್ವಕ ಪತ್ರ ಬರೆದಿದ್ದಾರೆ.

## ಪ್ರಮುಖ ಪ್ರಶಸ್ತಿ ಗೌರವಗಳು :

**1994**ರಲ್ಲಿ ಮಂಡ್ಯ ನಗರದಲ್ಲಿ **63**ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ ವಿಜೃಂಭಣೆಯಿಂದ ಜರುಗಿತು. ಈ ಸಂದರ್ಭದಲ್ಲಿ






ಶತಾಯುಷಿ ಸೀತಾಸುತ ಶತಮಾನೋತ್ಸವ ಹಾಗೂ ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಟ್ರಸ್ಟ್‌ನ ಉದ್ಘಾಟನಾ ಸಮಾರಂಭವನ್ನು ಸೀತಾಸುತರವರು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಟ್ರಸ್ಟ್‌ನ ಅಧ್ಯಕ್ಷ ವಕೀಲ ಕೆ.ಎಸ್. ದೊರೆಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಜಿ. ನಾರಾಯಣ, ವಿದ್ವಾನ್ ಎನ್. ರಂಗನಾಥಶರ್ಮ ಹಾಗೂ ಕೊ. ಚನ್ನಬಸಪ್ಪ ಅವರನ್ನು ಚಿತ್ರದಲ್ಲಿ ಕಾಣಬಹುದು.

ಸೀತಾಸುತರವರು ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಾಗಿ ಅವರನ್ನು ಸನ್ಮಾನಿಸಲಾಯಿತು.

30-7-1998ರಂದು ನವದೆಹಲಿಯಲ್ಲಿ ಫ್ರೀಡಂ ಫೈಟರ್ಸ್ ಮತ್ತು ಜರ್ನಲಿಸ್ಟ್ ಅಸೋಷಿಯೇಷನ್ ವತಿಯಿಂದ ನಡೆದ ಸಮಾರಂಭದಲ್ಲಿ ಹಿರಿಯ ಗಾಂಧೀವಾದಿ, ಸುಪ್ರಸಿದ್ಧ ಸಾಹಿತಿ ಸೀತಾಸುತ ಅವರಿಗೆ ಐ.ಎಫ್.ಎಸ್.ಎಂ.ಎನ್.ಫೆಲಿಫಿಕೇಷನ್ ಆವಾರ್ಡ್ ನೀಡಿ ಆತ್ಮೀಯತೆಯಿಂದ ಗೌರವಿಸಲಾಯಿತು. ಇದು ಕೇಂದ್ರ ಸರ್ಕಾರದ ಪ್ರಶಸ್ತಿಯಾಗಿದ್ದು, ಸೀತಾಸುತ ಅವರಿಗೆ ಸಂದ ಮಹತ್ವದ ಗೌರವವಾಗಿದೆ.

ಇವೆಲ್ಲದಕ್ಕೂ ಕಳಸವಿಟ್ಟಂತೆ ಕರ್ನಾಟಕ ರಾಜ್ಯ ಸರ್ಕಾರ ಸೀತಾಸುತ ಅವರಿಗೆ 1997ನೆಯ ಸಾಲಿನಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. 1997ರ ನವೆಂಬರ್ 1 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಸಮಾರಂಭದಲ್ಲಿ ಆಗಿನ ಮುಖ್ಯಮಂತ್ರಿ ಜೆ.ಹೆಚ್. ಪಟೇಲ್ ಅವರು ಸೀತಾಸುತರವರಿಗೆ ಸಾಹಿತ್ಯ ಕ್ಷೇತ್ರದಲ್ಲಿ ಅವರು ಸಲ್ಲಿಸಿದ ಅನುಪಮ ಸೇವೆಗಾಗಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಶಾಲುಹೊದಿಸಿ ಸನ್ಮಾನಿಸಿದರು.

18-7-1999ರಂದು ಮಂಡ್ಯ ನಗರದ ಸೋಮೇಶ್ವರ ಸಮುದಾಯ ಭವನದಲ್ಲೊಂದು ಅಪರೂಪದ ಸಮಾರಂಭ. ಅಂದು ಶತಾಯುಷಿ ಸೀತಾಸುತ ಅವರ ನೂರನೇ ಹುಟ್ಟುಹಬ್ಬ 15-7-1899ರಂದು ಜನಿಸಿದ ಸೀತಾಸುತರವರು ಇಡೀ ಶತಮಾನದುದ್ದಕ್ಕೂ ಬಾಳಿ 15-7-1999ಕ್ಕೆ ನೂರೊಂದನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಸುದಿನ. ಇಡೀ ಸಮುದಾಯ ಭವನ ನೆಂಟರಿಷ್ಟರು ಸಾಹಿತ್ಯಾಸಕ್ತರಿಂದ ತುಂಬಿ ತುಳುಕುತ್ತಿತ್ತು. ಶತಾಯುಷಿ ಸೀತಾ ಸುತರವರು ಸಮಾರಂಭದ ಆಕರ್ಷಣೆಯ ಕೇಂದ್ರ ಬಿಂದುವಾಗಿದ್ದರು. ಸೀತಾಸುತ ಶತಮಾನೋತ್ಸವ ಸಮಾರಂಭದ ಜೊತೆಗೇ ಶ್ರೀಮತಿ ದೇವಮ್ಮ ಪುಟ್ಟಚ್ಚಿಸಿದ್ದೇಗೌಡ ಟ್ರಸ್ಟ್ ಸಹ ಉದ್ಘಾಟನೆಯಾಯಿತು.





ಶತಾಯುಷಿ ಸೀತಾಸುತ ಶತಮಾನೋತ್ಸವ ಸಮಾರಂಭದಲ್ಲಿ ಸಾಹಿತಿ ದಿಗ್ಗಜ ಸೀತಾಸುತರವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಜಿ. ನಾರಾಯಣ ಅವರನ್ನು ಕಾಣಬಹುದು.




ಶತಾಯುಷಿ ಸಾಹಿತಿ ದಿಗ್ಗಜ ಸೀತಾಸುತರವರ ಶತಮಾನೋತ್ಸವ ಸಮಾರಂಭದಲ್ಲಿ ಅವರನ್ನು ಡಾ|| ಹಾ.ಮಾ. ನಾಯಕರವರು ಸನ್ಮಾನಿಸುತ್ತಿರುವುದು.

ಸೀತಾಸುತರವರ ಸುಪುತ್ರರಾದ ಹಿರಿಯವಕೀಲ ಕೆ.ಎಸ್.ದೊರೆಸ್ವಾಮಿ, ಕೆ.ಎಸ್.ಶ್ರೀಕಂಠಸ್ವಾಮಿ, ಡಾ||ಕೆ.ಎಸ್.ಜಯರಾಂ ಹಾಗೂ ಡಾ|| ಕೆ.ಎಸ್. ಕೃಷ್ಣಪ್ಪ ಅವರು ತಮ್ಮ ತಂದೆ - ತಾಯಿಗಳ ಹೆಸರನ್ನು ಚಿರಸ್ಥಾಯಿಗೊಳಿಸಲು ಈ ಟ್ರಸ್ಟ್ ಅನ್ನು ಸ್ಥಾಪಿಸಿದ್ದಾರೆ.



ಸೀತಾಸುತ ಅವರ ರಾಮಾಯಣದ ಗುರುಗಳಾದ ವಿದ್ವಾನ್ ಎನ್. ರಂಗನಾಥಶರ್ಮ ಅವರಿಗೆ ಡಾ. ವಿ.ಟಿ. ಸುಶೀಲಮ್ಮ ಜಯರಾಂರವರು ಫಲತಾಂಬೂಲ ನೀಡಿ ಸನ್ಮಾನಿಸುತ್ತಿರುವುದು. ಚಿತ್ರದಲ್ಲಿ ಖ್ಯಾತ ಸಾಹಿತಿ ಡಾ. ಸಿ.ಪಿ.ಕೆ., ವಕೀಲ ಕೆ.ಎಸ್. ದೊರೆಸ್ವಾಮಿ ಅವರನ್ನು ಕಾಣಬಹುದು.

ಮಹಾತ್ಮ ಗಾಂಧಿಯವರ ಮೆಚ್ಚಿನ ಶಿಷ್ಯರಾದ ತಮ್ಮ ತಂದೆ ಸೀತಾಸುತರವರ ಸತ್ಯ, ಅಹಿಂಸೆ, ನ್ಯಾಯ, ನೀತಿ, ಧರ್ಮ, ಆದರ್ಶ ಗುಣಗಳಿಂದ ಪ್ರೇರಣೆ ಪಡೆದು ತಾವು ನಾಲ್ಕು ಮಂದಿ ಅಣ್ಣತಮ್ಮಂದಿರು ಈ ಟ್ರಸ್ಟ್ ಸ್ಥಾಪಿಸಿದ್ದಾಗಿ ಅವರ ಪುತ್ರ ಡಾ|| ಕೆ. ಎಸ್. ಜಯರಾಂ ತಿಳಿಸಿದರು.

ಈ ಟ್ರಸ್ಟ್‌ನ ವತಿಯಿಂದ ಪ್ರತಿವರ್ಷ ಸೀತಾಸುತ ಅವರ ಜನ್ಮ ದಿನಾಂಕದಂದು ಅವರ ಹೆಸರಿನಲ್ಲಿ 'ಸೀತಾಸುತ ಸಾಹಿತ್ಯ ಪ್ರಶಸ್ತಿ' 'ಸೀತಾಸುತ ದೇಶ ಸೇವಾ ಪ್ರಶಸ್ತಿ' 'ಸೀತಾಸುತ ಸಮಾಜ ಸೇವಾ ಪ್ರಶಸ್ತಿ' ನೀಡುತ್ತಿರುವುದಾಗಿ ಅವರು ಹೇಳಿದರು.



ಸೀತಾಸುತ ಶತಮಾನೋತ್ಸವ ಸಮಾರಂಭ ಹಾಗೂ ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಸಾಂಸ್ಕೃತಿಕ ಟ್ರಸ್ಟ್‌ನ ಉದ್ಘಾಟನಾ ಸಮಾರಂಭದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಜಿ.ನಾರಾಯಣರವರು, ಸೀತಾಸುತ ಅವರ ರಾಮಾಯಣದ ಗುರುಗಳಾದ ವಿದ್ವಾನ್ ರಂಗನಾಥ ಶರ್ಮ ಹಾಗೂ ಹಿರಿಯ ಚಿಂತಕ ಕೊ.ಚನ್ನಬಸಪ್ಪ, ಡಾ|| ಹಾ.ಮಾ.ನಾಯಕ ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು.

15-7-2000ದಂದು ಮಂಡ್ಯ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಹಾಗೂ ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಮಂಡ್ಯ ನಗರದ ವಿವೇಕಾನಂದ ರಂಗ ಮಂದಿರದಲ್ಲಿ ಶತಾಯುಷಿ ಸಾಹಿತಿಗಳಾದ ಸೀತಾಸುತ ಮತ್ತು ಎ.ಎನ್.ಮೂರ್ತಿರಾಯರಿಗೆ ತವರಿನ ಅಭಿನಂದನೆ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಈ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಖ್ಯಾತ ಸಾಹಿತಿ, ಡಾ|| ಸಿ. ಪಿ. ಕೃಷ್ಣಕುಮಾರ್‌ರವರು ''ಹಲವು ಮಹಾಕೃತಿಗಳನ್ನು ರಚಿಸಿಯೂ ಕೂಡ ಎಲೆ ಮರೆಯ ಕಾಯಿಯಂತೆ ಬಾಳುವೆ ನಡೆಸಿದ ಸೀತಾಸುತರದ್ದು ಮೌಲ್ಯಯುತ ಬದುಕು'' ಎಂದು ಹೇಳಿದರು.

ಕನ್ನಡ ಸಾಹಿತ್ಯಕ್ಕೆ ಮಹಾನ್ ಕೊಡುಗೆ ನೀಡಿದಂತಹ ಸೀತಾಸುತ ಎ.ಎನ್.ಮೂರ್ತಿರಾವ್‌ರವರಂತಹ ಶತಾಯುಷಿಗಳು ಬದುಕಿರುವುದು ಕನ್ನಡ ನಾಡಿನ ಸೌಭಾಗ್ಯವಾಗಿದೆ. 'ಕರ್ಮ' ಮಾಡುತ್ತಲೇ ಶತಾಯುಷ್ಯ ಕಂಡವರು ಈರ್ವರು. ಈ ರೀತಿಯ ಕರ್ಮದಿಂದಲೇ ದೀರ್ಘಾಯುಷ್ಯ ಸಾಧ್ಯ. ಕೆಲವರು ಕೇವಲ ಉಸಿರಾಡುತ್ತಾರೆ. ಆದರೆ ಅವರ ಆತ್ಮ ಮೃತವಾಗಿರುತ್ತದೆ. ಸೀತಾಸುತ ಹಾಗೂ ಮೂರ್ತಿರಾಯರು ಹಾಗಲ್ಲ. ಉಸಿರಾಡುತ್ತಲೇ ತಮ್ಮೊಳಗಿನ ಆತ್ಮವನ್ನು ಜೀವಂತ ಇಟ್ಟವರು. ವಯಸ್ಸು ಇವರಿಗೆ ಶಾಪವಾಗುವ ಬದಲು ವರವಾಗಿದೆ ಎಂದವರು ಬಣ್ಣಿಸಿದರು.

ರಾಮಾಯಣಕ್ಕೆ ತಮ್ಮನ್ನು ತಾವೇ ಸಮರ್ಪಿಸಿಕೊಂಡ ಮಹಾಚೇತನ ಸೀತಾಸುತ. ರಾಮಾಯಣಕ್ಕೂ ಮಿಗಿಲಾದುದು ಸೀತಾಯಣ. ಸೀತೆಗೆ ವಾಲ್ಮೀಕಿ 'ಶುಚಿಸ್ಮಿತೆ' ಅಂದಿದ್ದಾರೆ. ಆ 'ಶುಚಿಗುಣ'ವನ್ನು ಸೀತಾಸುತರು ಪಡೆದಿದ್ದಾರೆ. ಎಂದ ಅವರು ಸೀತಾಸುತರದು ಮೌಲ್ಯಯುತವಾದ ಬದುಕು. ಅವರೊಬ್ಬ ಪರಿಪೂರ್ಣ ಸಭ್ಯ-ಸಂಭಾವಿತ ಎಂದು ಶ್ಲಾಘಿಸಿದರು.

ಸೀತಾಸುತರ ಮಹಾ ಕಾವ್ಯಗಳಲ್ಲಿ ಸೃಜನ ಶೀಲತೆಯ ಒಳಹೊರಗು ಕಾಣುತ್ತೇವೆ. ಅವರ ಮಹಾಕೃತಿಗಳು ಕೇವಲ ಭಕ್ತಿಯಿಂದ ಕೂಡಿದ ಭಾವುಕ ವ್ಯಾಖ್ಯಾನವಲ್ಲ. ರಾಮಾಯಣದ ಬಗ್ಗೆ ಅವರಿಗೆ ಶ್ರದ್ಧೆಯಿದೆ. ಆದರೆ ಅದು ಅಂಧಶ್ರದ್ಧೆಯಲ್ಲ. ಅದರಲ್ಲಿ ಆಧುನಿಕತೆಯಿದೆ. ಆದರೆ ಆಧುನಿಕತೆಯ ವಿಕಾರವಿಲ್ಲ ಎಂದು ಡಾ|| ಸಿ.ಪಿ.ಕೆ. ಹೇಳಿದರು.

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ವಿದ್ವಾನ್ ರಂಗನಾಥ ಶರ್ಮರವರು ಮಾತನಾಡಿ 'ಸೀತಾಸುತರ ಬಹುತೇಕ ಕೃತಿಗಳು ರಾಮಾಯಣದಿಂದ ಪ್ರಭಾವಿತವಾದುದಾಗಿವೆ. ರಾಮಾಯಣದ ಬಗ್ಗೆ ಅರಿವು ಬೆಳೆಸಿಕೊಂಡವರು ಉತ್ತಮ ಸಾಹಿತಿಗಳಾಗಿ ರೂಪುಗೊಳ್ಳುತ್ತಾರೆ. ಅಂತಹ ಉತ್ತಮ ಸಾಹಿತಿಗಳಲ್ಲಿ ಸೀತಾಸುತರೂ ಒಬ್ಬರು ಎಂದು ಶ್ಲಾಘಿಸಿದರು.

ನಮ್ಮ ಸಾಧನೆಗಳಿಗೆ ಕೀರ್ತಿ ಪಡೆಯಬೇಕೆಂದರೆ ಪುಣ್ಯಇರಬೇಕು. ಆ ಪುಣ್ಯ ಸೀತಾಸುತರಿಗೆ ಇಲ್ಲವಾಯಿತು ಎಂದ ರಂಗನಾಥಶರ್ಮರವರು ಈ ನಿಟ್ಟಿನಲ್ಲಿ ಸರ್ಕಾರಕ್ಕೆ ಗೌರವ ನೀಡಲು ಯೋಗ್ಯರು ಯಾರೆಂದು ಕಂಡು ಬಾರದಿರುವುದು ದುರ್ದೈವ ಎಂದು ವಿಷಾದಿಸಿದರು.


ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಾ|| ಹಿ.ಶಿ.ರಾಮಚಂದ್ರೇಗೌಡರು ಮಾತನಾಡಿ ಜ್ಞಾನದ ಸಾಧನೆ ಮತ್ತು ಸರಳ ಜೀವನದ ಆದರ್ಶಮೂರ್ತಿಗಳಾಗಿ ಸೀತಾಸುತ ಮತ್ತು ಎ.ಎನ್. ಮೂರ್ತಿರಾಯರು ನಮಗೆಲ್ಲ ಮಾರ್ಗದರ್ಶಕರಾಗಿದ್ದಾರೆ ಎಂದರು.

ಅವರು ಮುಂದುವರಿದು ಮಾತನಾಡಿ ಇಂದು ನಾವು ಶತಾಯುಷಿಗಳನ್ನು ಗುರುತಿಸಬೇಕಿದೆ. ಏಕೆಂದರೆ ಹಿಂದೆ ಸಾಮಾನ್ಯವಾಗಿ ಜನರು ಶತಮಾನಗಳ



ವರೆಗೆ ಬದುಕುತ್ತಿದ್ದರು. ಇಂದು ಸಾಮಾಜಿಕ ಒತ್ತಡ, ಮಾನಸಿಕ ತೊಳಲಾಟಗಳಿಂದ ವಯಸ್ಸು ಕಡಿಮೆಯಾಗಿ ಆತಂಕ ಉಂಟಾಗಿದೆ.ಎಂದ ಅವರು ಶತಾಯುಷಿಗಳಾದ ಸೀತಾಸುತ ಹಾಗೂ ಎ.ಎನ್.ಮೂರ್ತಿರಾಯರು ನೆಮ್ಮದಿಯ ಮಾನವೀಯ ಬದುಕನ್ನು ಬದುಕಿದವರು. ಇವರ ಆದರ್ಶಗಳನ್ನು ಜನತೆ ಮೈಗೂಡಿಸಿಕೊಂಡು ಮಾನವೀಯ ಮೌಲ್ಯಕ್ಕೆ ಹೆಚ್ಚು ಒತ್ತು ಕೊಡಬೇಕೆಂದರು.

ಇದೇ ಸಂದರ್ಭದಲ್ಲಿ ಖ್ಯಾತ ಸಾಹಿತಿ ಚನ್ನಪ್ಪ ಎರೆಸೀಮೆ ಅವರಿಗೆ 'ಸೀತಾಸುತ ಸಾಹಿತ್ಯ ಪ್ರಶಸ್ತಿ'ಯನ್ನು ಖ್ಯಾತ ವೈದ್ಯೆ ಡಾ|| ವಿ.ಟಿ.ಸುಶೀಲಮ್ಮ ಜಯರಾಂ ಪ್ರದಾನ ಮಾಡಿದರು.



27-6-1999ರಂದು ಹಳೇಬೂದನೂರುವಿನಲ್ಲಿ ನಡೆದ ಮಂಡ್ಯ ತಾಲ್ಲೂಕು ಪ್ರಥಮ ಸಾಹಿತ್ಯ ಸಮ್ಮೇಳನವನ್ನು ಸಮ್ಮೇಳನಾಧ್ಯಕ್ಷ ಸೀತಾಸುತರವರು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ಆಗಿನ ಅಧ್ಯಕ್ಷ ಪ್ರೊ. ಎನ್. ಬಸವಾರಾಧ್ಯ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮಾಜಿ ಅಧ್ಯಕ್ಷ ಎಂ. ಲಿಂಗಯ್ಯ ಮುಂತಾದವರನ್ನು ಕಾಣಬಹುದು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಜಿ.ನಾರಾಯಣರವರು ಮಾತನಾಡಿ ಮಂಡ್ಯ ಜಿಲ್ಲೆಯ ಸಾಹಿತಿಗಳಾದ ಎ.ಎನ್.ಮೂರ್ತಿರಾಯರು ಹಾಗೂ ಸೀತಾಸುತ ಶತಾಯುಷಿಗಳಾಗಿರುವುದು ಮಂಡ್ಯ ಜಿಲ್ಲೆಗೆ ಹಾಗೂ ಕನ್ನಡ ಸಾಹಿತ್ಯಕ್ಕೆ ಹೆಮ್ಮೆಯ ಸಂಗತಿಯಾಗಿದೆ. ಮಹಾತ್ಮ ಗಾಂಧಿ ಅವರ ತತ್ವಗಳನ್ನು ತಮ್ಮ ನಿಜ ಬದುಕಿನಲ್ಲಿ ಅಳವಡಿಸಿಕೊಂಡ ಸೀತಾಸುತರ ಇನ್ನೂ ಕೆಲವು ಸಾಧನೆಗಳು ಬೆಳಕಿಗೆ ಬಂದಿಲ್ಲ ಎಂದು ಹೇಳಿದರು.

ಪ್ರಸ್ತುತ ಸಂದರ್ಭದಲ್ಲಿ ಸನ್ಮಾನಕ್ಕೆ ನಾನಾ ಮುಖಗಳಿವೆ. ಈ ನಿಟ್ಟಿನಲ್ಲಿ ಸೀತಾಸುತರಂತಹ ಪರಿಪೂರ್ಣ ಸಾಹಿತಿಗಳನ್ನು ಸಾರ್ವಜನಿಕರು ಹಾಗೂ ಸರ್ಕಾರ ಗುರುತಿಸಿ ಮಾಡುವ ಸನ್ಮಾನ ಮೌಲ್ಯಯುತವಾದುದು ಎಂದು ಅವರು ಹೇಳಿದರು

27-6-1999 ರಂದು ಹಳೇ ಬೂದನೂರುವಿನಲ್ಲಿ ಮಂಡ್ಯ ತಾಲ್ಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಶತಾಯುಷಿ ಸಾಹಿತಿ ಸೀತಾಸುತ ಆ ಸಮ್ಮೇಳನಾಧ್ಯಕ್ಷರಾಗಿದ್ದರು. ಆ ವೇಳೆಗಾಗಲೇ ಅವರು ನೂರರ ಅಂಚಿನಲ್ಲಿದ್ದರು. ನೂರುವರ್ಷದ ಸಾಹಿತಿಯೋರ್ವರು ಸಾಹಿತ್ಯ ಸಮ್ಮೇಳನವೊಂದರ ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದು ಕನ್ನಡ ಸಾಹಿತ್ಯ ಸಮ್ಮೇಳನಗಳ ಇತಿಹಾಸದಲ್ಲಿಯೇ ಇದೇ ಪ್ರಥಮ!

ಅಂದು ಬೆಳಿಗ್ಗೆ 9-45 ಗಂಟೆಗೆ ಗ್ರಾಮದ ಸೋಮೇಶ್ವರ ದೇವಸ್ಥಾನದಿಂದ ಅಲಂಕೃತ ವಾಹನದಲ್ಲಿ ಕನ್ನಡಾಂಬೆ ಭುವನೇಶ್ವರಿಯನ್ನು ಮೆರವಣಿಗೆಯಲ್ಲಿ ಕರೆತರಲಾಯಿತು. ಶಾಲಾಬಾಲಕರು, ದೀಪ ಹಿಡಿದ ಹೆಣ್ಣುಮಕ್ಕಳು ವೀರಗಾಸೆ ಮೆರವಣಿಗೆಯಲ್ಲಿ ಪಾಲ್ಗೊಂಡು ಜನಪದೀಯ ಮೆರುಗನ್ನು ನೀಡಿದವು. ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಹಾದು ಬಂದಾಗ ಹೆಂಗಳೆಯರು ತಾಯಿ ಭುವನೇಶ್ವರಿಗೆ ಆರತಿ ಬೆಳಗಿ ಪೂಜಿಸಲ್ಲಿಸಿದರು. ಎಲ್ಲೆಲ್ಲೂ ಉತ್ಸಾಹ, ಸಂತೋಷದ ಜೊತೆಗೆ ಗ್ರಾಮದಲ್ಲಿ ಹಬ್ಬದ ವಾತಾವರಣ ಉಂಟಾಗಿತ್ತು.



ಸಾಹಿತ್ಯ ಸಮ್ಮೇಳನವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಕನ್ನಡ ಸಾಹಿತ್ಯ ಪರಿಷತ್‌ನ ಆಗಿನ ಅಧ್ಯಕ್ಷರಾಗಿದ್ದ ಪ್ರೊ. ಎನ್. ಬಸವಾರಾಧ್ಯರವರು ಮಾತನಾಡಿ 'ರಾಮಾಯಣದ ಆದರ್ಶ ತತ್ವಗಳನ್ನು ಹಾಗೂ ಸತ್ವವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವ ಸೀತಾಸುತರು ಸಾಹಿತ್ಯ ಕ್ಷೇತ್ರದಲ್ಲಿ ಅಪಾರವಾಗಿ ದುಡಿದಿದ್ದಾರೆ. ಅದರಲ್ಲೂ ವಿಶೇಷವಾಗಿ ರಾಮಾಯಣದಲ್ಲಿ ಬರುವ ಸೀತೆಯ ಪಾತ್ರಕ್ಕೆ ಅತಿ ಹೆಚ್ಚಿನ ಮಹತ್ವ ನೀಡಿ ಆಕೆಯ ಆದರ್ಶಗಳನ್ನು ಸ್ತ್ರೀ ವ್ಯಕ್ತಿತ್ವಗಳನ್ನು ತಮ್ಮ ಕೃತಿಗಳಲ್ಲಿ ಹೊರಹೊಮ್ಮಿಸಿದ್ದಾರೆ ಎಂದು ಶ್ಲಾಘಿಸಿದರು.

ಸಾಹಿತ್ಯ ಪರಿಷತ್ತಿನ ಪರವಾಗಿ ಪ್ರೊ. ಎನ್. ಬಸವಾರಾಧ್ಯರು ಸಮ್ಮೇಳನಾಧ್ಯಕ್ಷ ಸೀತಾಸುತರವರಿಗೆ ಶಾಲು ಹೊದಿಸಿ ನೆನಪಿನ ಫಲಕ ನೀಡಿ ಗೌರವಿಸಿದರು.



ಜಿಲ್ಲಾ ದಲಿತ ಮಂಡ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಹಿರಿಯ ಸಾಹಿತಿಗಳಿಗೆ ತವರಿನ ನಮನ ಕಾರ್ಯಕ್ರಮದಲ್ಲಿ ಸೀತಾಸುತ, ಕೆ.ಎಸ್. ನರಸಿಂಹಸ್ವಾಮಿ ಹಾಗೂ ಎ.ಎನ್. ಮೂರ್ತಿರಾಯರು. ಚಿತ್ರದಲ್ಲಿ ಆಗಿನ ಜಿಲ್ಲಾಧಿಕಾರಿ ಎಲ್.ಕೆ. ಅತೀಕ್ ಅವರನ್ನು ಕಾಣಬಹುದು.

ಸೀತಾಸುತರವರು ಮಾಡಿದ ಚುಟುಕಾದ ಅಧ್ಯಕ್ಷೀಯ ಭಾಷಣದಲ್ಲಿ ತಮ್ಮನ್ನು ಮಂಡ್ಯ ತಾಲ್ಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿದ್ದಕ್ಕೆ ವಂದಿಸುತ್ತಾ ನಾಡಿನಲ್ಲಿ ಸಾಹಿತ್ಯ ಸಮ್ಮೇಳನಗಳು ವಿದ್ಯಾವಂತರು ಹೆಚ್ಚಾಗಿರುವ ನಗರ, ಪಟ್ಟಣಗಳಲ್ಲಿ ನಡೆಯುತ್ತಿವೆ. ಆದರೆ ಈ ಸಮ್ಮೇಳನದ ಸಂಘಟಕರು ಅಂತಹ ಸಂಪ್ರದಾಯವನ್ನು ಮುಂದುವರೆಸದೇ ಹಳ್ಳಿಯಲ್ಲಿ ನಡೆಸುತ್ತಿರುವುದು ಅತ್ಯಂತ ಸಂತೋಷ. ಇದು ಗ್ರಾಮೀಣ ಪ್ರದೇಶದಲ್ಲಿ ಜನರು ವಿದ್ಯಾವಂತರಾಗುತ್ತಿರುವುದರ ಕುರುಹು. ಗ್ರಾಮೀಣ ಪ್ರದೇಶದ ಬಗ್ಗೆ ಸಾಹಿತ್ಯಕೃಷಿ ಹೆಚ್ಚಾಗಿ ನಡೆಯಲಿ ಎಂದು ಆಶಿಸಿದರು.

ವೃದ್ಧಾಪ್ಯದ ಕಾರಣದಿಂದ ಅವರು ಹೆಚ್ಚು ಮಾತನಾಡಲಾಗಲಿಲ್ಲ. ಸೀತಾಸುತ ಅವರ ಪುತ್ರ ಡಾ॥ ಕೆ.ಎಸ್.ಜಯರಾಂರವರು ತಮ್ಮ ತಂದೆ ಹೇಳುತ್ತಿದ್ದ ಕೆಲವು ಮಾತುಗಳು ಹಾಗೂ ನೆನಪುಗಳನ್ನು ಸಭಿಕರ ಮುಂದೆ ತೆರೆದಿಟ್ಟರು.

ತಮ್ಮ ಇಳಿವಯಸ್ಸಿನಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿ ವಿಮರ್ಶಕರು, ವಿದ್ವಾಂಸರು ಹಾಗೂ ಸಾಹಿತ್ಯಾಸಕ್ತರಿಂದ ಅಪಾರ ಮೆಚ್ಚುಗೆಗಳಿಸಿದ ಸೀತಾಸುತರವರು ಶತಾಯುಷಿಯಾಗಿ ಬಾಳಿ 2-4-2003ರಂದು ವಿಧಿವಶರಾದರು.

ಸೀತಾಸುತರವರು ನಿಧನರಾಗುವ 15 ದಿನಗಳ ಮುಂಚೆ ಯಮಧರ್ಮರಾಯ ಕೋಣನ ಮೇಲೆ ಕುಂತು ಅವರ ಕನಸಿನಲ್ಲಿ ಬಂದು 'ನಿನ್ನ ಆಯುಸ್ಸು ಮುಗಿಯಿತು. ಬಾನನ್ನೊಡನೆ' ಎಂದು ಕರೆದಂತಾಯಿತಂತೆ. ಆಗ ಸೀತಾಸುತರು 'ನಾಬರೊಲ್ಲ, ಇನ್ನೂ ಬದುಕಬೇಕು' ಎಂದು ಕಿರುಚಿಕೊಂಡರಂತೆ. ಅದರ ಮಾರನೇ ದಿನದ ರಾತ್ರಿ ಕುಲದೇವತೆ ಈಚಗೆರೆ ಹಿರಿಯಮ್ಮ ಕನಸಿನಲ್ಲಿ ಪ್ರತ್ಯಕ್ಷಳಾಗಿ 'ಪ್ರಪಂಚವನ್ನು ದೀರ್ಘಕಾಲ ನೋಡಿದ್ದಾಯ್ತಲ್ಲ. ನನ್ನೊಡನೆ ಬಾಕಂದ' ಎಂದು ಮಾತೃವಾತ್ಸಲದಿಂದ ಕರೆದಂತಾಗಿ ಸೀತಾಸುತರವರು 'ಸಂತೋಷದಿಂದ ಬರ್ತೀನೆ ಅಮ್ಮಾ' ಎಂದರಂತೆ. ಈ ಸಂಗತಿಯನ್ನು ತಮ್ಮ ತಂದೆ ಹೇಳಿದರೆಂದು ಸೀತಾಸುತರವರ ಎರಡನೇ ಮಗ ಕೆ.ಎಸ್. ಶ್ರೀಕಂಠಸ್ವಾಮಿ ತಿಳಿಸಿದರು. ಸೀತಾಸುತರವರ



ಚಿತಾಭಸ್ಮವನ್ನು ಅವರ ಹಿರಿಯ ಮಗ ವಕೀಲ ಕೆ.ಎಸ್. ದೊರೆಸ್ವಾಮಿರವರು ಗಯಾದ ಫಲ್ಗುಣಿ ನದಿಯಲ್ಲಿ ವಿಸರ್ಜನೆ ಮಾಡಿದರು.

## ಸೀತಾಸುತರವರ ಮನೆಗೆ ರಾಷ್ಟ್ರಕವಿ ಕುವೆಂಪು ಹಾಗೂ ಡಾ॥ ಶಿವರಾಮಕಾರಂತರ ಭೇಟಿ

1977ರಲ್ಲಿ ಸೀತಾಸುತ ಅವರ 'ಊರ್ಮಿಳಾದರ್ಶನ' ಕೃತಿ ಬೆಂಗಳೂರಿನ ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರದಿಂದ ಪ್ರಕಟವಾಯಿತು. ಈ ಕೃತಿ ಪ್ರಕಟವಾದ ನಾಲ್ಕಾರು ತಿಂಗಳ ನಂತರ ಕುವೆಂಪು ತಮ್ಮ ಸಹಪಾಠಿ ಮಂಡ್ಯದ ವಕೀಲ ಪಿ.ಮಲ್ಲಯ್ಯನವರ ಜೊತೆಯಲ್ಲಿ ಸೀತಾಸುತ ಅವರ ಮನೆಗೆ ಬಂದಿದ್ದರು. ಈ ಸಂದರ್ಭದಲ್ಲಿ ಅವರು 'ಊರ್ಮಿಳಾದರ್ಶನ' ಕೃತಿಯ ಬಗ್ಗೆ ಚರ್ಚೆ ನಡೆಸಿದರು. ನಂತರ ಕುವೆಂಪು ''ಊರ್ಮಿಳೆಯನ್ನು ನೀವು ಇಷ್ಟೊಂದು ಭವ್ಯವಾಗಿ ಕಂಡಿದ್ದೀರಿ'' ಎಂದು ಸೀತಾಸುತರವರ ಸಾಹಿತ್ಯ ಕೃಷಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ತಮಗೆ ಜ್ಞಾನಪೀಠ ಪ್ರಶಸ್ತಿ ಬಂದ ಒಂದೆರಡು ತಿಂಗಳ ನಂತರ ಕಡಲತಡಿಯ ಭಾರ್ಗವ ಡಾ. ಕೆ. ಶಿವರಾಮಕಾರಂತರು ಎಂ.ಟಿ.ಆರ್. ಹೋಟೆಲ್ ಮಾಲೀಕರೊಡನೆ ಸೀತಾಸುತ ಅವರ ಮನೆಗೆ ಬಂದಿದ್ದರು. ಡಾ. ಕಾರಂತರು ಹಾಗೂ ಸೀತಾಸುತರವರು ಒಂದು ಗಂಟೆಗೂ ಹೆಚ್ಚು ಕಾಲ ಸಬರಮತಿ ಆಶ್ರಮದ ನೆನಪುಗಳನ್ನು ಮೆಲುಕು ಹಾಕಿದರು. ಹಾಗೆಯೇ ಸಾಹಿತ್ಯದ ಬಗ್ಗೆ ಚರ್ಚೆ ನಡೆಸಿದರು. ಆತಿಥ್ಯ ಸ್ವೀಕರಿಸಿದ ಡಾ. ಶಿವರಾಮಕಾರಂತರು ಕೊನೆಯಲ್ಲಿ ಸೀತಾಸುತರ ಆಶೀರ್ವಾದ ಪಡೆದು ಬೆಂಗಳೂರಿಗೆ ಹೋದರೆಂದು ಸೀತಾಸುತರವರ ಹಿರಿಯ ಮಗ ವಕೀಲ ಕೆ.ಎಸ್. ದೊರೆಸ್ವಾಮಿ ತಿಳಿಸಿದರು.

ಇದಲ್ಲದೆ ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಉಪಕುಲಪತಿ ನಾಡೋಜ ಡಾ. ದೇ.ಜ.ಗೌ.ರವರು ಒಂದೆರಡು ಬಾರಿ ಸೀತಾಸುತ ಅವರ ಮನೆಗೆ ಬಂದಿದ್ದರು.

ಡಾ. ಹಾ.ಮಾ.ನಾಯಕರು 'ಸುಧಾ' (12-8-1999 ಸಂಪುಟ 35, ಸಂಚಿಕೆ 33) ಸಾಂಪ್ರತ ವಿಭಾಗದಲ್ಲಿ 'ಸೀತಾಸುತ' ಸಿದ್ದೇಗೌಡರನ್ನು ಕುರಿತು ಹೃದಯಸ್ಪರ್ಶಿ ವ್ಯಕ್ತಿ ವಿಶೇಷವನ್ನೇ ಬರೆದಿದ್ದಾರೆ. ಇದರಲ್ಲಿ ಒಂದು ಕಡೆ


'ಸೀತಾಸುತ' ಸಿದ್ದೇಗೌಡರು

ಸುಧಾ ವಾರಪತ್ರಿಕೆಯಲ್ಲಿ ಡಾ॥ ಹಾ.ಮಾ. ನಾಯಕರವರು ಸೀತಾಸುತ ಅವರನ್ನು ಕುರಿತು ಬರೆದ ವ್ಯಕ್ತಿ ಪರಿಚಯ.



ಡಾ. ಹಾ.ಮಾ.ನಾಯಕರು ''ಸೀತಾಸುತ'' ಸಿದ್ದೇಗೌಡರು ಆಳವಾದ ಅಧ್ಯಯನಕ್ಕೆ ಅರ್ಹರಾದವರು. ಗೌರವ ಮೆಚ್ಚುಗೆಗಳಿಗೆ ಪಾಲುದಾರರು. ಆದರೆ ಸಮಕಾಲೀನ ವಿಮರ್ಶೆ ಅವರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಅವರ ರಾಮಾಯಣವನ್ನು ಕುರಿತ ಎರಡು ಉದ್ಗ್ರಂಥಗಳಾಗಲಿ 'ಹಿರೋಷೀಮಾ'ವನ್ನು ಕುರಿತ ಮಹಾಕಾವ್ಯವಾಗಲಿ ಪ್ರತ್ಯೇಕ ಅಧ್ಯಯನವನ್ನೇ ಅಪೇಕ್ಷಿಸುತ್ತವೆ. ಕಾಲಕ್ಕಿಂತ ದೊಡ್ಡ ವಿಮರ್ಶಕ ಬೇರೆ ಇಲ್ಲ ! ಇವತ್ತು ನಿರ್ಲಕ್ಷ್ಯಕ್ಕೆ ಒಳಗಾದ ಸಿದ್ದೇಗೌಡರು ನಾಳೆ ಮರೆತು ಹೋಗುವವರಲ್ಲ ! ಅವರ ಪ್ರತಿಭೆ, ಒಳನೋಟಗಳು ಬಹಳ ಕಾಲದವರೆಗೆ ಸಹೃದಯ ಓದುಗರನ್ನು ಆಕರ್ಷಿಸುತ್ತಲೇ ಇರುತ್ತವೆ; ತಮ್ಮ ಕಡೆಗೆ ಸೆಳೆಯುತ್ತಲೇ ಇರುತ್ತವೆ'' ಎಂದಿದ್ದಾರೆ.

## ಸೀತಾಸುತರವರ ಕುಟುಂಬ ವರ್ಗ

ಕೆ.ಸಿದ್ದೇಗೌಡ (ಸೀತಾಸುತ) -ದೇವಮ್ಮ ದಂಪತಿಗಳಿಗೆ ನಾಲ್ವರು ಗಂಡು ಮಕ್ಕಳು ಹಾಗೂ ಐದು ಮಂದಿ ಹೆಣ್ಣು ಮಕ್ಕಳು. ಗಂಡು ಮಕ್ಕಳು ಕೆ.ಎಸ್.ದೊರೆಸ್ವಾಮಿ, ಕೆ.ಎಸ್.ಶ್ರೀಕಂಠಸ್ವಾಮಿ, ಡಾ॥ ಕೆ.ಎಸ್.ಜಯರಾಂ ಹಾಗೂ ಡಾ॥ ಕೆ.ಎಸ್.ಕೃಷ್ಣಪ್ಪ, ಹೆಣ್ಣುಮಕ್ಕಳು ಗೌರಮ್ಮ, ಯಶೋದಮ್ಮ, ಸುವರ್ಣಮ್ಮ, ಶಾರದಮ್ಮ ಹಾಗೂ ಗಾಯತ್ರಮ್ಮ.

ಸೀತಾಸುತರವರ ಮೂರು ಮಂದಿ ಗಂಡು ಮಕ್ಕಳು ಮಂಡ್ಯನಗರದಲ್ಲಿ ನೆಲೆಸಿದ್ದರೆ, ಕೊನೆಯ ಮಗ ಡಾ॥ ಕೆ.ಎಸ್.ಕೃಷ್ಣಪ್ಪ ನ್ಯೂಯಾರ್ಕ್‌ನಲ್ಲಿ ವೈದ್ಯರಾಗಿದ್ದಾರೆ.

ಸೀತಾಸುತರವರ ಮೊದಲನೇ ಮಗ ಕೆ.ಎಸ್. ದೊರೆಸ್ವಾಮಿರವರು ಮಂಡ್ಯದಲ್ಲಿ ವಕೀಲರಾಗಿದ್ದಾರೆ. ಸರಳ, ಸೌಜನ್ಯ, ಸಜ್ಜನಿಕೆಯೇ ಮೈವೆತ್ತಂತಿರುವ ಕೆ.ಎಸ್.ದೊರೆಸ್ವಾಮಿ ಅವರ ಧರ್ಮಪತ್ನಿ ಲಕ್ಷ್ಮೀದೇವಮ್ಮ. ಲಕ್ಷ್ಮೀದೇವಮ್ಮನವರು ಕೆ.ಆರ್.ಪೇಟೆ ತಾಲ್ಲೂಕು ಕೊಟ್ಟಿಕೆರೆ ಸುಬ್ಬೇಗೌಡರ ಮಗಳು. ಕೆ.ಎಸ್.ದೊರೆಸ್ವಾಮಿರವರು ಮಂಡ್ಯ



ಸೀತಾಸುತರವರು ತಮ್ಮ ಕುಟುಂಬದವರೊಂದಿಗೆ







ಸೀತಾಸುತರವರ ಪುತ್ರರು ಡಾ॥ ಕೆ.ಎಸ್. ಕೃಷ್ಣಪ್ಪ, ವಕೀಲ ಕೆ.ಎಸ್. ದೊರೆಸ್ವಾಮಿ, ಡಾ॥ ಕೆ.ಎಸ್. ಜಯರಾಂ, ಕೆ.ಎಸ್. ಶ್ರೀಕಂಠಸ್ವಾಮಿರವರು.




ಶ್ರೀಮತಿ ಲಕ್ಷ್ಮೀದೇವಮ್ಮ ಕೆ.ಎಸ್.ದೊರೆಸ್ವಾಮಿರವರು



ಶ್ರೀಮತಿ ವಿಮಲಮ್ಮ ಕೆ.ಎಸ್. ಶ್ರೀಕಂಠಸ್ವಾಮಿ






ಡಾ|| ವಿ.ಟಿ. ಸುಶೀಲಮ್ಮ ಡಾ|| ಕೆ.ಎಸ್. ಜಯರಾಂ



ಮಂಡ್ಯ, ವಿದ್ಯಾನಗರದ ತಮ್ಮ ಮನೆ ಮುಂದಿನ ಉದ್ಯಾನವನದ ಪಕ್ಕದಲ್ಲಿ ಡಾ|| ಕೆ.ಎಸ್. ಜಯರಾಂರವರು ಉಚಿತ ಪಶು ಚಿಕಿತ್ಸೆ ನೀಡುತ್ತಿರುವುದು.



2000ನೇ ಇಸವಿಯಲ್ಲಿ ಉಚಿತ ಪಶು ಚಿಕಿತ್ಸೆಗಾಗಿ ಡಾ॥ ಕೆ.ಎಸ್. ಜಯರಾಂ ಅವರಿಗೆ ಆಗಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು.





2000ನೇ ಇಸವಿಯಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪಡೆದ ಡಾ॥ ಕೆ.ಎಸ್. ಜಯರಾಂರವರು ಆಗಿನ ರಾಜ್ಯಪಾಲರಾದ ಶ್ರೀಮತಿ ರಮಾದೇವಿರವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರೊಂದಿಗೆ



2004ರಲ್ಲಿ ಮಂಡ್ಯ ಜಿಲ್ಲಾ ರೈತರು ಮಂಡ್ಯದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿರವರು ಡಾ|| ಕೆ.ಎಸ್. ಜಯರಾಂರವರಿಗೆ ಬೆಳ್ಳಿ ಕಿರೀಟಧಾರಣೆ ಮಾಡಿ ಸನ್ಮಾನಿಸುತ್ತಿರುವುದು.



ವಕೀಲರ ಸಂಘದ ಅಧ್ಯಕ್ಷರಾಗಿದ್ದರು. ಹಾಗೆಯೇ ಅವರು ತಮ್ಮ ತಂದೆ ತಾಯಿಗಳ ಹೆಸರಿನಲ್ಲಿ ಸ್ಥಾಪಿಸಲಾಗಿರುವ ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರು.

ಕೆ.ಎಸ್.ದೊರೆಸ್ವಾಮಿ -ಲಕ್ಷ್ಮೀದೇವಮ್ಮ ದಂಪತಿಗಳಿಗೆ ಒಬ್ಬ ಮಗ ಹಾಗೂ ಒಬ್ಬ ಮಗಳು. ಮಗ ಡಾ|| ಕೆ. ಎಸ್.ಎಸ್.ಆನಂದ್ ಮಂಡ್ಯ ವೈದ್ಯಕೀಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಮಗಳು ಡಾ|| ಕೆ.ಎಸ್.ಪ್ರಿಯದರ್ಶಿನಿ ಅವರು ಆದಿಚುಂಚನಗಿರಿ ವೈದ್ಯಕೀಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

ಸೀತಾಸುತರವರ ಎರಡನೇ ಮಗ ಕೆ.ಎಸ್.ಶ್ರೀಕಂಠಸ್ವಾಮಿ ಕೃಷಿಕರು. ಕೆ.ಎಸ್.ಶ್ರೀಕಂಠಸ್ವಾಮಿ ಅವರ ಧರ್ಮಪತ್ನಿ ವಿಮಲಮ್ಮ ತಡಗವಾಡಿ ಮುದ್ದೇಗೌಡರ ಮಗಳು. ಕೆ.ಎಸ್.ಶ್ರೀಕಂಠಸ್ವಾಮಿ -ವಿಮಲಮ್ಮ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು. ಹಿರಿಯ ಮಗ ಕೆ.ಎಸ್.ಎಸ್. ರಾಜೇಂದ್ರ, ವಕೀಲರಾಗಿದ್ದಾರೆ. ಎರಡನೇ ಮಗ ಕೆ.ಎಸ್.ಶಚೀಂದ್ರ, ಮೈಸೂರಿನ ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿದ್ದಾರೆ.

ಸೀತಾಸುತರವರ ಮೂರನೇ ಮಗ ಡಾ||ಕೆ.ಎಸ್.ಜಯರಾಂ ಪಶುವೈದ್ಯರು. 25 ವರ್ಷಗಳಕಾಲ ಪಶುವೈದ್ಯರಾಗಿ ಮಳವಳ್ಳಿ ಹಾಗೂ ಮಂಡ್ಯದಲ್ಲಿ ಸೇವೆ ಸಲ್ಲಿಸಿ ಜನಾನುರಾಗಿಗಳಾಗಿದ್ದಾರೆ. 1998ರಲ್ಲಿ ಸರ್ಕಾರಿ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದ ಡಾ|| ಕೆ.ಎಸ್.ಜಯರಾಂರವರು ಅಂದಿನಿಂದ ಉಚಿತ ಪಶುಚಿಕಿತ್ಸೆ ನೀಡುತ್ತಾ ಹಳ್ಳಿಗಾಡಿನ ರೈತಾಪಿ ಜನರ ಪ್ರೀತ್ಯಾದರ ಗೌರವಗಳಿಗೆ ಪಾತ್ರರಾಗಿದ್ದಾರೆ. ಕಳೆದ ಹತ್ತು ವರ್ಷಗಳಿಂದ ಅವರು ಪ್ರತಿದಿನ 50-60 ಪ್ರಾಣಿಗಳಿಗೆ ಉಚಿತ ಚಿಕಿತ್ಸೆ ನೀಡುತ್ತಿರುವುದು ಕರ್ನಾಟಕದ ಪಶುವೈದ್ಯ ಚಿಕಿತ್ಸೆಯ ಇತಿಹಾಸದಲ್ಲಿಯೇ ಒಂದು ದಾಖಲೆ. ''ನಾನು ಜನಗಳ ಮುಖ ನೋಡಿ ಚಿಕಿತ್ಸೆ ಮಾಡುವುದಿಲ್ಲ. ದನಗಳ ಮುಖನೋಡಿ ಚಿಕಿತ್ಸೆ ಮಾಡುತ್ತೇನೆ'' ಎನ್ನುವ ಅವರ ಹೃದಯಾಂತರಾಳದ ಮಾತು ಅವರ ಪ್ರಾಣಿ ಪ್ರೀತಿಗೆ ದ್ಯೋತಕವಾಗಿದೆ. ಬೆಳಗಾಗುವ ಹೊತ್ತಿಗೇ ಹಳ್ಳಿಗಳಿಂದ ರೈತರು

ತಮ್ಮ ದನಗಳಿಗೆ ಚಿಕಿತ್ಸೆ ಕೊಡಿಸಲು ಅವರ ಮನೆ ಮುಂದೆ ಕಾಯುತ್ತಿರುತ್ತಾರೆ. ಪಶು ಸಮೇತ. ಹೃದಯವಂತ ಪಶುವೈದ್ಯ ಡಾ॥ ಕೆ.ಎಸ್. ಜಯರಾಂರವರು ತಮ್ಮ ಮನೆ ಮುಂದೆ ಬಂದು ನಿಂತ ಪಶುಗಳಿಗೆ ಚಿಕಿತ್ಸೆ ನೀಡುವುದಷ್ಟೇ ಅಲ್ಲದೆ, ಕರೆದ ರೈತರ ಜೊತೆಯಲ್ಲಿ ಹಳ್ಳಿಗಳಿಗೂ ಹೋಗಿ ನಡೆಯಲು ಸಾಧ್ಯವಾಗದೆ ನಿತ್ರಾಣವಾಗಿರುವ ಪಶುಗಳಿಗೂ ಉಚಿತ ಚಿಕಿತ್ಸೆ ನೀಡಿ ತಮ್ಮ ಹೃದಯ ಶ್ರೀಮಂತಿಕೆಯನ್ನು ಮೆರೆಯುತ್ತಿದ್ದಾರೆ. ಆರಂಭಗಾರರ ಪ್ರೀತಿಯ 'ಬಸವಣ್ಣ ದೇವರಿಗೆ ಉಚಿತ ಚಿಕಿತ್ಸೆ ನೀಡುವ ಮೂಲಕ ಡಾ॥ ಕೆ.ಎಸ್. ಜಯರಾಂರವರು ಒಕ್ಕಲು ಮಕ್ಕಳಿಗೆ ; ಕೃಷಿಲೋಕಕ್ಕೆ ತಮ್ಮ ಸೇವೆ ಸಲ್ಲಿಸುತ್ತಿದ್ದಾರೆ.

ಪಶುಗಳಿಗೆ ಉಚಿತ ಚಿಕಿತ್ಸೆ ನೀಡುತ್ತಾ ರೈತರ ಪ್ರೀತಿಗೆ ಪಾತ್ರರಾಗಿರುವ ಡಾ॥ ಕೆ.ಎಸ್. ಜಯರಾಂರವರ ಪಶು ವೈದ್ಯ ಸೇವೆಯನ್ನು ಗುರುತಿಸಿ ಮಂಡ್ಯ ಜಿಲ್ಲಾ ಆಡಳಿತ 1998ರ ನವೆಂಬರ್ 1 ರಂದು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಹಾಗೆಯೇ ಇವರಿಗೆ 2000ನೇ ಇಸವಿಯಲ್ಲಿ ಹೈದರಾಬಾದ್‌ನಲ್ಲಿ 'ಭಾರತ್ ನಿರ್ಮಾಣ ಎಕ್ಸಲೆನ್ಸ್' ಆವಾರ್ಡ್ ಲಭಿಸಿದೆ.

ಮೈಸೂರು ಮಾನಸ ಗಂಗೋತ್ರಿ ಒಕ್ಕಲಿಗರ ಜಾಗೃತಿ ವೇದಿಕೆಯು ತನ್ನ 12ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಡಾ॥ ಕೆ.ಎಸ್. ಜಯರಾಂ ಅವರನ್ನು ಸನ್ಮಾನಿಸಿದೆ.

28-11-2003ರಂದು ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭದಲ್ಲಿ ಡಾ॥ ಕೆ.ಎಸ್. ಜಯರಾಂ ಅವರಿಗೆ 'ಇನಾಗ್ಯುರೇಷನ್ ಆಫ್ ಸ್ಟೂಡೆಂಟ್ ಆವಾರ್ಡ್ ನೀಡಿ ಗೌರವಿಸಲಾಗಿದೆ.

ಮಂಡ್ಯದ ಜನದನಿ ಸಾಂಸ್ಕೃತಿಕ ಸಂಘಟನೆ 2001ರಲ್ಲಿ ಡಾ॥ ಕೆ.ಎಸ್. ಜಯರಾಂ ಅವರಿಗೆ ವೈದ್ಯಕೀಯ ಸೇವೆಗಾಗಿ ಪ್ರಶಸ್ತಿ ನೀಡಿ ಸನ್ಮಾನಿಸಿದೆ.

2004ರಲ್ಲಿ ಮಂಡ್ಯ ಜಿಲ್ಲಾ ರೈತರು ಮಂಡ್ಯದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಅದ್ದೂರಿ ಸಮಾರಂಭವನ್ನು ಏರ್ಪಡಿಸಿದ್ದರು.



ತಮ್ಮ ಪಶುಗಳಿಗೆ ಉಚಿತ ಚಿಕಿತ್ಸೆ ನೀಡುತ್ತಿರುವ ಡಾ॥ ಕೆ.ಎಸ್. ಜಯರಾಂ ಅವರ ಸೇವೆಯನ್ನು ಗೌರವಿಸಿ ಅವರಿಗೆ 'ಬೆಳ್ಳಿ ಕಿರೀಟ' ಧಾರಣೆ ಮಾಡಿ ತಮ್ಮ ಹರ್ಷ ವ್ಯಕ್ತಪಡಿಸಿದರು. ನಮ್ಮಲ್ಲಿ ರಾಜಕಾರಣಿಗಳಿಗೆ ಬೆಳ್ಳಿಗದೆ ನೀಡಿರುವ ಕಿರೀಟ ತೊಡಿಸಿರುವ ಖಡ್ಗ ನೀಡಿರುವ ಉದಾಹರಣೆ ಗಳಿವೆ. ಆದರೆ ಪ್ರಾಣಿ ಪ್ರೀತಿಯ ವೈದ್ಯರೋರ್ವರಿಗೆ ಅನ್ನದಾತರು ಬೆಳ್ಳಿ ಕಿರೀಟ ಧಾರಣೆ ಮಾಡಿ ಸಂಭ್ರಮಿಸಿದ ಉದಾಹರಣೆ. ಕರ್ನಾಟಕದಲ್ಲಿ ಇದೊಂದೇ. ಇದಲ್ಲದೆ ಡಾ॥ ಕೆ.ಎಸ್.ಜಯರಾಂ ಅವರನ್ನು ಮಂಡ್ಯ ತಾಲ್ಲೂಕಿನ ಪ್ರತಿಯೊಂದು ಗ್ರಾಮದವರೂ ಸನ್ಮಾನಿಸಿರುವುದು ಒಂದು ದಾಖಲೆಯೇ ಆಗಿದೆ.

ಡಾ॥ ಕೆ.ಎಸ್.ಜಯರಾಂ ಅವರನ್ನು ಕರ್ನಾಟಕ ರಾಜ್ಯ ಪ್ರಾಣಿ ದಯಾಸಂಘ, ಡಾ॥ ಜೀ.ಶಂ.ಪ.ಸಾಹಿತ್ಯ ವೇದಿಕೆ, ಕರ್ನಾಟಕ ರಕ್ಷಣಾ ವೇದಿಕೆ, ರೋಟರಿ, ಲಯನ್ಸ್ ಮತ್ತಿತರ ಸಂಘ ಸಂಸ್ಥೆಗಳು ಆತ್ಮೀಯವಾಗಿ ಸನ್ಮಾನಿಸಿವೆ.

ಇವೆಲ್ಲದಕ್ಕೂ ಕಲಶವಿಟ್ಟಂತೆ ಡಾ॥ ಕೆ.ಎಸ್.ಜಯರಾಂ ಅವರಿಗೆ 2000ನೇ ಇಸವಿಯಲ್ಲಿ ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ರಾಷ್ಟ್ರಕವಿ ಕುವೆಂಪು ಹಾಗೂ ಅವರ ಸುಪುತ್ರ ಕೆ.ಪಿ. ಪೂರ್ಣಚಂದ್ರತೇಜಸ್ವಿ ಈರ್ವರು ಸಾಧಕರು ಪಂಪ ಪ್ರಶಸ್ತಿ ಪುರಸ್ಕೃತರಾದಂತೆ, ಸಾಹಿತ್ಯ ಕ್ಷೇತ್ರದಲ್ಲಿನ ಅಪ್ರತಿಮ ಸಾಧನೆಗಾಗಿ ಸೀತಾಸುತ ಅವರಿಗೆ ಕರ್ನಾಟಕ ಸರ್ಕಾರ 1997ನೇ ಇಸವಿಯಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿದ್ದರೆ, ಅವರ ಮಗ ಡಾ॥ ಕೆ.ಎಸ್. ಜಯರಾಂ ಅವರಿಗೆ 2000ನೇ ಇಸವಿಯಲ್ಲಿ ಉಚಿತ ಪಶುಚಿಕಿತ್ಸೆಗಾಗಿ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ತಂದೆ ಮಗ ಇಬ್ಬರೂ ಕರ್ನಾಟಕ ಸರ್ಕಾರ ನೀಡುವ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿರುವುದು ಒಂದು ದಾಖಲೆ.

2004ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಡಾ॥ ಕೆ.ಎಸ್. ಜಯರಾಂ ಮಂಡ್ಯ ಕ್ಷೇತ್ರದಿಂದ ಜೆ.ಡಿ.ಯು ಪಕ್ಷದಿಂದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಅವರು ಒಂದು ಲಕ್ಷಕ್ಕೂ ಹೆಚ್ಚು ಮತಗಳಿಸಿದ್ದರು.

ಡಾ॥ ಕೆ.ಎಸ್.ಜಯರಾಂರವರ ಧರ್ಮಪತ್ನಿ ಡಾ॥ ವಿ.ಟಿ.ಸುಶೀಲಮ್ಮ, ಡಾ॥ ವಿ.ಟಿ.ಸುಶೀಲಮ್ಮನವರು ಕರ್ನಾಟಕದ ಕಾಶ್ಮೀರ ಕೊಡುಗು ಜಿಲ್ಲೆ ವಿರಾಜಪೇಟೆಯ ತಮ್ಮಯ್ಯ ಮತ್ತು ಪುಟ್ಟಮ್ಮನವರ ಮಗಳು. ಡಾ॥ ವಿ.ಟಿ.ಸುಶೀಲಮ್ಮ ಎಂ.ಬಿ.ಬಿ.ಎಸ್. ರವರು 1979ರಲ್ಲಿ ಸರ್ಕಾರಿ ವೈದ್ಯವೃತ್ತಿಗೆ ರಾಜೀನಾಮೆ ನೀಡಿ ಮಂಡ್ಯದಲ್ಲಿ ಸ್ವಂತವಾಗಿ ರಾಮಕೃಷ್ಣ ನರ್ಸಿಂಗ್‌ಹೋಂ (ಸುಶೀಲಮ್ಮ ಪಾಪ್) ಆರಂಭಿಸಿದರು. ಆ ನರ್ಸಿಂಗ್ ಹೋಂ ಎಷ್ಟು ಜನಾದರಣೀಯ ವಾಯಿತೆಂದರೆ ಜನ ಅದನ್ನು ಸುಶೀಲಮ್ಮ ಪಾಪ್ ಎಂದೇ ಕರೆಯ ತೊಡಗಿದರು.

ಡಾ॥ ಕೆ.ಎಸ್. ಜಯರಾಂ, ಡಾ॥ ವಿ.ಟಿ.ಸುಶೀಲಮ್ಮ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು, ಹಿರಿಯ ಮಗ ಡಾ॥ ಕೆ.ಜೆ.ದಿನೇಶ್ ಹಾಗೂ ಕಿರಿಯ ಮಗ ಕೆ.ಜೆ.ಕೌಶಿಕ್, ಡಾ॥ ದಿನೇಶ್ ಅವರ ಧರ್ಮಪತ್ನಿ ಡಾ॥ ಡಿ.ಉಷಾರಾಣಿ ಅವರು ಹಾಸನದ ಶ್ರೀಮತಿ ಮೀನಾಕ್ಷಿ ಮತ್ತು ಆರ್.ಡಿ.ಗೌಡರ ಮಗಳು. ಡಾ॥ ಕೆ.ಜೆ.ದಿನೇಶ್‌ರವರು ತಮ್ಮ ತಾಯಿಯ ನಿಧನಾ ನಂತರ ಶ್ರೀರಾಮಕೃಷ್ಣ ನರ್ಸಿಂಗ್ ಹೋಂ ಅನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಅವರ ಪತ್ನಿ ಡಾ॥ ಡಿ.ಉಷಾರಾಣಿರವರೂ ಸಹ ಅಲ್ಲಿಯೇ ವೈದ್ಯೆಯಾಗಿದ್ದಾರೆ. (ಗರ್ಭಿಣಿ ಮತ್ತು ಸ್ತ್ರೀರೋಗ ತಜ್ಞರು) ಮಗ ಹಾಗೂ ಸೊಸೆ ತಮ್ಮ ತಾಯಿ ಡಾ॥ ವಿ.ಟಿ.ಸುಶೀಲಮ್ಮನವರ ಹೆಸರನ್ನು ಉಳಿಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ.

ಡಾ॥ ಕೆ.ಎಸ್.ಜಯರಾಂ ಅವರ ಕಿರಿಯ ಮಗ ಕೆ.ಜೆ.ಕೌಶಿಕ್ ಬಿ.ಬಿ.ಎಂ.ಎಂ.ಬಿ.ಎ.ಪದವಿ ಪಡೆದಿದ್ದು ಬೆಂಗಳೂರಿನ ಖಾಸಗಿ ಕಂಪೆನಿಯೊಂದರಲ್ಲಿ ಉದ್ಯೋಗಿಯಾಗಿದ್ದಾರೆ. ಕೌಶಿಕ್ ಅವರ ಬಾಳಸಂಗಾತಿ ಶ್ರೀಮತಿ ಶಿಲ್ಪ ಇಂಜಿನಿಯರ್ ಆಗಿದ್ದಾರೆ. ಶಿಲ್ಪರವರು ಚಿಕ್ಕಮುಲಗೂಡು ಗ್ರಾಮದ ನಾಗಮಣಿ- ನಾಗರಾಜಪ್ಪ ಅವರ ಮಗಳು.

ಮಂಡ್ಯದ ಬಡಜನತೆಯ ಮನದಾಳದ ದೇವತೆಯಂತಿದ್ದ ಡಾ॥ ವಿ.ಟಿ.ಸುಶೀಲಮ್ಮನವರು 14-9-2000ದಂದು ಅಕಾಲ ಮರಣ



ಹೊಂದಿದರು. ಅವರ ಮಾತೃಹೃದಯ, ಅಂತಃಕರಣದಿಂದ ಉಪಕೃತರಾಗಿದ್ದವರ ಕಣ್ಣುಗಳು ಹನಿಗೂಡಿದುವು.

ಡಾ॥ ಸುಶೀಲಮ್ಮನವರು ನಿಧನರಾದ ಮುಂದಿನ ವರ್ಷದಿಂದ ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಟ್ರಸ್ಟ್‌ವತಿಯಿಂದ ನೀಡುವ ಸೀತಾಸುತ ಪ್ರಶಸ್ತಿಯ ಜೊತೆಗೆ ಉಚಿತವಾಗಿ ಬಡರೋಗಿಗಳಿಗೆ ಔಷಧೋಪಚಾರ ನೀಡುವ ವೈದ್ಯರನ್ನು ಗುರುತಿಸಿ ಅವರಿಗೆ ಡಾ॥ ವಿ.ಟಿ.ಸುಶೀಲಮ್ಮ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ.

ಸೀತಾಸುತ ರವರ ಕಿರಿಯ ಮಗ ಡಾ॥ ಕೆ.ಎಸ್. ಕೃಷ್ಣಪ್ಪನವರು ನ್ಯೂಯಾರ್ಕ್‌ನಲ್ಲಿ ವೈದ್ಯರಾಗಿದ್ದಾರೆ. ಡಾ॥ ಕೆ.ಎಸ್.ಕೃಷ್ಣಪ್ಪನವರ ಧರ್ಮಪತ್ನಿ ಮೀನಾ. ಡಾ॥ ಕೆ.ಎಸ್.ಕೃಷ್ಣಪ್ಪನವರು ಕಳೆದ 30 ವರ್ಷಗಳಿಂದ ನ್ಯೂಯಾರ್ಕ್‌ನಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸೀತಾಸುತರವರ ಮೊದಲನೇ ಮಗಳು ಗೌರಮ್ಮನವರು ಬೆನಮನಹಳ್ಳಿ ಬಿ.ಕೆ. ಕೆಂಪೇಗೌಡರ ಧರ್ಮಪತ್ನಿ. ಎರಡನೇ ಮಗಳು ಯಶೋದಮ್ಮನವರು ಕೋಣಸಾಲೆ ಕಸಿನಿಂಗಪ್ಪನವರ ಕುಟುಂಬದ ಕೆ.ಸಿದ್ದಯ್ಯನವರ ಧರ್ಮಪತ್ನಿ. ಮೂರನೇ ಮಗಳು ಸುವರ್ಣಮ್ಮನವರು ಕನಕಪುರ ತಾಲ್ಲೂಕು ನಾಯಕನಹಳ್ಳಿ ಎನ್.ಟಿ.ಪುಟ್ಟಸ್ವಾಮಿರವರ ಧರ್ಮಪತ್ನಿ. ನಾಲ್ಕನೇ ಮಗಳು ಶಾರದಮ್ಮನವರು ಮಂಡ್ಯ ತಾಲ್ಲೂಕು ಹುಲಿವಾನದ ಛೇರ್ಮನ್ ಸಿದ್ದಪ್ಪನವರ ಮಗ ಜಯರಾಮುರವರ ಧರ್ಮಪತ್ನಿ. ಕಿರಿಯ ಮಗಳು ಗಾಯತ್ರಮ್ಮನವರು ಯಾಚೇನಹಳ್ಳಿ ಪ॥ ಕೆಂಪೀರೇಗೌಡರ ಮಗ ಡಾ॥ ತಿಮ್ಮಯ್ಯನವರ ಧರ್ಮಪತ್ನಿ.

★ ★ ★

## ಶತಾಯುಷಿ ಸಾಹಿತಿ ಸೀತಾಸುತ ಅವರನ್ನು ಕುರಿತು

## ನಾಡೋಜ ಡಾ. ದೇ.ಜವರೇಗೌಡರವರಅಭಿಪ್ರಾಯಗಳು

★ ಶತಾಯುಷಿ ಸಾಹಿತಿ ಸೀತಾಸುತ ಅವರು ರಚಿಸಿರುವ ಕಾವ್ಯಗಳು ದಾಸರ ಕೀರ್ತನೆಗಳ ಶೈಲಿಯಲ್ಲಿವೆ. ಇವುಗಳ ಪ್ರಕಟಣೆಗಳನ್ನು ಹೊರತರಲು ಸರ್ಕಾರ ಮನಸ್ಸು ಮಾಡಬೇಕು.

★ ಸೀತಾಸುತ ಅವರು ಸವೆಸಿದ ಜೀವನ ಕನ್ನಡ ಸಾಹಿತ್ಯ ಕ್ಷೇತ್ರದ ಒಂದು ವಿಸ್ಮಯ ಸಂಗತಿಯಾಗಿದೆ. 70 ವರ್ಷದ ನಂತರ ಅವರು ಸಾಹಿತ್ಯರಂಗವನ್ನು ಸ್ವೀಕರಿಸಿದರು. ಅದ್ವಿತೀಯ ಕೃತಿಗಳನ್ನು ನಾಡಿಗೆ ಅರ್ಪಿಸಿದರು. ರಾಮಾಯಣದಲ್ಲಿ ಬರುವ ಒಂದೊಂದು ಪಾತ್ರಗಳನ್ನು ಅವರು ಬರೆಯುವಾಗ ವಾಲ್ಮೀಕಿ ಬರೆದ ರಾಮಾಯಣದ ಪಾತ್ರಗಳಿಗೆ ಸಮರ್ಥನೆಯನ್ನು ನೀಡಿದ್ದಾರೆ.

★ ಸೀತಾಸುತ ಅವರು ಸಾಹಿತಿಗಳೂ ಅಲ್ಲದೆ ದೊಡ್ಡ ವಿದ್ವಾಂಸರು ಆಗಿದ್ದಾರೆ. ಅವರು ರಾಮಾಯಣದ ಒಂದೊಂದು ಪಾತ್ರಗಳನ್ನು ಬರೆಯುವಾಗ ಗ್ರಾಮೀಣ ಸೊಗಡಿನ ಶೈಲಿಯನ್ನೇ ಉಪಯೋಗಿಸಿದ್ದಾರೆ. ಸರಳ, ಬಿಗಿ ಹಿಡಿತ, ದ್ವಂದ್ವಗಳಿಲ್ಲದಂತೆ ಕೃತಿಗಳನ್ನು ರಚನೆ ಮಾಡಿದ್ದಾರೆ. ಇವರ ಬರವಣಿಗೆಯನ್ನು ಅವಲೋಕಿಸಿದಾಗ ರೂಪಕತೆಗೆ ಹೆಚ್ಚು ಒತ್ತು ನೀಡಿದ್ದಾರೆಂಬುದು ಗೊತ್ತಾಗುತ್ತದೆ.

★ ಅಂದಿನ ದಿನಗಳಲ್ಲೇ ಸಾಹಿತ್ಯದಲ್ಲಿ ಹೊಸ ಬಗೆಯ ಬರವಣಿಗೆಯನ್ನು ನೀಡುವ ಸದುದ್ದೇಶದಿಂದ ಸೀತಾಸುತ ಅವರು 'ಹಿರೋಷೀಮಾ' ಎಂಬ ಕೃತಿಯನ್ನು ಸಹ ರಚಿಸಿದರು. ಇವರ ಜೀವನಚರಿತ್ರೆ ಕುರಿತು ಈವರೆಗೂ ಯಾವುದೇ ಕೃತಿಗಳು ಪ್ರಕಟವಾಗಿಲ್ಲ. ಇದರ ಬಗ್ಗೆ ಕುಟುಂಬ ವರ್ಗದವರು ಆಸಕ್ತಿ ವಹಿಸಿ ಜೀವನ ಚರಿತ್ರೆ ಕೃತಿಯ ರೂಪವನ್ನು ಜನರಿಗೆ ತಲುಪಿಸಬೇಕು.



★ ಸೀತಾಸುತ ಅವರು ಬೌದ್ಧಿಕ ಶಕ್ತಿ ಹಾಗೂ ವೈಚಾರಿಕ ಮನೋಭಾವವನ್ನು ತಮ್ಮ ಎಲ್ಲಾ ಕೃತಿಗಳಲ್ಲೂ ತೋರ್ಪಡಿಸಿದ್ದಾರೆ. ಇದರ ಬಗ್ಗೆ ಅನೇಕ ಸಾಹಿತಿಗಳೂ ಕೂಡ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

( 14-7-2007ರಂದು ಮಂಡ್ಯದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ನಡೆದ ಸೀತಾಸುತ ಹಾಗೂ ಡಾ|| ವಿ.ಟಿ. ಸುಶೀಲ ಜಯರಾಂ ಹೆಸರಿನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಡಾ. ದೇ.ಜ.ಗೌ ಅವರು ಉದ್ಘಾಟಿಸಿ ಮಾತನಾಡಿದಾಗ ಮೂಡಿ ಬಂದ ಅಭಿಪ್ರಾಯಗಳು)

# ಸೀತಾಸುತರ ಕೃತಿಗಳು

## ರಾಮಾಯಣದಲ್ಲಿ ಪುರುಷ ಪಾತ್ರಗಳು
## (ಬಿಡಿ ಬಿಡಿಯಾಗಿ)

| | | | |
|---|---|---|---|
| 1. | ಹನುಮಂತ ಮತ್ತು ಶರಣ ಶ್ರೀರಾಮ | - | 8-00 |
| 2. | ಇಂದ್ರ ಮತ್ತು ದಶರಥ | - | 8-00 |
| 3. | ಮಹಾತ್ಮ ಭರತ ಮತ್ತು ಶತ್ರುಘ್ನ | - | 7-00 |
| 4. | ಲಕ್ಷ್ಮಣ, ಪಕ್ಷಿಗಳು, ಶಾಪಗ್ರಸ್ತ ಸುರರು | - | 7-00 |
| 5. | ರಾಮಾಯಣದ ಋಷಿಗಳು | - | 7-00 |
| 6. | ರಾಮಾಯಣದ ವಾನರರು | - | 8-00 |
| 7. | ರಾಮಾಯಣದ ರಾಕ್ಷಸರು | - | 8-00 |
| 8. | ಮಹಾನುಭಾವ ರಾವಣ ಮತ್ತು ಪುರುಷೋತ್ತಮ ಶ್ರೀರಾಮ | - | 10-00 |
| 9. | ರಾಮಾಯಣದಲ್ಲಿನ ಪುರುಷ ಪಾತ್ರಗಳು ಸಂಪುಟ-1, 1985 | - | 70-00 |

## ರಾಮಾಯಣದಲ್ಲಿ ಸ್ತ್ರೀ ಪಾತ್ರಗಳು
## (ಬಿಡಿ ಬಿಡಿಯಾಗಿ)

| | | | |
|---|---|---|---|
| 10. | ಅಹಲ್ಯೆ | - | 5-00 |
| 11. | ಕೌಸಲ್ಯ-ಸುಮಿತ್ರೆ | - | 7-00 |
| 12. | ಕೈಕೇಯಿ-ಮಂಥರೆ | - | 7-00 |
| 13. | ಸೀತೆ-ಸೀತಾಸಂಹಿತೆ | - | 10-00 |
| 14. | ಊರ್ಮಿಳೆ, ಮಾಂಡವಿ-ಶೃತಕೀರ್ತಿ | - | 9-00 |
| 15. | ತಪಸ್ವಿನಿಯರು ಮತ್ತು ವಾನರ ಸ್ತ್ರೀಯರು | - | 6-60 |
| 16. | ರಾಕ್ಷಸ ಸ್ತ್ರೀಯರು | - | 12-00 |
| 17. | ರಾಮಾಯಣದಲ್ಲಿ ಸ್ತ್ರೀ ಪಾತ್ರಗಳು ಸಂಪುಟ-1, 1983 | - | 50-00 |
| 18. | ಸೀತಾದರ್ಶನ | - | 9-00 |



| | | | |
|---|---|---|---|
| 19. | ಕಲಾಕಲಿಗಳ ಕರೆ | - | 10-50 |
| 20. | ಭ್ರಷ್ಟಾಚಾರಕ್ಕೆ ಬಲಿ | - | 10-00 |
| 21. | ಹಿರೋಷೀಮಾ (ಆಧುನಿಕ ಪುರಾಣ, ಖಂಡಕಾವ್ಯ) | - | 20-00 |
| 22. | ಊರ್ಮಿಳಾದರ್ಶನ (ದ್ವಿತೀಯ ಮುದ್ರಣ-1989) | - | 45-00 |
| 23. | ಕುಣಿಯೋಣ ಬಾ ಚನ್ನೆ (ಕವನ ಸಂಕಲನ) | - | 6-00 |
| 24. | ಹಮ್ಮಿನ ಹಾಡು (ಕವನ ಸಂಕಲನ) | - | 6-00 |
| 25. | ಒಳದನಿ | - | 6-00 |
| 26. | ದಾರಿತೋರೋ ಗುರುವೇ | - | 6-00 |
| 27. | ನವೀನ ದೃಷ್ಟಿಯಲ್ಲಿ ಶ್ರೀ ವಾಲ್ಮೀಕಿ ರಾಮಾಯಣ | - | 20-00 |
| 28. | ಓದೋ ಹುಡುಗ (ವಿದ್ಯಾರ್ಥಿ ಮಾರ್ಗದರ್ಶಿ) | - | 10-50 |
| 29. | ಮಥಿತಾರ್ಥದಲ್ಲಿ ಸಂಕ್ಷಿಪ್ತ ವಾಲ್ಮೀಕಿ ರಾಮಾಯಣ | - | 15-00 |
| 30. | ಪಾರಾಯಣದ ರಾಮಾಯಣ | - | 16-00 |
| 31. | ಭಗವಂತನ ಭಟ್ಟಂಗಿ (ಕವನ ಸಂಕಲನ) | - | 8-00 |
| 32. | ಬರಗಾಲ ಬರಿಗೈಯಲ್ಲಿ ಬರಲಿಲ್ಲ (ಕಾದಂಬರಿ) | - | 7-00 |
| 33. | ದೇವಗಂಗೆ ಕಾವೇರಿ ರಾಮಾಯಣ | - | |